…ಡ್ಡಮೇಟಿಯವರ

ಕರ್ನಾಟಕ ಮಹಿಮ್ನಃ ಸ್ತೋತ್ರ

ವ್ಯಾಖ್ಯಾನಕಾರರು :

ಸಿ. ವ. ಚೆನ್ನಬಸವೇಶ್ವರ



ಕರ್ನಾಟಕ ಮಹಿಮ್ನಃ ಸ್ತೋತ್ರ

*

ಶ್ರೀ ದೊಡ್ಡಮೇಟಿಯವರ

ಕರ್ನಾಟಕ ಮಹಿಮ್ನಃ ಸ್ತೋತ್ರ

ವ್ಯಾಖ್ಯಾನಕಾರರು :

ಸಿ. ವ. ಚನ್ನಬಸವೇಶ್ವರ

ಮುನ್ನುಡಿಕಾರರು

ಅ. ನ. ಕೃ

★

೧೯೫೭

ಎರಡನೆ ಮುದ್ರಣ ೧೯೫೭
ಮೊದಲನೆ ಮುದ್ರಣ ೧೯೫೩

ಶಿಲ್ಪಿ :
ಶ್ರೀ ಕೊಂಡಾಚಾರಿ

ಬೆಲೆ : ಎರಡು ರೂಪಾಯಿ

ಮಾರಾಟಗಾರರು :
ಸ್ಟ್ಯಾಂಡರ್ಡ್ ಬುಕ್ ಡಿಪೋ
ಅವೆನ್ಯೂರೋಡ್ : : ಬೆಂಗಳೂರು-೨

ಮುದ್ರಕರು :
ಎಂ. ಎಸ್. ಚಿಂತಾಮಣಿ, ಬಿ. ಎಸ್‌ಸಿ.,
ಈಸ್ಟರ್ನ್ ಪ್ರೆಸ್,
ಜಯಚಾಮರಾಜ ಪೇಟೆ, ಬೆಂಗಳೂರು-೨

*

ಸ್ವಗತ

ಈ ಸ್ತೋತ್ರಗಳನ್ನು ನಾನು ಹೇಳಲಿಲ್ಲ. ಚಿಂತನೆಯಲ್ಲಿ ಚಿಗುರೊಡೆದ ಈ ಮಾತುಗಳನ್ನು "ಕರ್ನಾಟಕ ಮಹಿಮ್ನಃ ಸ್ತೋತ್ರ" ಎಂದು ಕರೆದಿದ್ದೇನೆ ಅಷ್ಟೇ. ಈ ಸ್ತೋತ್ರಗಳ ವೈಖರಿಗೆ ನಾನು ನಿಮಿತ್ತ ಮಾತ್ರ; ಇವುಗಳ ಪ್ರೇರಕಳು ಮಂತ್ರಮಯಿ ಕರ್ನಾಟಕ ಮಾತೆ! ಈ ಸ್ತೋತ್ರಗಳೆಲ್ಲ ಚಿಂತನೆಯ ಆಕೃತಿ ಮಾತ್ರ. ಇವುಗಳ ಶಬ್ದ ಆ ಚಿಂತನೆಯ ಸ್ಥೂಲಪ್ರಕೃತಿ; ಈ ಪ್ರಕೃತಿಯ ಅಧ್ಯಕ್ಷತೆ ವಹಿಸಿದ ಪುರುಷನೆ ಇವುಗಳ ಅರ್ಥ. ಎಂದರೆ ಈ ಪ್ರಕೃತಿ ಪುರುಷ ದರ್ಶನವೆ ಈ ಸ್ತೋತ್ರಗಳ ಪುರುಷಾರ್ಥವಲ್ಲ; ಅವುಗಳನ್ನು ಮೀರಿದ ಅನುಭವ – ಪುರುಷೋತ್ತಮನೆ ಗಂತವ್ಯ – ಮಂತವ್ಯನೆಂದರಿತರೆ ಸಾಕು. ಇದು ಆಹಂಕೃತಿಯಲ್ಲ; ಭಾವಸಂಸ್ಕೃತಿ.

ಕರ್ನಾಟಕ ದರ್ಶನದ ನಮ್ಮ ದೃಷ್ಟಿ ಇಂದು ದೈವಿಕವಾಗುವುದು ಅಗತ್ಯವಿದ್ದಂತೆ ನಮ್ಮ ಮನಃಶುದ್ಧಿಗಾಗಿ, ಕಾರ್ಯಸಿದ್ಧಿಗಾಗಿ ಈ ಸ್ತೋತ್ರಗಳು ಮಂತ್ರವಾಗುವುದು ಅವಶ್ಯ. ಇವುಗಳ ಮನನದಿಂದ ಕರ್ನಾಟಕದ ದಿವ್ಯದರ್ಶನ ಸಾಧ್ಯವಾದರೆ ಈ ಮಾತುಗಳೆಲ್ಲ ಜ್ಯೋತಿಗಳು. ಕನ್ನಾಡಿನ ಒಂದು ಸ್ವತ್ವಶುದ್ಧಿಗಾಗಿ, ಸತ್ವಸಿದ್ಧಿಗಾಗಿ ಈ ಸ್ತೋತ್ರಮಂಡಲದಲ್ಲಿ ಶ್ರದ್ಧೆ ತಾಳಬೇಕು. ಕನ್ನಡ ಸಾವಿತ್ರಿ ಈ ಮಾತು ಮನನ ಮಾಡುವ ಧೀಶಕ್ತಿಯನ್ನು ನಮಗೆ ಕರುಣಿಸಲಿ, ಕನ್ನಡ ಗಾಯತ್ರಿ ತನ್ನ ಶಕ್ತಿಪುತ್ರರಿಗೆ ಕರುಣಾಕವಚ ತೊಡಿಸಿ ಕಾಯಲಿ!

ಕರ್ನಾಟಕಾಂಬೆ ತನ್ನ ವಿಚ್ಛೇದದ ಮುಕ್ತಾಯ ನಾಟಕದ ಪ್ರಥಮಾಂಕವನ್ನು ಪೂರ್ತಿಗೊಳಿಸಿದಳು. ಅವಳ ಸಂಕಲ್ಪ ಇನ್ನೂ ಇನ್ನೂ ಸಿದ್ಧಿಸಿ ಮಾತೆಯ ದಿವ್ಯ ದರ್ಶನದ ಪರಿಪೂರ್ಣತೆಯ ಲೀಲೆ ಲೋಕವನ್ನೆಲ್ಲ ಬೆಳಗ ಬೇಕಾಗಿದೆ. ಅವಳ ಇಂದಿನ ಏಕತ್ವವು ಕೇವಲ ನೆಲದ್ದು ಮಾತ್ರ. ಪ್ರಾಣ, ಮನಗಳ ಏಕತ್ವವು ಇನ್ನೂ ಸಾಧಿಸಬೇಕಾದ ಸಿದ್ಧಿ.

ಇದಕ್ಕಾಗಿ ಕನ್ನಡಿಗರಿಗೆ ಕೈಪಿಡಿಯಾಗಿ ಈ ದ್ವಿತೀಯ ಮುದ್ರಣ ಹೊರ ಬಂದಿದೆ. ಇದೂ ಆಕೆಯ ಇಚ್ಛೆಯೇ ಸರಿ. ಹಾಗಿಲ್ಲವಾದಲ್ಲಿ ಶ್ರೀ ಚೆನ್ನಬಸವೇಶ್ವರರ ಹೃದಯದಿಂದ ಹೊರಬಿದ್ದ ಈ ವ್ಯಾಖ್ಯಾನ ಇಷ್ಟು ಶ್ರೇಷ್ಠವಾಗಿ ಶ್ರೀ ಕೊಂಡಾಚಾರಿಯವರ ರೇಖಾ ಚಿತ್ರಗಳು ಸಾರ್ಥಕತೆಯನ್ನು ಪಡೆದು ಹೊರಬೀಳುತ್ತಿರಲಿಲ್ಲ. ಎಲ್ಲಕ್ಕೂ ಮಿಗಿಲಾಗಿ ಕನ್ನಡ ನಾಡಿನ ಹಿರಿಯ ಸಾಹಿತಿಗಳಲ್ಲೊಬ್ಬರಾದ ಶ್ರೀ ಅ. ನ. ಕೃಷ್ಣರಾಯರ ಮುನ್ನುಡಿ ಮಾತೆಯ ಕಂಠಾಭರಣವಾಗಿ ಮೂಡುತ್ತಿರಲಿಲ್ಲ. ಇವರೆಲ್ಲರಿಗೆ ಕೃತಜ್ಞತೆಯನ್ನು ಸಮರ್ಪಿಸಲು ನಾನಾರು! ಮಾತೆಯ ಮಮತೆ ಇವರೆಲ್ಲರನ್ನು ಆಶೀರ್ವದಿಸಲಿ.

೧೫-೮-೧೯೫೭ **ಅಂದಾನಪ್ಪ ದೊಡ್ಡಮೇಟಿ**

ಮುನ್ನುಡಿ

ಹರಿದು ಹಂಚಿಹೋಗಿದ್ದ ಕನ್ನಡನಾಡು ಒಂದುಗೂಡಬೇಕೆಂಬ ಅರ್ಧಶತಮಾನದ ಬಯಕೆ ೧೯೫೬, ನವೆಂಬರ್ ತಿಂಗಳಲ್ಲಿ ಈಡೇರಿತು. ಕನ್ನಡಿಗರ ಕನಸು ನನಸಾಗಲು ಈ ಕಾಲದಲ್ಲಿ ತ್ರಿಕರಣಪೂರ್ವಕವಾಗಿ ದುಡಿದ ಕನ್ನಡ ಭಕ್ತರ ಸೇವೆ, ನಿಷ್ಠೆ, ಹಾಗೂ ಭಗವತಿಯ ದಿವ್ಯಾನುಗ್ರಹವೇ ಕಾರಣವೆನ್ನಬಹುದು. ರಾಜಕೀಯ ದೃಷ್ಟಿಯಿಂದ ಕನ್ನಡಿಗರ ಏಕೀಕರಣ ಸಾಧಿಸಿದ್ದಾಗಿದೆ – ಇದಕ್ಕೂ ಹೆಚ್ಚಿನ ಕೆಲಸಕ್ಕೆ ರಂಗವೀಗ ಸಿದ್ಧವಾಗಿದೆ. ಒಂದುಗೂಡಿರುವ ಕನ್ನಡಿಗರು ಒಂದಾಗಿ ನಿಲ್ಲುವ, ದುಡಿಯುವ ಮನೋಭಾವ ಬೆಳಸಬೇಕಾಗಿದೆ; ಸಣ್ಣಪುಟ್ಟ ಓರೆಕೋರೆಗಳನ್ನು ತಿದ್ದಿ ಕನ್ನಡಿಗರ ಮನೆ, ಮನ ಒಂದು ಎಂದು ಸ್ಥಾಪಿಸಬೇಕಾಗಿದೆ.

ಈ ಸಂಧಿಕಾಲದಲ್ಲಿ ಶ್ರೀ ದೊಡ್ಡಮೇಟಿಯವರ ವ್ಯಾಖ್ಯಾನ ಸಹಿತವಾದ 'ಕರ್ನಾಟಕ ಮಹಿಮ್ನಃ ಸ್ತೋತ್ರ' ಹೊರಬೀಳುತ್ತಿದೆ. ಅಲ್ಪ ಶಕ್ತಿ, ಅಲ್ಪ ವಿಚಾರ, ಅಲ್ಪ ಈಪ್ಸಿತಗಳನ್ನೇ ಮಾನವ ನೆರೆನಂಬಿ ತನ್ನ ಸಮುಸ್ತ ಸಾಧನೆ, ಚಟುವಟಿಕೆಗಳ ಕ್ರತುಶಕ್ತಿಯನ್ನು ಮರೆತುದೇ ಅವನ ಅವನತಿಯ ಮೂಲ ಕಾರಣವಾಯಿತು. ಮಾನವ ಮಹಾಶಕ್ತಿಯೊಂದರ ಅಭಿವ್ಯಕ್ತರೂಪು. ತನ್ನ ಸಾಧನೆ, ನಿಷ್ಠೆ, ಭಕ್ತಿಯಿಂದ ಅವನು ಅಲ್ಪ ಬಲನೂ ಆಗಬಹುದು, ಮಹಾಬಲನೂ ಆಗಬಹುದು. ಮಹತ್ಪ್ರಮಾಣದಲ್ಲಿ ಅವನು ಶಕ್ತಿಯನ್ನು ದೊರಕಿಸಿಕೊಳ್ಳಬೇಕು – ಆಶಕ್ತಿಯನ್ನು ಲೋಕಕಲ್ಯಾಣಕ್ಕೆ, ಮಾನವಾಂತರ್ಗತ ಚೇತನದ ಪೂರ್ಣಾಭಿವ್ಯಕ್ತಿಗೆ ನಿವೇದಿಸಬೇಕು ಎಂಬ ಭಾವನೆಯೇ ಶ್ರೀ ದೊಡ್ಡಮೇಟಿಯವರ ಕಾವ್ಯದ ಪ್ರೇರಕಶಕ್ತಿ.

ಕನ್ನಡಕ್ಕಾಗಿ, ಕನ್ನಡನಾಡಿಗಾಗಿ ದುಡಿಯುವವರು, ಮರುಗುವವರು, ಉತ್ಕರ್ಷಕ್ಕಾಗಿ ಹಾತೊರೆಯುವವರು, ಅದರ ಸಮಸ್ಯೆಗಳ ವಿಶ್ಲೇಷಣಕ್ಕಾಗಿ ಶ್ರಮಿಸುವವರು ವಿರಳ. ಕನ್ನಡನಾಡು ಇಂದಿಗೂ ಕರ್ಮಪಂಥವನ್ನು ಕಟ್ಟಬೇಕಾಗಿದೆಯಲ್ಲದೆ ಭಾವಪಂಥವನ್ನೂ ಕಟ್ಟಬೇಕಾಗಿದೆ. ಕರ್ನಾಟಕ

ವೆಂಬುದು ಕೇವಲ ಭೌಗೋಲಿಕ ಪ್ರದೇಶವಲ್ಲ – ಅದು ಒಂದು ಕಾವ್ಯಮಯ ಧೀಮಯ, ಲೋಕೋತ್ತರ ಭಾವನೆ. ಈ ಭಾವನೆ ಜನತೆಯ ಮನಸ್ಸಿನಲ್ಲಿ ಮೂಡಬೇಕಾದುದೂ ಅಗತ್ಯ ; ಅದು ನಿಶ್ಚಿತರೀತಿಯಲ್ಲಿ ಕಾರ್ಯೋನ್ಮುಖ ವಾಗಬೇಕಾದುದೂ ಅವಶ್ಯಕ.

ಖಂಡ ಖಂಡವಾಗಿದ್ದ ಕನ್ನಡನಾಡು ಅಖಂಡವಾಗಬೇಕು ಎಂದು ಬಯಸುತ್ತಿದ್ದ ಕಾಲದಲ್ಲಿ, ಕರ್ನಾಟಕ ಏಕೀಕರಣ ಮಂತ್ರೋಚ್ಚಾರಣೆ ಅಪರಾಧವಾಗಿದ್ದ ಕಾಲದಲ್ಲಿ ಅದಕ್ಕಾಗಿ ತನು, ಮನ, ಧನ ತೆತ್ತುನಿಂತವರು, ಆಳರಸರ ಕ್ರೋಧಕ್ಕೆ ಮಣಿಯದೆ, ವಿಲೋಭನೆಗೆ ಮರುಳಾಗದೆ ಕನ್ನಡದ ಹೆಚ್ಚಳವನ್ನು ಹಿಡಿದೆತ್ತಿದವರು ಶ್ರೀ ದೊಡ್ಡಮೇಟಿಯವರು. ರಾಷ್ಟ್ರದ ಸ್ವಾತಂತ್ರ್ಯಕಹಳೆ ಮೊಳಗಿದಂದಿನಿಂದ ಆ ರಣರಂಗದಲ್ಲಿ ಧುಮ್ಮಿಕ್ಕಿ ಇವರು ಅನೇಕ ಬಾರಿ ಸೆರೆಮನೆಯ ವಾಸವನ್ನನುಭವಿಸಿದರು. ಆಗರ್ಭ ಶ್ರೀಮಂತರಾದ ಶ್ರೀ ದೊಡ್ಡಮೇಟಿಯವರು ತಮ್ಮ ಜೀವಮಾನದ ಅತ್ಯಮೌಲ್ಯಕಾಲದಲ್ಲಿ ಅರವತ್ತು ತಿಂಗಳು ಸೆರೆಮನೆವಾಸ ಅನುಭವಿಸಿದರು ; ಸ್ವಾತಂತ್ರ್ಯಸಂಗ್ರಾಮ ಅಬಾಧಿತವಾಗಿ ಮುಂದುವರೆಯಲು ಸಹಸ್ರಾರು ರೂಪಾಯಿಗಳನ್ನು ವ್ಯಯಮಾಡಿದರು. ೧೯೫೩ – ೫೪ ನೆಯ ಇಸವಿಗಳಲ್ಲಿ ಜಕ್ಕಲಿ ಮತ್ತು ಆದವಾನಿಯಲ್ಲಿ ಇವರು ನಡೆಸಿದ 'ಕರ್ನಾಟಕ ರಾಜ್ಯ ನಿರ್ಮಾಣ ಶಿಬಿರ'ಗಳು ಇವರ ಉಜ್ಜ್ವಲಸೇವೆಯ ಪ್ರತೀಕಗಳಾಗಿವೆ. ೧೯೪೮ ರಲ್ಲಿಯೇ ಶ್ರೀ ದೊಡ್ಡಮೇಟಿಯವರು ಮುಂಬಯಿ ಅಸೆಂಬ್ಲಿಯಲ್ಲಿ ಕರ್ನಾಟಕ ಏಕೀಕರಣ ನಿರ್ಣಯವನ್ನು ಮಂಡಿಸಿದ್ದಲ್ಲದೆ, ನಿರ್ಣಯದ ಬಗ್ಗೆ ಕನ್ನಡದಲ್ಲಿಯೇ ಮಾತನಾಡಿ ಅಧಿಕಾರವರ್ಗದವರ ಕಣ್ಣು ತೆರೆಯಿಸಿದರು.

ಕರ್ನಾಟಕ ಪ್ರಾಂತ್ಯ ನಿರ್ಮಾಣದ ಮಾತು ಆರಂಭವಾಗಿ ಅರ್ಧ ಶತಮಾನವಾದರೂ ಅದು ಕೈಗೂಡುವ ಕಾಲ ಬರಲಿಲ್ಲ. ೧೯೪೭ ರಲ್ಲಿ ಭಾರತದ ದಾಸ್ಯವಿಮೋಚನೆಯಾದಾಗ ಕನ್ನಡನಾಡಿನ ಈ ಸಮಸ್ಯೆಯೂ ತಾನೇ ತಾನಾಗಿ ಬಿಡುಗಡೆಯಾಗುವುದೆಂದು ಎಲ್ಲರೂ ನಂಬಿದರು. ಆದರೆ ದುರದೃಷ್ಟವಶಾತ್ ಈ ಪ್ರಶ್ನೆ ಮುಂದೆ ಬೀಳುತ್ತ ಬಂದು ೧೯೫೬ರ ನವೆಂಬರ ತಿಂಗಳಲ್ಲಿ – ಮಹಾಚುನಾವಣೆಯ ಮುನ್ನ ಪರಿಹಾರ ಹೊಂದಿತು.

ಕನ್ನಡನಾಡು ಕಟ್ಟುವುದಕ್ಕೆ ಸತತವಾಗಿ ಶ್ರಮಿಸಿದ್ದ ಶ್ರೀ ದೊಡ್ಡ ಮೇಟಿಯವರ ಮನಸ್ಸಿನಲ್ಲಿ ಒಂದು ಮಹಾಪ್ರಶ್ನೆ ಎದ್ದಿತು. ಕನ್ನಡಿಗರ ನ್ಯಾಯಬದ್ಧವಾದ ಹಕ್ಕುಬಾಧ್ಯತೆಗಳಿಗೆ ಹೀಗೆ ಧಕ್ಕೆ ಒದಗುತ್ತಿರುವುದೇಕೆ ? —ಸ್ವಯಂ ಗಾಂಧೀಜಿಯವರಿಂದ ಸಣ್ಣಪುಟ್ಟ ಕಾಂಗ್ರೆಸ್ ನಾಯಕರವರೆಗೆ ಎಲ್ಲರೂ ಕನ್ನಡಿಗರ ಕೋರಿಕೆ ನ್ಯಾಯಬದ್ಧವಾದದ್ದೆಂದು ಒಪ್ಪಿಕೊಂಡಿದ್ದರೂ ಅಧಿಕಾರಸೂತ್ರಗಳನ್ನು ವಹಿಸಿಕೊಂಡಿದ್ದವರು ಕನ್ನಡಿಗರನ್ನು ಮೆಟ್ಟಿ ತುಳಿಯುತ್ತಿರುವುದೇಕೆ ? – ಕನ್ನಡಿಗರ ಸಂಕಲ್ಪಶಕ್ತಿ, ಕ್ರತುಶಕ್ತಿಯಲ್ಲಿ ಯಾವುದೋ ನ್ಯೂನಾತಿರೇಕವಿರಬೇಕು – ಇದು ಕೇವಲ ರಾಜಕಾರಣದಿಂದ, ಮನವಿ ಬಿನ್ನಹ ಪ್ರದರ್ಶನಗಳಿಂದ ಬಗೆಹರಿಯುವುದಿಲ್ಲ. ಕನ್ನಡಿಗರ ಸುಪ್ತ ಕುಂಡಲಿನಿಯ ಶಕ್ತಿ ಜಾಗೃತವಾಗಿ ವಿಲಸತ್ಪ್ರಭೆಯಿಂದ ವಿರಾಜಿಸಬೇಕು. ಈ ಪ್ರಭಾಭಿವ್ಯಕ್ತಿಗೆ ಕನ್ನಡನಾಡಿನ ವ್ಯಷ್ಟಿ ಸ್ಯಮಷ್ಟಿ, ಧ್ಯಾನ, ಸಾಧನಾಮಗ್ನರಾಗ ಬೇಕೆಂಬ ತಿಳಿವು ಬಿತ್ತರಿಸಿತು. ಶ್ರೀ ದೊಡ್ಡಮೇಟಿಯವರು ಈ ಮಜಲು ಬಹಳ ಹಿಂದೆಯೇ ಮುಟ್ಟಿದ್ದರು. ರಾಜಕಾರಣಕ್ಕೂ ಧರ್ಮದ ಪುಟಬೇಕು ಎಂದು ಹೇಳಿದ್ದ ತಿಲಕರ, ಗಾಂಧೀಜಿಯವರ ಅಮರಸಂದೇಶ ಶ್ರೀ ದೊಡ್ಡ ಮೇಟಿಯವರ ಚಿತ್ತದಲ್ಲಿ ನೆಲಸಿತ್ತು. ಆ ಕುಡಿ ಮೊಳೆತು ಹೆಮ್ಮರವಾಗಿ ಬೆಳೆದುದು ೧೯೪೦ರ ತರುವಾಯ ; ಅದೇ ವರ್ಷ ಶ್ರೀ ದೊಡ್ಡಮೇಟಿ ಯವರಿಗೆ ಪ್ರಥಮಬಾರಿ ಭಗವಾನ್ ಶ್ರೀ ಅರವಿಂದರ ದರ್ಶನವಾಯಿತು. ಅವರು ಅರಸುತ್ತಿದ್ದ ಗುರಿ – ಅದನ್ನು ಸಾಧಿಸುವ ಮಾರ್ಗ ಎರಡೂ ಸುಸ್ಪಷ್ಟವಾಗಿ ಎದುರುನಿಂತವು.

ಈ ಭಾವಾನುಭಾವದ, ವಿಚಾರಮಂಥನದ, ಉತ್ಕಟಾಕಾಂಕ್ಷೆಯ ವಾಣಿಯಾಗಿ ಮಹಿಮ್ನಃ ಸ್ತೋತ್ರದ ರೂಪರೇಷೆ ಸಿದ್ಧವಾಗುತ್ತ ಬಂದಿತು. ಮಹಿಮ್ನಃ ಸ್ತೋತ್ರ ಕಾವ್ಯವೂ ಹೌದು ; ದರ್ಶನವೂ ಹೌದು. ಕವಿ ಸಾಧಕನಾಗಿ ಕ್ರಾಂತಿಯ ಅಗ್ನಿಕುಂಡದಲ್ಲಿ ಬಿದ್ದು ಪುಟಗೊಂಡು ಸಿದ್ಧನಾಗಿ ಶಾಂತಿಯ ಮಧುರ ಮಂದಾನಿಲವನ್ನನುಭವಿಸುತ್ತಿದ್ದಾನೆ. ಇದು ಕಾವ್ಯ ಬರೆಯುವ ಚಟಕ್ಕಾಗಿ, ಕೀರ್ತಿಕಾಮನೆಯಿಂದ ರಚಿತವಾದ ಕೃತಿಯಲ್ಲ. ಭಾವಗಳು ತಾವಾಗಿಯೇ ಕವಿವಾಣಿಯನ್ನಾಶ್ರಯಿಸಿ ದಿವ್ಯರೂಪವನ್ನು ಹೊತ್ತು ನಿಂತಿವೆ.

ಕವಿ ಶ್ರೀ ದೇವಿಯ ಆರಾಧಕನಾಗುವುದು, ಆಕೆಯ ಕೃಪಾಭಿಕ್ಷು ವಾಗುವುದಕ್ಕೂ ಒಂದು ಪ್ರಬಲ ನಿಮಿತ್ತವಿದೆ. ಕನ್ನಡನಾಡು ಶ್ರೀ ದೇವಿ ಕ್ಷೇತ್ರ – ಆ ನಾಡನ್ನು ಕಟ್ಟುವ ಯೋಧ ದೇವೀಭಕ್ತನಾಗುವುದು ಅನಿವಾರ್ಯ. ಆಕೆ ಕನ್ನಡನಾಡಿನ ಹಲವೆಡೆಗಳಲ್ಲಿ ಹಲವು ರೂಪಿನಿಂದ ಪ್ರಕಟವಾಗಿದ್ದಾಳೆ – ಹಂಪೆ – ಭುವನೇಶ್ವರಿ; ಮೈಸೂರು – ಚಾಮುಂಡೇಶ್ವರಿ; ಧಾರವಾಡ – ರೇಣುಕಾಂಬಾ; ಮುನೀರಾಬಾದ್ – ಹುಲಿಗೆವ್ವ; ಕೊಲ್ಲೂರು – ಮೂಕಾಂಬಿಕೆ; ಶಿರಸಿ – ಮಾರಿಕಾಂಬೆ; ಬಾದಾಮಿ – ಬನಶಂಕರಿ; ಶೃಂಗೇರಿ – ಶಾರದೆ; ಸಿದ್ಧಪರ್ವತ – ಅಂಬಾ ಭವಾನಿ; ಗೋಕರ್ಣ – ಭದ್ರಕರ್ಣಿಕೆ. — ಈ ದಶರೂಪವನ್ನೂ ದಶಾವತಾರವನ್ನೂ ಕವಿ ಕಂಡಿದ್ದಾರೆ. ಅವರ ಆ ದರ್ಶನ ಫಲವೇ ಮಹಿಮ್ನಃ ಸ್ತೋತ್ರ.

ಏಕಳೂ, ಅನೇಕಳೂ ಶಕ್ತಿರೂಪಿಣಿಯೂ ಆದ ಮುಕ್ತ್ಯಂಗನೆಯ ವಿವಿಧ ರೂಪ, ವರ್ಣ, ವಿಲಾಸ, ವಿಭ್ರಮಗಳನ್ನು ಕವಿ ಕಂಡಿದ್ದಾರೆ. ಒಮ್ಮೆ ಲಾವಣ್ಯಮಯಿಯಾದ ಲಲಿತೆ, ಒಮ್ಮೆ ಮಹಾಕಾಳಿಯಾಗುತ್ತಾಳೆ; ಒಮ್ಮೆ ರಾಜರಾಜೇಶ್ವರಿಯಾದವಳೇ ಇನ್ನೊಮ್ಮೆ ದುರ್ಗೆಯಾಗುತ್ತಾಳೆ; ಒಮ್ಮೆ ಮಾತರಿಯದ ಮೂಕಿ ಮಹಾಸರಸ್ವತಿಯಾಗುತ್ತಾಳೆ. ಈ ಷೋಡಶ ಕಳೆಗಳ ಸಮಗ್ರ ಚೈತನ್ಯವೇ ಶ್ರೀದೇವಿ – ಶ್ರೀಮಾತೆ. – ಅದನ್ನು ತೆರೆದ ಕಣ್ಣಿಂದ ತೆರೆದ ಮನದಿಂದ ನೋಡಿರುವ ಕವಿ ಧನ್ಯ.

ಕವಿಯ ಭಾವನೆಗಳನ್ನು ಯೋಗ್ಯ ರೀತಿಯಲ್ಲಿ ಅರ್ಥಮಾಡಿಕೊಳ್ಳಲು ಅದರ ಸುಪ್ತವಿಚಾರದ ವಿವರಣೆ ಅಗತ್ಯವಿತ್ತು. ಆ ಕೆಲಸ ನಿರ್ವಹಿಸಿರುವವರು ಶ್ರೀ ಸಿ. ವ. ಚನ್ನಬಸವೇಶ್ವರ. ದರ್ಶನಪಾಂಡಿತ್ಯಕ್ಕಿಂತಲೂ ಹಿರಿದಾದುದು ದರ್ಶನಸಿದ್ಧಿ. ಪಾಂಡಿತ್ಯ, ಸಿದ್ಧಿಗಳೆರಡೂ ಬೆರತರಂತೂ ಜೇನಿಗೆ ಹಾಲು ಬೆರಸಿದಂತೆ. ಶ್ರೀ ಅರವಿಂದರ ಪಾದಾರಾವಿಂದದಲ್ಲಿ ಆಶ್ರಯ ಪಡೆದಿರುವ ಶ್ರೀ ಚನ್ನಬಸವೇಶ್ವರರು ಈ ವ್ಯಾಖ್ಯಾನದ ಮೂಲಕ ತಮ್ಮ ಗುರುಕಾಣಿಕೆಯನ್ನೊಪ್ಪಿಸಿದ್ದಾರೆ. ಅದೊಂದು ತೀರದ ಋಣ – ಆ ಋಣದಿಂದ ಮುಕ್ತನಾಗಲು ಸಾಧ್ಯವೇ ? – ಮುಕ್ತನಾಗಬೇಕೆಂಬ ಬಯಕೆಯೂ ಅಪರಾಧವಲ್ಲವೇ ? ಸಹಸ್ರ ಸ್ರೋತವಾಗಿ ಹರಿದಿರುವ ಅವರ ವಿಚಾರಧಾರೆ,

ಮೊನೆಯಲುಗಿನಂಥ ವಿಮರ್ಶನ ಶಕ್ತಿ, ತನುಮನವನ್ನದ್ದಿದ ಕೇವಲಾದ್ವೈತ ಭಾವ ಕನ್ನಡಕ್ಕೊಂದು ಶ್ರೇಷ್ಠ ಕಾಣಿಕೆ.

ಸಾಹಿತ್ಯ, ದರ್ಶನದ ಈ ಮಹಾಗ್ರಂಥಕ್ಕೆ ತಮ್ಮ ಕಲಾದೀಧಿತಿಯಿಂದ ಶೋಭೆ ಕೊಟ್ಟಿರುವವರು ಕಿರಿಯ ಕಲಾವಿದ ಶ್ರೀ ಕೊಂಡಾಚಾರಿ. ಅವರ ಕಲ್ಪನಾ ವಿಲಾಸ, ಸೂಕ್ಷ್ಮ ರೇಖಾವಿನ್ಯಾಸ, ಮನಂಬುಗುವ ಪರಿಶುದ್ಧ ಕ್ರಮ ಸೌಂದರ್ಯದಧಿದೇವಿಯಾದ ಶ್ರೀಮಾತೆಗೆ ತಿಲಕವಿಟ್ಟಂತಿದೆ.

‘ಕರ್ನಾಟಕ ಮಹಿಮ್ನಃ ಸ್ತೋತ್ರ’— ಶ್ರೀ ಅರವಿಂದಾಶ್ರಮದ ತಾಯಿದೇವಿಗೆ ಅಂಕಿತವಾಗಿರುವುದು ಯಥಾಯೋಗ್ಯವಾಗಿದೆ. ಆಕೆಯ ಪುಣ್ಯ ಚರಿತ್ರೆ ಆಕೆಯ ದಿವ್ಯಪಾದಕ್ಕಲ್ಲವೇ ನಿವೇದಿತವಾಗಬೇಕಾದುದು !

ತ್ರಿವಿಧಾನಂದವೀಯುವ ಈ ದಿವ್ಯಗ್ರಂಥ ಎಲ್ಲ ಕನ್ನಡಿಗರ ಕೈಸೇರಲಿ – ಮನೆ ಸೇರಲಿ – ಮನ ಸೇರಲಿ. ರಾಜಕೀಯವಾಗಿ ಒಂದುಗೂಡಿರುವ ಈ ನಾಡು ಎಲ್ಲ ದೃಷ್ಟಿಯಲ್ಲಿಯೂ ಒಂದಾಗಲು ಈ ಗ್ರಂಥ – ಅದರ ಹಿಂದಿರುವ ತಪಸ್ಸು ನೆರವಾಗಲಿ.

ಬೆಂಗಳೂರು
೧೫-೮-೧೯೫೭

ಅ. ನ. ಕೃ



ಓಂಕಾರದಭಿವ್ಯಕ್ತಿ ನೀನು ಶಿವಶಕ್ತಿ

*

ಪ್ರಸ್ತಾವನೆ

ಶ್ರೀ ದೊಡ್ಡಮೇಟಿಯವರ ಕರ್ನಾಟಕ ಮಹಿಮ್ನಃ ಸ್ತೋತ್ರದ ಪರಿಷ್ಕೃತವಾದ ಈ ದ್ವಿತೀಯಾವೃತ್ತಿಗೆ ವಿಸ್ತೃತವಾದ ವ್ಯಾಖ್ಯಾನವನ್ನು ಬರೆದು ಪ್ರಕಟಿಸುತ್ತಿರುವುದು ನನಗೆ ಅತ್ಯಂತ ಆನಂದದ ವಿಷಯ. ಕನ್ನಡ ನಾಡಿನ ಸಮೈಕ್ಯವನ್ನು ಸಾಧಿಸಲು ಆಧ್ಯಾತ್ಮಿಕ ದೃಷ್ಟಿಯ ದೇಶಭಕ್ತನು ಈಶ ಶಕ್ತಿಯನ್ನು ಇಂಬುಗೊಂಡು ಮುಂದುವರಿದ ರೀತಿಯು ಇಲ್ಲಿ ಕಾವ್ಯವಾಣಿಯಲ್ಲಿ ಕಥಿತವಾಗಿದೆ. ದೇಶಭಕ್ತರಾದ ಕವಿಗಳಿರುವಂತೆ ನಮ್ಮ ನಾಡಿನಲ್ಲಿ ಕವಿಗಳಾದ ದೇಶಭಕ್ತರೂ ಇದ್ದಾರೆ. ಶ್ರೀ ದೊಡ್ಡಮೇಟಿಯವರು ದ್ವಿತೀಯ ವರ್ಗದಲ್ಲಿ ಅದ್ವಿತೀಯರು.

ನೀತಿರಾಹಿತ್ಯವೇ ರಾಜನೀತಿಯಾಗಿ ಪರಿಣಮಿಸಿ ದೇಶಕ್ಷೋಭೆಗೆ ಹೇತುವಾಗಿದೆ. ಪಾಲಿಟಿಕ್ಸ್ ಪಾಲಿಟ್ರಿಕ್ಸ್ ಆಗಿ ಪರಿಣಮಿಸಿದಾಗ ಹೋಲೀ (Holy) ಜನಗಳ ಕೈಯಲ್ಲಿ ಇರಬೇಕಾದ ರಾಜ್ಯಸೂತ್ರಗಳು ಪ್ರೋಲೀ ಜನಗಳ ಕೈಗೆ ಸಿಕ್ಕುಬಿದ್ದು ರಾಜ್ಯಕ್ಷೇಮಕ್ಕೆ ರಾಜಕಾರಣವೇ ಮಾರಣವಾಗಿ ಮಾರ್ಪಟ್ಟಾಗ ಅದನ್ನು ಸರಿಗೊಳಿಸುವುದು ಯಾವರೀತಿಯೆಂದು ಏಕಾಂತದಲ್ಲಿ ಭಗವಚ್ಛಕ್ತಿಯನ್ನು ಪ್ರಾರ್ಥಿಸಿದ ಶ್ರೀ ದೊಡ್ಡಮೇಟಿಯವರ ಪ್ರಾರ್ಥನಾ ಗೀತೆಗಳಿವು.

ಅಹಂಕಾರ ಮಮಕಾರಗಳು ಒಂದುಕಡೆ, ನಿರಾಶಾ ನಿರ್ವೀರ್ಯ ಭಾವಗಳು ಒಂದುಕಡೆ—ಈ ಇಕ್ಕೆಲದ ದೈತ್ಯಶಕ್ತಿಗಳ ನಡುವೆ ಕನ್ನಡ ರಾಜಕಾರಣ ಕಂಗೆಟ್ಟು ಕಂಗಾಲಾದ ಕಾಲದಲ್ಲಿ ಶ್ರೀ ದೊಡ್ಡಮೇಟಿಯವರು ಅಂತರ್ಮುಖಿಗಳಾಗಿ ರಾಜರಾಜೇಶ್ವರಿಯನ್ನು ಧ್ಯಾನಿಸಿದಾಗ ಅವರ ಧ್ಯಾನ ದೃಷ್ಟಿಗೆ ದೃಗ್ಗೋಚರಿಸಿದ ಆಕೆಯ ಷೋಡಶರೂಪ ವಿಶೇಷಗಳನ್ನು ಕುರಿತು ಅವರು ಹಾಡಿದ ಸ್ತೋತ್ರಗಳಿವು. ಈ ಹಾಡುವಿಕೆಯ ಹಿಂದೆ ನಮ್ಮ ನಾಡಿನ ಪಾಡೂ ಹಿಮ್ಮೇಳವಾಗಿ ಶ್ರುತಿಗೊಟ್ಟಿದೆ.

ಹದಗೆಟ್ಟ ಕನ್ನಡನಾಡಿನ ರಾಜಕಾರಣವನ್ನು ಹದಗೊಳಿಸಲು ಮನಸ್ಸು ಮಾಡಿ ಕನ್ನಡವನ್ನೂ, ಭಾರತವನ್ನೂ, ವಿಶ್ವವನ್ನೂ ವ್ಯಾಪಿಸಿಕೊಂಡ ಈಶ್ವರ ಶಕ್ತಿಯನ್ನು ಆರಾಧಿಸಿ ತತ್ಫಲವಾಗಿ ಆಕೆಯ ಕೃಪಾಶೀರ್ವಾದಗಳಿಂದ ಕನ್ನಡ ರಾಜಕಾರಣವನ್ನು ರಾಜರಾಜೇಶ್ವರಿಯ ಕಾರ್ಯವನ್ನಾಗಿ ಪರಿಣಾಮ ಗೊಳಿಸಲು ಶ್ರೀ ದೊಡ್ಡಮೇಟಿಯವರು ಧ್ಯಾನಸ್ಥರಾದಾಗ, ತಪೋನಿರತ ರಾದಾಗ ಅವರ ಆತ್ಮದೃಷ್ಟಿಗೆ ಗೋಚರಿಸಿ ಅವರ ಆತ್ಮಾನುಭೂತಿಗೆ ಸ್ವಯಂ ವೇದ್ಯವಾದ ದಿವ್ಯಭಾವವು ಭಾಷೆಯ ಮೈದಳೆದು ಈ ಬಗೆಯಾಗಿ ಬಯಲಿಗೆ ಬಂದಿದೆ. ಭೌತಿಕವಾದ ಬೌದ್ಧಿಕ ಮಟ್ಟದಿಂದ, ಸಾಮಾನ್ಯ ಕವಿಯ ಕಲ್ಪನಾ ಚಾತುರ್ಯದ ಕ್ಷೇತ್ರದಿಂದ ಅತ್ಯಂತ ಮೇಲಿರುವ ಮಾತುಗಳು ಅವರ ಬಾಯಿಂದ ಬಂದದ್ದು ಇಲ್ಲಿ ನೋಡುತ್ತಿದ್ದೇವೆ. ಅವರು ಬರೆಯಬೇಕೆಂದು ಬರೆದ ಮಾತುಗಳಲ್ಲ ಇವು. ಮಾತು ಸಾಕುಮಾಡಿ ಮೌನವನ್ನೇ ಆಶ್ರಯಿಸಿ ಬರೆಯುವುದನ್ನೂ ತೊರೆದು ಭಕ್ತಿಯಿಂದ ಏಕೋಭಾವದಲ್ಲಿದ್ದಾಗ, ಅವರ ಆರಾಧ್ಯಮೂರ್ತಿಯಾದ ಮಹಾಮಾತೆ ಅವರನ್ನು ತನ್ನ ಮಾತೇ ಆಡುವಂತೆ ಮಾಡಿ ತನ್ನ ಕೃತಿಯನ್ನೇ ಬರೆಯುವಂತೆ ಮಾಡಿದ್ದಾಳೆ. ಮಾತೆ ಜ್ಯೋತಿರ್ಲಿಂಗವೆಂದರೆ ಮಾತೆಯ ಮಾತೇ ಜ್ಯೋತಿರ್ಲಿಂಗವೆಂದರ್ಥ. ಜ್ಯೋತಿರ್ಲಿಂಗಾತ್ಮಕವಾದ ಮಾತೇ ಮಂತ್ರ. ಅಂತಹ ಮಂತ್ರಶಕ್ತಿಯಿಂದ ಅಭಿಮಂತ್ರಿತವಾಗಿದೆ ಶ್ರೀ ದೊಡ್ಡಮೇಟಿಯವರ ಕಾವ್ಯವಾಣಿ.

ನಿರಶನ ವ್ರತಧಾರಣೆ ಮಾಡಿ ಕರ್ನಾಟಕ ರಾಜ್ಯನಿರ್ಮಾಣ ಶಿಬಿರವನ್ನು ಜಕ್ಕಲಿಯಲ್ಲಿ ಸ್ಥಾಪಿಸಿ ಅಖಂಡಕರ್ನಾಟಕದ ದೃಷ್ಟಿಯನ್ನು ಕರ್ನಾಟಕದ ಅಖಂಡತ್ವದ ಸಾಧನೆಯ ಕಡೆಗೆ ಹೊರಳುವಂತೆ ಮಾಡಿ ಭಗವಚ್ಛಕ್ತಿಯನ್ನು ಆರಾಧಿಸುತ್ತಿದ್ದ ಶ್ರೀ ದೊಡ್ಡಮೇಟಿಯವರನ್ನು ನೋಡಲು ಮತ್ತು ಅವರ ಸಾಮೂಹಿಕ ಪ್ರಾರ್ಥನೆಯಲ್ಲಿ ಭಾಗವಹಿಸಲು ನಾನೂ ನನ್ನ ಮಾನ್ಯ ಮಿತ್ರ ರಾದ ಶ್ರೀ ಜೋಳದರಾಸಿ ದೊಡ್ಡನಗೌಡರೂ ಆಮಂತ್ರಿತರಾಗಿ ಜಕ್ಕಲಿಗೆ ಹೋಗಬೇಕಾಗಿ ಬಂತು. ತಾಂತ್ರಿಕ – ವೈದಿಕ ರೀತಿಗಳಲ್ಲಿ ಸರ್ವತಂತ್ರ ಸ್ವತಂತ್ರಳಾದ ಜಗನ್ಮಾತೆಯ ಆರಾಧನೆ ಅಲ್ಲಿ ನಡೆದಿತ್ತು. ದೈವಿಕವಾದ ರೀತಿಯಲ್ಲಿ ಕನ್ನಡ ನಾಡಿನ ಏಕೀಕರಣವನ್ನು ಕುರಿತು ಯೋಚನೆ ಮತ್ತು ಆ ದಿವ್ಯಕಾರ್ಯಕ್ಕಾಗಿ ಭಗವತಿಯ ಕೃಪಾಯಾಚನೆ ಹಗಲಿರುಳೂ ಅಲ್ಲಿ

ಅವ್ಯಾಹತವಾಗಿ ಸಾಗಿತ್ತು. ಶ್ರೀ ಅರವಿಂದಾಶ್ರಮದ ಪದ್ಧತಿಯನ್ನು ಅನುಸರಿಸಿ ಆಹಾರ ವ್ಯವಹಾರಗಳ ಏರ್ಪಾಡಾಗಿದ್ದದ್ದರಿಂದ ಅಲ್ಲಿ ನೆರೆದವರೆಲ್ಲರೂ ಮಿತಾಹಾರಿಗಳಾಗಿ, ಮಿತಭಾಷಿಗಳಾಗಿ, ಕನ್ನಡ ನಾಡಿನ ಹಿತೈಷಿಗಳಾಗಿದ್ದರು. ಆ ಮಿತಿಯ ಪರಿಮಿತಿಯಲ್ಲಿ ಅಮಿತವಾಗಿ ಇದ್ದದ್ದು ದಿವ್ಯಾನುಭೂತಿ ಮಾತ್ರ. ಆಗ ಕೇಳಿದ್ದು ಈ ಸ್ತೋತ್ರಷೋಡಶಿ. ಸಾಮೂಹಿಕಧ್ಯಾನಸಮಯಗಳಲ್ಲಿ, ಪ್ರಾತಸ್ಸಂಧ್ಯಾ ಪೂಜೆಯ ಹೊತ್ತಿಗೆ ಶ್ರೀ ಜಂಬಲದಿನ್ನಿ ಗವಾಯಿಗಳು ಈ ಸ್ತೋತ್ರಗಳನ್ನು ಹಾಡುತ್ತಿದ್ದರು. ನಾವು ಹೋದಮೇಲೆ ಆ ಪಾಳಿ ಶ್ರೀ ಬೊಡ್ಡನಗೌಡರ ಪಾಲಿಗೆ ಬಂದಿತು. ಎರಡು ಮೂರು ದಿವಸ ಅವರ ಬಾಯಿಂದ ಈ ಮಹಿಮ್ನಃ ಸ್ತೋತ್ರಗಳನ್ನು ಕೇಳಿದಾಗ ಆದ ಆತ್ಮಾನುಭೂತಿ ಮಾತಿನಲ್ಲಿ ಮೂಡಿಸಲಾರದಷ್ಟು ಮಹತ್ತರವಾದದ್ದು. ಆಗಲೇ ನನಗೆ ಅನಿಸಿದ್ದು—ಈ ಸ್ತೋತ್ರಷೋಡಶಿ ಕನ್ನಡ ನುಡಿಯ ಅನುಭಾವ ಸಾಹಿತ್ಯದಲ್ಲಿ ಶಾಶ್ವತವಾಗಿ ನಿಲ್ಲುವ ಶಕ್ತಿಯುತವಾಗಿದೆಯೆಂದು ! ಇವುಗಳನ್ನು ಬರೆದವರು ಶ್ರೀ ದೊಡ್ಡಮೇಟಿಯವರೇ ಆದರೂ ಬರೆಯಿಸಿದ ಶಕ್ತಿ ಆಕೆಯೇ ಎಂದು ! ಪರಿಮಿತ ಪ್ರಜ್ಞೆಯ ಅಂಕಿತದ ಮನಸ್ಸಿನ ಮಾತಲ್ಲ ಅವು. ಅಂತಃಕರಣದಲ್ಲಿ ಅಡಗಲಾರದೆ ಉಕ್ಕಿ ಹೊರಹೊಮ್ಮಿದ ಆತ್ಮಾನುಭೂತಿಯ ವಾಙ್ಮಯರೂಪಿ ಜ್ಯೋತಿರ್ವಾಹಿನಿ ಇದು.

ತರುವಾಯ ಶ್ರೀ ದೊಡ್ಡಮೇಟಿಯವರ ಒಡನಾಡಿಗಳಾದ ಶ್ರೀ ಸತ್ಯಕಾಮರವರ ಜೊತೆಗೆ ಈ ಸ್ತೋತ್ರಗಳನ್ನು ಕುರಿತು ವಿಚಾರ ವಿನಿಮಯ ಮಾಡುವ ಸುಕೃತವೂ ನನಗೆ ಒದಗಿತು. ತಂತ್ರಶಾಸ್ತ್ರ ನಿಪುಣರಾದ ಅವರ ಸಹವಾಸದಿಂದ ನನ್ನ ತಲೆಯು ಮಾತ್ರವಲ್ಲದೆ ಹೃದಯವೂ ತುಂಬಿಕೊಂಡಿತು. ವ್ಯಾಖ್ಯೆ ಬರೆಯುವ ಮಾತು ಬಂದಾಗ ನಮ್ಮಿಬ್ಬರಲ್ಲಿ ಯಾರು ಬರೆಯಬೇಕೆಂಬುದು ವಿವಾದವಾಗಿಯೇ ನಿಂತಿತ್ತು. ಅವರ ತುಂಬು ಪಾಂಡಿತ್ಯವಾಗಲೀ, ಅಪ್ರತಿಹತವಾದ ಪ್ರತಿಭೆಯಾಗಲೀ ಇಲ್ಲದ ನಾನು ಈ ಕೆಲಸ ನೆರವೇರಿಸಿದ್ದರೆ ಅದು ನನ್ನ ಇಂತಹ ಸ್ನೇಹಿತರ ಸಾನುಭೂತಿಯ ಫಲವೆಂದು ವಿನಮ್ರನಾಗಿ ಸೂಚಿಸಬಯಸುವೆ. ಈಗಲೂ ಸತ್ಯಕಾಮರವರೇ ಈ ಕೆಲಸವನ್ನು ನಿರ್ವಹಿಸಿದ್ದರೆ ಚೆನ್ನಾಗಿತ್ತು ಎಂಬ ಮಾತನ್ನು ಮುಂದುಮಾಡದಿರಲಾರೆ.

೧೯೫೩ ರಲ್ಲಿ ಪ್ರಕಟವಾದ ಈ ಸ್ತೋತ್ರಸಂಗ್ರಹ ಕನ್ನಡನಾಡು

ಒಂದಾಗಿ ನಿಂತಮೇಲೆ ೧೯೫೭ ರಲ್ಲಿ ಪುನಃ ಪ್ರಕಟವಾಗುತ್ತಿದೆ. ಈ ಆವೃತ್ತಿಯಲ್ಲಿ ಒಂದೊಂದು ಸ್ತೋತ್ರಕ್ಕೂ ವಿಶದವಾದ ಮತ್ತು ವಿಶಾಲವಾದ ವೃತ್ತಿ ಬರೆಯಲಾಗಿದೆ. ಮೂಲದಲ್ಲಿ ಸೂಕ್ಷ್ಮವಾಗಿ ಸಾಂಕೇತಿಕವಾಗಿ ಇದ್ದದ್ದನ್ನು ಸರ್ವಜನಗ್ರಾಹ್ಯವಾಗುವಂತೆ ಬಿಡಿಸಿ ಬಿಡಿಸಿ ಹೇಳುವ ಯತ್ನ ಮಾಡಲಾಗಿದೆ ಈ ವ್ಯಾಖ್ಯಾನದಲ್ಲಿ.

ಈ ಆವೃತ್ತಿಯನ್ನು ತಮ್ಮ ಕಲಾಪೂರ್ಣವಾದ ರೇಖಾಚಿತ್ರಗಳಿಂದ ಅಲಂಕರಿಸಿ ಅಂದಗೊಳಿಸಿದ ನನ್ನ ಪ್ರಿಯಮಿತ್ರ ಕಲಾವಿದ ಶ್ರೀ ಕೊಂಡಾಚಾರಿಯ ನೆರವನ್ನು ಇಲ್ಲಿ ನೆನೆಯದಿರಲಾರೆ. ಆನುಷಂಗಿಕವಾಗಿ ಶಿಲ್ಪಶಾಸ್ತ್ರ ನಿಪುಣರಾದ ಕಲಾವಿದರ ಮನೆತನದಲ್ಲಿ ಜನಿಸಿದ ಈ ಕಿರಿಯ ಕಲಾವಿದನಿಗೆ ಕಲೆ ರಕ್ತಗತವಾಗಿದೆ. ರಕ್ತಗತವಾಗಿ ಹುಟ್ಟಿನೊಡನೆ ಬಂದಿರುವ ಕಲಾಪ್ರತಿಭೆಯನ್ನು ಅನುರಕ್ತಿಯಿಂದ ಬೆಳೆಸಿಕೊಂಡು ಕಲೆಯನ್ನು ತನ್ನಲ್ಲಿ ಕಲೆಯುವ ಯೋಗಶಕ್ತಿಯನ್ನಾಗಿ ಮಾರ್ಪಡಿಸಿಕೊಳ್ಳುವ ಬುದ್ಧಿಯನ್ನೂ ಆತ್ಮಶುದ್ಧಿಯನ್ನೂ ಭಗವತಿಯು ಈ ನನ್ನ ಕಿರಿಯ ಮಿತ್ರನಿಗೆ ನೀಡಲಿ. ನನ್ನ ಮನಸ್ಸಿನಲ್ಲಿ ಮೂಡುತ್ತಿದ್ದ ದಿವ್ಯಮಂಗಳ ವಿಗ್ರಹಗಳ ನಿರೂಪಕ್ಕೆ ರೂಪುಗೊಟ್ಟು ನಮ್ಮೆಲ್ಲರ ಕಣ್ಣ ಮುಂದೆ ನಿಲ್ಲಿಸಿರುವ ಶಕ್ತಿ ಶ್ರೀ ಕೊಂಡಾಚಾರಿಯವರ ಕಲಾಮಯ ಕುಂಚದ್ದು. ಸನಾತನಶಾಸ್ತ್ರದ ಆಧಾರವನ್ನು ಅಂಗೀಕರಿಸಿ ಅಶಾಸ್ತ್ರೀಯವಲ್ಲದ ರೀತಿಯಲ್ಲಿ ಭಾವಸ್ಫುರಣೆಯನ್ನೇ ಧ್ಯೇಯವಾಗಿಟ್ಟುಕೊಂಡು ಈ ಚಿತ್ರಗಳು ನಿರ್ಮಿತವಾಗಿವೆ.

"In art also we must always remain on the heights."
"Good taste is the aristocracy of art."

—ಈ ಮಾತೃವಾಣಿಯೂ

"The artist puts out into form not only the Powers of his Consciousness, but the Powers of the Consciousness that has made the worlds and their objects."

"Not only to enlarge Art towards the widest wideness but ascend with it to the heights climbing towards the

Highest is and must be part both of our aesthetic and our spiritual endeavour."

" Art is not only technique or form of Beauty not only the discovery or the expression of Beauty—it is a self expression of consciousness under the conditions of aesthetic vision and perfect execution."

—ಶ್ರೀ ಅರವಿಂದರ ಈ ಗುರುವಾಣಿಯೂ ಕಲೆಯುಬಗ್ಗೆ ಸಾಧಕನು ತಳೆಯಬೇಕಾದ ದೃಷ್ಟಿ ವಿಶೇಷಕ್ಕೆ ನಿರ್ದೇಶನ ಸೂತ್ರಗಳಾಗಿವೆ.

ಏಳು ಮೇಲೇಳೇಳು ವೀರನೆ
ಹಾಡುಚಾಗಿಯ ಹಾಡನು
ಹಾಡಿನಿಂದೆಚ್ಚರಿಸು ಮಲಗಿಹೆ
ನಮ್ಮ ಈ ತಾಯ್ನಾಡನು *

—ಎಂದು ಹಾಡಿದ, ಹಾಡಿನ ಅರ್ಥದಂತೆಯೇ ಮಾಡಿದ ಮಹಾನುಭಾವಿಯಾದ ವಿವೇಕಾನಂದರ ವೀರವಾಣಿಯಿದು. ಪಾಡು ತೊರೆದು ಮಲಗಿದ ಪಾಡುಗೆಟ್ಟ ತಾಯ್ನಾಡಿನ ನಾಡಿಗರನ್ನು ಹಾಡಿ ಮೇಲೆಬ್ಬಿಸಬೇಕಾದ ಹೊಣೆ ನಾಡಿನ ನಾಲಗೆಯಾದ ಕವಿಯದು.

ಋತದ ಗೆಲುವಿಗೆ, ಗೆಲುವಿನ ಸಿದ್ಧಿಗೆ ಸುವ್ರತಸಾಧನೆ. ಸತ್ಯದ ಸೋಲುಗೆಲುವುಗಳು ನಮ್ಮ ಅಭೀಪ್ಸೆಯಮೇಲೂ ಆಧಾರಗೊಂಡಿವೆಯೆಂಬ ಮಾತು ಸುಳ್ಳಲ್ಲ. ಸತ್ಯವು ಗೆಲ್ಲಬೇಕೆಂಬ ಮಾತು ಎಷ್ಟು ಮುಖ್ಯವೋ ಸತ್ಯವು ಸುವ್ರತದ ಸನ್ಮಾರ್ಗದಿಂದಲೇ ಗೆಲ್ಲಬೇಕೆಂಬ ಮಾತೂ ಅಷ್ಟೇ ಮುಖ್ಯ. ಅಹಂಕಾರ ಮಮಕಾರಗಳನ್ನೇ ಬಲಗೊಂಡು ಅವುಗಳ ಬೆಂಬಲದಿಂದಲೇ ಕರ್ನಾಟಕ ರಾಜ್ಯನಿರ್ಮಾಣವಾಗಬೇಕೆಂಬ ರಾಜಕಾರಣಿಗಳ ರಾಜಸ ದೃಷ್ಟಿಗೆ ರಾಜರಾಜೇಶ್ವರಿಯ ಸಂಕಲ್ಪದ ಪೂರ್ಣ ಪರಿಚಯವಾಗಲಾರದು. ಅದು ಮನದ ಬಯಕೆ ಮಾತ್ರವಲ್ಲದೆ ಆತ್ಮದ ಸಂಕಲ್ಪವೂ ಆಗಬೇಕು —ಎಂಬುದು ಸಾಧಕವರ್ಗದ ಜನದಮಾತು. ಆತ್ಮದ ಸಂಕಲ್ಪಸಿದ್ಧಿಗೆ

* ಶ್ರೀ ಸ್ವಾಮಿ ವಿವೇಕಾನಂದರ 'ಸಂನ್ಯಾಸಿ ಗೀತೆ'ಯ ಕವಿ ಕುವೆಂಪುವಿನ ಅನುವಾದ.

*

ಪರಮಾತ್ಮನ ಸಂಕಲ್ಪದ ಸಹಾಯ ಆವಶ್ಯಕವೆಂದು ಅದನ್ನು ಪಡೆಯಲು ತಪಿಸುವುದು ಅನಿವಾರ್ಯ.

" It is by the Grace of the Divine and the aid of a Force greater than your own, not by personal capacity and merit that you or anybody can attain the goal of sadhana."

" The surrender to the Divine Mother is essential, for without it there is no fulfilment of the object of the yoga."

—ಪೂರ್ಣಯೋಗಿ ಶ್ರೀ ಅರವಿಂದರ ಶರಣಮಾರ್ಗದಲ್ಲಿ ನಡೆಯಲು ಪ್ರಯತ್ನಿಸುವ ಶ್ರೀ ದೊಡ್ಡಮೇಟಿಯವರಿಗೆ ಈಶ್ವರಶಕ್ತಿಯ ಭಕ್ತರಾಗುವುದು ಸಹಜವಾದದ್ದು.

ಕನ್ನಡ ರಾಜಕಾರಣವನ್ನು ರಾಜರಾಜೇಶ್ವರಿಯ ಕಾರ್ಯವೆಂದು ಭಾವಿಸಿ ಆ ಅನುಭಾವದ ಭಾವನೆಯನ್ನೇ ತನ್ನ ಸುತ್ತೂ ಬಿತ್ತರಿಸಬಯಸಿದ್ದ ಶ್ರೀ ದೊಡ್ಡಮೇಟಿಯವರ ಗೆಯ್ಮೆ ಮಾತೃಕೃಪೆಯಿಂದ ಪರಿಪೋಷಿತವಾಗಿದೆ. ಕನ್ನಡನಾಡಿನ ಕಲ್ಯಾಣಕ್ಕೆ ಕಾರಣವಾದ ಈ ಸ್ತೋತ್ರಷೋಡಶಿಗೆ ಕನ್ನಡ ಸಾಹಿತ್ಯ ಸೀಮೆಯಲ್ಲಿ ಅಕ್ಷರವಾದ ಸ್ಥಾನವಿದೆ. ಕನ್ನಡದ ಬಾವುಟವನ್ನು ಧೀಮಂತವಾಗಿ ಶ್ರೀಮಂತವಾಗಿ ಏರಿಸಿ ಹಾರಿಸಿದ ದಿವಂಗತ ಬಿ. ಎಂ. ಶ್ರೀಕಂಠಯ್ಯನವರ 'ಕನ್ನಡತಾಯಿಯ ನೋಟ'ವನ್ನೂ, ದಿವಂಗತ ಬೆನಗಲ್ ರಾಮರಾಯರ, 'ಕನ್ನಡವನುಳಿದೆನಗೆ ಅನ್ಯಜೀವನವಿಲ್ಲ' ವೆಂಬ ಮಾತನ್ನೂ, ಹುಯಿಲಗೋಳರ ' ಉದಯವಾಗಲಿ ನಮ್ಮ ಚೆಲುವಕನ್ನಡನಾಡು ' ಹಾಡನ್ನೂ, ಕುವೆಂಪುವಿನ 'ಕನ್ನಡವೆನೆ ಕುಣಿದಾಡುವದೆನ್ನೆದೆ ಕನ್ನಡವೆನೆ ಕಿವಿ ನಿಮಿರುವುದು' ಮತ್ತು 'ಅಖಂಡ ಕರ್ನಾಟಕ ಅಖಂಡ ಕರ್ನಾಟಕ'ಎಂಬ ಕವನವನ್ನೂ, ಅಂಬಿಕಾತನಯದತ್ತರ 'ವಂದೇ ವಂದೇ ಕರ್ನಾಟಕ ವಂದೇ' ಎಂಬ ಅನುಭಾವಜನ್ಯವಾದ ಭಾವಗೀತೆಯನ್ನೂ, ಜೋಳದರಾಸಿ ದೊಡ್ಡನ ಗೌಡರ 'ಕರೆಯುವಳು ನಮ್ಮನ್ನು ಕನ್ನಡದ ಮಾದೇವಿ' ಮತ್ತು 'ಕೇಳುತಿದೆ ಜಯ ಕನ್ನಡಭೇರಿಯು ಧನಾಧನಾಧನ ಧೀಂ ಜಯನಾದದಿ' ಎಂಬ ಹಾಡುಗಳನ್ನೂ ಮರೆಯುವದೆಂತು ? ಕಾವ್ಯವಾಣಿ ಕನ್ನಡನಾಡಿನ ಜಾಗ್ರತಿಗೆ ಹೇತು

ವಾಗಿದೆ ಎಂಬುದರಲ್ಲಿ ಸಂಶಯವೇ ಇಲ್ಲ. ಸಾಹಿತಿಯೂ ನಾಡಭಕ್ತನಾಗಿ ನಾಡಶಕ್ತಿಯನ್ನು ಆರಾಧಿಸಿದ್ದಾನೆ. ಆದರೂ ಪೂರ್ಣವಾಗಿ ಈಶ್ವರಾಭಿಮುಖ ವಾದ ದೃಷ್ಟಿ, ಈಶ್ವರಶಕ್ತಿಯನ್ನು ಕನ್ನಡದ ರಾಜಕಾರಣದ ಉದ್ಧಾರಕ್ಕೆ ಆಹ್ವಾನಿಸುವ ದೃಷ್ಟಿ ಈ ಸ್ತೋತ್ರಷೋಡಶಿಯ ವೈಶಿಷ್ಟ್ಯ.

ಕನ್ನಡಕವಿಗಳು ದೇಶ ಮತ್ತು ಪ್ರದೇಶಗಳೆರಡನ್ನೂ ದಿವ್ಯವಾಗಿ ಭವ್ಯ ವಾಗಿ ಬಣ್ಣಿಸಿದ್ದಾರೆಂಬುದಕ್ಕೂ ಕನ್ನಡಭಕ್ತರು ಭಾರತದ ಭಕ್ತರೆಂಬುದಕ್ಕೂ ನಿದರ್ಶನವಾಗಿ ಶ್ರೀ ನಾಗೇಶಶಾಸ್ತ್ರಿಗಳ ಪುರಾಣಕಾವ್ಯಗಳಿಂದ ಆರಿಸಿದ ಈ ಮಾತುಗಳನ್ನು ನೋಡಬಹುದು :

* ನೆಲಕೆ ಮುನ್ಮುಡಿಯಾದ ಜಲದಿಂ
ತೊಳಗುವೀ ಭೂಲಯ ಮಧ್ಯದೆ
ಪಲವುರೀತಿಯ ಧರ್ಮಮತ ಭಾಷಾದಿಗಳನಾಂತು ॥
ನೆಲಸಿದಖಿಳ ಜನಾಂಗದವರುಂ
ಕಲಿವ ಶಾಂತಿಪ್ರದ ಸುಸಂಸ್ಕೃತಿ
ನಿಳಯಮೆನೆ ಕಂಗೊಳಿಸುತಿರ್ಪುದು ಭರತಖಂಡವದು ॥

* ದೇಶವೆಮ್ಮದು ಪುಣ್ಯಭೂಮಿಯು
ಭಾಷೆಯೆಮ್ಮದು ದೇವಭಾಷೆ ಮ
ಹೇಶನೊಲಿಯುವ ಧರ್ಮವಿನ್ನು ಸನಾತನಮದೆಂಬ ॥
ದೇಶಭಾಷಾ ಧರ್ಮಗಳ ನಿ
ರ್ದೋಷದಭಿಮಾನದೊಳು ಮೆರೆವಾ
ವೇಶದಮಳ ಜನಾಂಗದಳ್ತಿಯ ಗೃಹವು ಭಾರತವು ॥

* ಕನ್ನಡದ ಕವಿವರರು ಕಲಿಗಳು
ಮಾನ್ಯಬುಧರಾಚಾರ್ಯವರ್ಯರು
ಪುಣ್ಯತಮ ಭಕ್ತರು ಕಲಾವಿದರಾದಿಯಾದವರು ॥
ನನ್ನಿ ನಲ್ಮೆಯ ನಾಡಗುಡಿಯೊಳು
ಕನ್ನಡಾಂಬೆಯ ಕೀರ್ತಿಮೂರ್ತಿಯ
ಭಿನ್ನತೆಯ ನುಳಿದರ್ಚಿಸುವರವರಿರವನೇ ನೊರೆವೇಂ ॥

ಪೊಡವಿಯಗಲದೊಳೇಳ್ಗೆಯಾಶೆಗೆ
ಬಡಿದು ಕಡಿದಾಡುವ ಜನಾಂಗದ
ನಡೆನುಡಿಗಳನು ತಿದ್ದಿ ತಿಳಿವನು ಕೊಡುವ ಧರ್ಮಕ್ಕೆ ॥
ಪಡೆದಜನನಿಯು ತಾನೆನಿಸಿ ಜಸ
ವಡೆದ ಭರತಾವನಿಯ ದಕ್ಷಿಣ
ದೆಡೆಯ ಚೆಲುವಿನ ಬೀಡು ಕನ್ನಡನಾಡು ಮೆರೆಯುವುದು ॥

ಇದು ಪುರಾತನಕಾಲದಿಂ ಸ
ತ್ಯದ ಸನಾತನ ಧರ್ಮದಾಶ್ರಯ
ವಿದು ಸದಾ ಪರಮಾತ್ಮತತ್ವ ವಿಮರ್ಶನದ ಬೀಡು ॥
ಇದು ಸುಸಂಸ್ಕೃತಿಗಿಕ್ಕೆ ಕಲೆಗಳ
ಸದನ ವಧಿಕ ಪರಾಕ್ರಮದ ನೆಲೆ
ಯಿದು ಸಕಲ ಸಂಪದದ ನಿಲಯವು ಭರತಭೂತಲವು ॥

ಇದು ಮತಸ್ಥಾಪಕರ ತಾಯ್ಮನೆ
ಯಿದು ಮಹಾಋಷಿಕವಿ ಬುಧರಿಗೆಡೆ
ಯಿದು ಪರಾಕ್ರಮ ಭೂಪಣರ ಭೂಮಿಪರಜಸದಿರವು ॥
ಇದು ಜಗಕೆ ತಾಂ ಮಾರ್ಗದರ್ಶಕ
ವಿದು ಸುಜೀವನ ಶಾಂತಿದಾಯಕ
ವಿದು ನಿಜಂ ನಿಜವೆಂದು ಭರತೋರ್ವಿಯನು ಬಂಣಿಪರು ॥

ಹೃದಯವೆಳೆಯುವ ಪ್ರಕೃತಿ ಸೌಂದ
ರ್ಯದೊಳು ಚಿನ್ನದ ಗಣಿಗಳಾ ಸಂ
ಪದದೊಳಂ ಪಲವೆಡೆಯ ಜಲಪಾತದ ಸುಕೀರ್ತಿಯೊಳಂ ॥
ಉದಿತ ಚಂದನ ವನಗಳಿಂ ಸಂ
ಮುದವ ನೀಡುವ ಗುಣದೊಳುರುವಂ
ಶವ ನೆಗಳ್ತೆಯೊಳೆಸೆಯುವಳು ಕನ್ನಡದ ಭೂದೇವಿ ॥

\+ ಮೆರೆವ ಮೈಸೂರಿಳೆಯ ಕಾಡಿನ
ಕರಿಗಳುಂ ಭೀಮಾತಟದ ವರ
ತುರುಗಗಳ ಮಲೆನಾಡ ತೇಗದಮರದ ತೇರುಗಳು ॥
ತರುಣ ಕನ್ನಡಿಗರ ಪದಾತಿಗ
ಳರಿಯೆ ಕನ್ನಡನಾಡ ದೇವಿಯೊ
ಳಿರುವ ಚತುರಂಗದ ಮಹಾಬಲದಂತೆ ರಾಜಿಪವು ॥

ಇತರರನ್ನು ದ್ವೇಷಿಸದೆ, ಇತರರನ್ನು ದೂಷಿಸದೆ ಸ್ವದೇಶ, ಸ್ವಭಾಷೆ, ಸ್ವಜನಾಭಿಮಾನ ತಳೆಯುವುದು ಕನ್ನಡಿಗರಿಗೆ ಕೀಳೆನಿಸಿಲ್ಲ.

ಕನ್ನಡನಾಡು ಶಿವಮಯವಾದ ಶಕ್ತಿ ಸಂಯುಕ್ತವಾದದ್ದು. ಕನ್ನಡಿಗನಿಗೆ ತಾಯ್ನಾಡೆಂದರೆ ನಾಡಿನರೂಪದಲ್ಲಿರುವ ಪರಾತ್ಪರಳಾದ ಮಾತೃಶ್ರೀಯೆಂದೇ ಅರ್ಥ. ನಾಡಿನತುಂಬ ಶಕ್ತಿವಿಶಿಷ್ಟನಾದ ಶಿವನನ್ನೂ, ಶಿವವಿಶಿಷ್ಟಳಾದ ಶಕ್ತಿಯನ್ನೂ ಆರಾಧಿಸುವುದು ಕನ್ನಡಿಗರ ವಿಶಿಷ್ಟ ಪದ್ಧತಿ. ಏಕೆಂದರೆ ಶಿವಶಕ್ತಿಗಳು ಅವಿಭಾಜ್ಯವಾದವು ; ಅವುಗಳ ಸಂಬಂಧ ಅವಿನಾಭಾವ ಸಂಬಂಧ. ಒಂದು ಸ್ಥಿತಿ ಇನ್ನೊಂದು ಗತಿ. ಅವು ತೋರಿಕೆಗೆ ಎರಡಾದರೂ ಇರುವಿಕೆಯಲ್ಲಿ ಒಂದೇ. ಇರುವ ಆ ಒಂದರಲ್ಲಿಯೇ ಇನ್ನೊಂದಾಗುವ ಶಕ್ತಿಯಿದೆ.

ಪರಾಸ್ಯಶಕ್ತಿರ್ವಿವಿಧೈವಶ್ರೂಯತೇ
ಸ್ವಾಭಾವಿಕೀ ಜ್ಞಾನಬಲ ಕ್ರಿಯಾಚ

—ಎಂಬ ಶ್ರುತಿ ಪ್ರಮಾಣದಂತೆ ಆ ಶಕ್ತಿ ವಿಶ್ವತೋಮುಖವಾದದ್ದು. ಷೋಡಶಕಲಾಪೂರ್ಣವಾದದ್ದು. ಷೋಡಶ ಸ್ತವನಗಳಲ್ಲಿ ಅಂತಹ ಶಕ್ತಿಯ ಷೋಡಶ ರೂಪವಿಶೇಷಗಳನ್ನು ಸ್ತುತಿಸಲಾಗಿದೆ.

ತಾಯಿಯವರು ಈ ಮಹಿಮ್ನಃ ಸ್ತೋತ್ರದ ಮೇಲೆ ಶ್ರೀ ದೊಡ್ಡಮೇಟಿಯವರಿಗೆ ಸ್ವಾಕ್ಷರಗಳಲ್ಲಿ ಬರೆದು ತಿಳಿಸಿದ ಸಂದೇಶ ಅಮೂಲ್ಯವಾದದ್ದು.

---

* ಶ್ರೀ ಮರಿಯೋಗೀಶ್ವರ ಪುರಾಣ
॥ ಶ್ರೀ ಗವಿಸಿದ್ಧೇಶ್ವರ ಪುರಾಣ
\+ ಶ್ರೀ ಫಲಾಹಾರ ಶಿವಯೋಗೀಶ್ವರ ಪುರಾಣ

ಉಪವಾಸ ವನವಾಸಗಳಿಂದಲ್ಲ ನಾಡಿನ ಸಮೈಕ್ಯವನ್ನು ಸಾಧಿಸಬೇಕಾದದ್ದು. ಸ್ವಾತ್ಮಶಕ್ತಿಯ ಸಂವರ್ಧನೆಯಿಂದ, ದೇಶಭಕ್ತಿಯಿಂದ ಮತ್ತು ಭಗವತ್ಕೃಪೆಯಿಂದ !

ಯಾವ ದಿವ್ಯಶಕ್ತಿ ಕನ್ನಡನಾಡಿನ ಬಹಿರಂತರಗಳಲ್ಲಿ ವ್ಯಾಪಿಸಿಕೊಂಡಿದೆಯೋ ದೇದೀಪ್ಯಮಾನವಾಗಿ ದೀಪಿಸಿಕೊಂಡಿದೆಯೋ ಆ ದಿವ್ಯಶಕ್ತಿಯ ಅಭಿವ್ಯಕ್ತರೂಪಿಯಾದ ಮಾತೃಶ್ರೀಯ ಶ್ರೀಚರಣಕ್ಕೆ ಈ ಕೃತಿ ಸಮರ್ಪಿತವಾಗಿ ಕೃತಾರ್ಥವಾಗಿದೆ.

ಈ ಆವೃತ್ತಿಗೆ ಮುತ್ತಿನಂತಹ ಮುನ್ನುಡಿಯನ್ನು ಬರೆದು ಉಪಕರಿಸಿದ ಶ್ರೀ ಅ. ನ. ಕೃಷ್ಣರಾಯರಿಗೆ ನನ್ನ ಹಾರ್ದಿಕವಾದ ಅಭಿನಂದನೆಗಳು. ಕನ್ನಡ ನಾಡು ಸರ್ವವಿಧದಿಂದ ಮುನ್ನಡೆಯಲು ಅವರು ಮಾಡಿದ ಮತ್ತು ಮಾಡುತ್ತಿರುವ ಸೇವೆ ಅಪಾರ. ತಮ್ಮ ಪ್ರಚೋದನಾತ್ಮಕವಾದ ಮತ್ತು ಪ್ರಬೋಧಾತ್ಮಕವಾದ ನುಡಿಯಿಂದ ಕನ್ನಡಿಗರನ್ನು ಮುನ್ನಡೆಸಿದ ಶ್ರೀ ಅ. ನ. ಕೃ ಈ ಕರ್ನಾಟಕ ಮಹಿಮ್ನಃ ಸ್ತೋತ್ರಕ್ಕೆ ಮುನ್ನುಡಿಯನ್ನು ನುಡಿದಿರುವುದು ಭಗವತಿಯ ಸಂಕಲ್ಪವೇ ಸರಿ.

ರಕ್ಷಾಕವಚದ ಮೇಲಣ ಅಕ್ಷರ ಲಿಪಿಯನ್ನೂ ಶ್ರೀಮಾತೆಯ ಷೋಡಶದಳೋಪೇತ ಶ್ರೀಚಕ್ರವನ್ನೂ ಬರೆದುಕೊಟ್ಟು ಉಪಕರಿಸಿದ ನನ್ನ ಪ್ರಿಯ ಮಿತ್ರರಾದ ಶ್ರೀ ರವೀಂದ್ರನಾಥ ಬಾಬು ಅವರಿಗೂ, ಅತಿ ಸ್ವಲ್ಪ ಸಮಯದಲ್ಲಿ ಅಂದವಾಗಿ ಮುದ್ರಿಸಿಕೊಟ್ಟ ಈಸ್ಟರ್ನ್ ಪ್ರೆಸ್ ಮಾಲೀಕರಾದ ಶ್ರೀ ಎಂ. ಎಸ್. ಚಿಂತಾಮಣಿಯವರಿಗೂ ನನ್ನ ಅಭಿನಂದನೆಗಳು.

ಜೈ ಶಿವೇ !

ಬಳ್ಳಾರಿ
೧೫-೮-೫೭

ಸಿ. ವ. ಚನ್ನಬಸವೇಶ್ವರ

ಚಿತ್ರಸೂಚಿ

೧.	ಓಂಕಾರದಭಿವ್ಯಕ್ತಿ ನೀನು ಶಿವಶಕ್ತಿ	xii
೨.	ಪರಾಶಕ್ತಿ	೨
೩.	ಭುವನೇಶ್ವರಿ	೮
೪.	ಮಹೇಶ್ವರಿ	೧೪
೫.	ಮಹಾಕಾಳಿ	೨೦
೬.	ಮಹಾಲಕ್ಷ್ಮಿ	೨೬
೭.	ಮಹಾಸರಸ್ವತಿ	೩೪
೮.	ಮೂಕಾಂಬಿಕಾ	೪೨
೯.	ರತ್ನಗರ್ಭಾ	೪೮
೧೦.	ಶ್ರೀದುರ್ಗೆ	೫೨
೧೧.	ಇಂದ್ರಾಣಿ	೫೮
೧೨.	ವಾರಾಹಿ	೬೪
೧೩.	ಅದಿತಿ	೬೮
೧೪.	ಕೌಮಾರಿ	೭೨
೧೫.	ಕುಂಡಲಿನೀ	೭೬
೧೬.	ತ್ರಿಪುರಸುಂದರಿ	೮೦
೧೭.	ಸಾವಿತ್ರಿ	೮೪

— : : —

TO

THE MOTHER DIVINE

ದಿವ್ಯ ಮಾತೆಗೆ
ಸಮರ್ಪಿತ

ಕರ್ನಾಟಕ ಮಹಿಮ್ನಃ ಸ್ತೋತ್ರ



ಪರಾಶಕ್ತಿ

೧

ಓ ತಾಯಿ ಭಾರತಾಂಬೆ ;
ಪರಾತ್ಪರಶಕ್ತಿ ಪರಮೇಶ್ವರೀ !
ಏಕಳಾಗಿಹ ನೀನೆ ಅನೇಕಳಾದೆ
ನೀನೆ ನಿನ್ನ ಲೀಲೆಗಾಗಿ.
ನಿನ್ನ ನೆಚ್ಚಿನ ಕುವರಿ—ಕನ್ನಡದೇವಿ
ತನ್ನಂಗಭಂಗದ ನೋವನೆಲ್ಲ ನುಂಗಿ
ನಿನ್ನ ಮುಕ್ತಿಯಜ್ಞದಲಿ ಮೈಯುಸವೆಸಿದಳು.
ಓ ತಾಯಿ ಸುಂದರಿ ! ವಸುಂಧರೆ !
ಉನ್ಮುಕ್ತೆ ನೀನಿಂದು.
ನೋಡಿದೋ ನೋಡಿಲ್ಲಿ ಪರಿತಪಿಸುತಿಹಳಿಲ್ಲಿ
ನಿನ್ನಣುಗಿ ಮುದ್ದು ಕನ್ನಡದೇವಿ.
ನಿನ್ನೆದೆಯ ಹಿರಿಯ ಮಕ್ಕಳಲಿ
ಅವಳ ತಪಕೆ ಮಣಿವ ಮನವನೀಯೌ ತಾಯಿ
ಭಾರತಾಂಬೆ !

೧

ಭಾರತದೇಶವು ಭಿನ್ನಭಿನ್ನ ಮತಗಳ, ಭಿನ್ನಭಿನ್ನ ಭಾಷೆಗಳ, ಭಿನ್ನಭಿನ್ನ ಭಾವನೆಗಳ ಮತ್ತು ಜೀವನ ವಿಧಾನಗಳ ವಿರಾಡ್ರೂಪ. ಅಂಗ ಪ್ರತ್ಯಂಗಗಳ ವಿಭಿನ್ನತೆಯ ಹಿಂದೆ ದೇಹಾಂತರ್ಗತವಾದ ಆತ್ಮ ಅಭಿನ್ನವೂ ಏಕಾಭಿನ್ನವೂ ಆಗಿರುವಂತೆ ಆಸೇತುಹಿಮಾಚಲಪರ್ಯಂತ ಹಬ್ಬಿ ನಿಂತಿರುವ ಭಾರತಭೂಮಿಯ ಶಕ್ತಿ ಒಂದೇ ಆಗಿದೆ. ಭಾರತದ ಅಂತಶ್ಶಕ್ತಿಯನ್ನೇ ಭಾರತಿಯೆಂದೂ ಭಾರತಾಂಬೆಯೆಂದೂ ಕರೆಯುವ ವಾಡಿಕೆ ಕೇವಲ ರೂಢಿಯಲ್ಲ. ಆ ರೂಢಿಯ ಹಿಂದೆ ಗೂಢವಾದ ನಿಗೂಢವಾದ ಸತ್ಯವಿದೆ. ಪರಾತ್ಪರಶಕ್ತಿಯೆಂದೂ ಪರಮೇಶ್ವರಿಯೆಂದೂ ಯಾವ ಅವ್ಯಕ್ತಶಕ್ತಿಯನ್ನು ಕವಿಯು ಸಂಬೋಧಿಸುವನೋ ಆ ಅವ್ಯಕ್ತಶಕ್ತಿಯ ವ್ಯಕ್ತರೂಪವೇ ಈ ವಿರಾಡ್ವಿಶ್ವ. ಈ ವಿಶ್ವದಲ್ಲಿ ಭಾರತದೇಶಕ್ಕೆ ವಿಶಿಷ್ಟಸ್ಥಾನ! ಏಕೆಂದರೆ ವಿಶ್ವರೂಪಳೂ, ವಿಶ್ವೋತ್ಪತ್ತಿಕಾರಣಳೂ, ವಿಶ್ವೇಶ್ವರಿಯೂ ಆದ ಆಕೆಯ ಪ್ರಮುಖ ಲೀಲಾಭೂಮಿ ನಮ್ಮ ಈ ದೇಶ ; ಆ ಶಕ್ತಿಯ ಅಭಿವ್ಯಕ್ತಕಾರ್ಯದ ಮಾತೃಕೇಂದ್ರ ನಮ್ಮ ಈ ಮಾತೃಭೂಮಿ. ಮಾತೃಭೂಮಿಯೆಂದರೆ ಭೂರೂಪದಲ್ಲಿರುವ ಮಹಾಮಾತೆಯೆಂದರ್ಥ. ತಾಯ್ನಾಡೆಂದರೆ—ಈ ನಾಡು ನಮ್ಮದಲ್ಲ ತಾಯಿಯದು ಎಂದರ್ಥ. ಏಕಮೇವ ಅದ್ವಿತೀಯವಾದ ಆ ಪರಾಶಕ್ತಿ ಭಾರತಿಯೇ ತನ್ನ ಲೀಲಾವಿನೋದಕ್ಕಾಗಿ ವಿವಿಧನಾಮ, ವಿವಿಧರೂಪ, ವಿವಿಧಕ್ರಿಯಾತ್ಮಕಳಾದಳು. ವಿವಿಧಪ್ರದೇಶಗಳ ಒಕ್ಕೂಟವೇ ದೇಶವೆನ್ನುವ ರಾಜಕೀಯದೃಷ್ಟಿಗಿಂತಲೂ ಉತ್ತಮವಾದದ್ದು ಈ ದೃಷ್ಟಿ. ದೇಶವೆನ್ನುವ ದೇಹದ ಪೂರ್ಣತೆಗಾಗಿಯೇ ಪ್ರಕಟಿತವಾದ ಅಂಗ ಪ್ರತ್ಯಂಗಗಳ ರೂಪವೇ ಪ್ರದೇಶಗಳು.

ದೇಹಪೋಷಣೆಯಲ್ಲಿ ಸರ್ವಾಂಗಗಳೂ ನೆರವಾಗುವಂತೆ ದೇಶಹಿತದ ಸಾಧನೆಗಾಗಿ ಪ್ರದೇಶಗಳೆಲ್ಲವೂ ನೆರವಾಗಬೇಕಾದದ್ದು ನೀತಿ ಮತ್ತು ನಿಯತಿ. ಭಾರತದೇಶದ ರಾಜಕೀಯ ಬಂಧವಿಮೋಚನೆಯ ಮಹಾಯಜ್ಞದಲ್ಲಿ ಕನ್ನಡ

ನಾಡು ತನ್ನದೆಲ್ಲವನ್ನೂ ಕೊನೆಗೆ ತನ್ನನ್ನೂ ಬಲಿಗೊಟ್ಟುಕೊಂಡಿದೆ. ತನ್ನ ಅಸ್ತಿತ್ವವೇ ಇಲ್ಲವಾಗುವಷ್ಟು ವಿಶಿಷ್ಟರೀತಿಯಲ್ಲಿ ತನ್ನನ್ನೇ ಮರೆತು ಭಾರತ ಶಕ್ತಿಯ ಜೊತೆಗೆ ಬೆರೆತು ಬಿಡುಗಡೆಯನ್ನು ಸಾಧಿಸಿತು. ಸರ್ವತೋಮುಖ ವಾಗಿ ಸೇವೆಸಲ್ಲಿಸಿದ ಕನ್ನಡನಾಡು ಭಾರತವು ಬಿಡುಗಡೆಯಾದ ಮೇಲೆಯೂ ಅನಾದರಣೆಯಿಂದ ಕೊರಗಿಕೊರಗಿ ಸೊರಗಿ ಸಣ್ಣದಾಯಿತು. ಭಾರತ ದೇಶದ ತದಿತರ ಪ್ರದೇಶಗಳು ತಮ್ಮನ್ನು ತಾವು ಮರೆಯದೆ ತಮ್ಮದೆಲ್ಲವನ್ನೂ ತೊರೆಯದೆ ಜಾಣ್ಮೆಯಿಂದ ಜಾಗ್ರತೆಯಿಂದ ಪರಹಿತದ ಕಾರ್ಯಸಾಧನೆ ಯಲ್ಲಿ ಸ್ವಹಿತಸಿದ್ಧಿಯನ್ನು ಸಾಧಿಸಿಕೊಂಡವು. ಈ ಕೃತಕಬುದ್ಧಿ ಕನ್ನಡ ಕ್ಕಿಲ್ಲದೇ ಹೋದದ್ದು ಒಂದು ದೃಷ್ಟಿಯಿಂದ ಪ್ರಶಂಸನೀಯವಾದರೂ ಒಂದು ದೃಷ್ಟಿಯಿಂದ ತಿಳಿಗೇಡಿತನವಾಗಿ ಪರಿಣಮಿಸಿತು. ಕನ್ನಡನಾಡು ಭಾರತಕ್ಕೆ ತನ್ನದರಲ್ಲಿ ಅಷ್ಟನ್ನೋ ಇಷ್ಟನ್ನೋ ನೀಡಿ, ನೀಡಿದ್ದರ ನೂರ್ಮಡಿಯಷ್ಟು ಪಡಿಯಾಗಿ ಪಡೆಯುವ ಉಪಯೋಗ ದೃಷ್ಟಿಯಿಲ್ಲದೆ ತನ್ನಷ್ಟನ್ನೂ ತಾನೇ ನೀಡಿಕೊಂಡು ಭಾರತದ ಶಕ್ತಿಯ ಜೊತೆಗೆ ಕೂಡಿಕೊಳ್ಳುವ ಯೋಗದೃಷ್ಟಿ ಯಿಂದ ಮಡಿಯಿತು. ಈ ದುಡಿತ ತಾನೇ ಮಡಿಯುವಷ್ಟು ಹೆಚ್ಚಾದದ್ದ ರಿಂದ ಕರ್ನಾಟಕದ ಕರ್ಮಯೋಗ ನಿರುಪಯೋಗವೆನಿಸತೊಡಗಿತು. ಮಾತ್ರವಲ್ಲ ಅದರ ಯೋಗವೇ ಅದರ ಕರ್ಮಕ್ಕೆ ಕಾರಣವಾಯಿತು. ಒಮ್ಮನದಿಂದ ಸೇವೆಸಲ್ಲಿಸಿದ ಕನ್ನಡನಾಡು ಒಂದೇ ಮೈಯಾಗಬೇಕೆಂಬ ಬಯಕೆ ಕನ್ನಡಿಗರಲ್ಲಿಯೇ ಬಯಲಾಗಹತ್ತಿತು. ಅದಕ್ಕೆ ಕಾರಣ ಅದು ಅಸಾಧ್ಯ ಮತ್ತು ಅದು ಅಸಾಧುವೇನೋ ಅನ್ನುವ ಭಯ ; ಕೆಲವು ಸ್ವಾರ್ಥ ಪರರಲ್ಲಿ ಮನೆಮಾಡಿಕೊಂಡಿದ್ದ ನೈಚ್ಯಾನುಸಂಧಾನದ ಸ್ವಾರ್ಥಸಾಧನೆಯ ರಾಜಕೀಯ ನಯ. ಈ ನಯಭಯಗಳ ನಡುವೆ ಕರ್ನಾಟಕ ಏಕೀಕರಣದ ಜಯ ಬರಿಯ ನಾಟಕವಾಗಹತ್ತಿತು.

ಏಕೀಕರಣ ಶ್ರೀ ದೊಡ್ಡಮೇಟಿಯವರ ದೃಷ್ಟಿಯಲ್ಲಿ ರಾಜಕಾರಣ ಮಾತ್ರವಲ್ಲ—ರಾಜರಾಜೇಶ್ವರಿಯ ಕಾರ್ಯ. ರಾಜಕಾರಣಿಗಳು ನೋಡುವ ರಾಜಸ ತಾಮಸ ದೃಷ್ಟಿಯೇ ಏಕೀಕರಣಕ್ಕೆ ತಡೆಯಾಗಿ ತಡೆದದ್ದು. ಯಾವ ಆತ್ಮಬಲದಮೇಲೆ ನೆಲೆನಿಂತು ಪರಮಾತ್ಮನ ಅನುಗ್ರಹದ ಬೆಂಬಲ ವನ್ನು ಪಡೆದು ಭಾರತವು ಬಂಧಮುಕ್ತವಾಯಿತೋ ಆ ಆತ್ಮಬಲ,

ಪರಮಾತ್ಮನ ಬೆಂಬಲ ಕನ್ನಡಕ್ಕೂ ದೊರೆತಾಗಲೇ ಖಂಡಖಂಡವಾಗಿರುವ ಕರ್ನಾಟಕ ಅಖಂಡವಾಗುತ್ತದೆ ಎಂಬ ಮಹೋತ್ತುಂಗ ಮನೋಭಾವ ದೊಡ್ಡಮೇಟಿಯವರದು. ಅದಕ್ಕಾಗಿಯೇ ಪ್ರಥಮತಃ ಭಾರತಾಂತರ್ಗತ ಪರಾತ್ಪರ ಪರಮೇಶ್ವರಶಕ್ತಿಯನ್ನು ಕನ್ನಡಕ್ಕೆ ಕೃಪೆಮಾಡು ಎಂದು ಪ್ರಾರ್ಥಿಸಿದ್ದಾರೆ. ಕನ್ನಡದ ಅಳಲನ್ನು ಕಳೆಯುವ ಮನವನ್ನು ಭಾರತಿಯು ತನ್ನ ಹಿರಿಯ ಮಕ್ಕಳಲ್ಲಿ ಉಂಟುಮಾಡಿದಾಗ ಕನ್ನಡನಾಡು ಒಂದಾದೀತು ಎಂಬ ಅವರ ಅರಿಕೆ ಮತ್ತು ಹರಕೆ ಸಂದು ಕನ್ನಡನಾಡು ಒಂದಾಯಿತು. ದುರ್ದಮನೀಯ ಶತ್ರುಶಕ್ತಿಗಳೆಲ್ಲವೂ ಕನ್ನಡಮ್ಮನ ತಪಕ್ಕೆ ಮಣಿದವು.



ಭುವನೇಶ್ವರಿ

ತಾಯಿ ಭುವನೇಶ್ವರಿಯೆ ಕನ್ನಡಮಹಾಶಕ್ತಿ !
ರಾಜರಾಜರ ಮುಕುಟದಲಿದೆ ನಿನ್ನ ಪಾದಮುದ್ರೆ
ನಿನ್ನ ಕೃಪೆಯನೆ ಹೊತ್ತು ಹರಿಯುವಳು ತುಂಗಭದ್ರೆ !
ಭುವನಕಧೀಶ್ವರಿಯು ಅಲ್ಲವೆ ತಾಯಿ ನೀನು
ಸರ್ವವಿಧದಿಂ ಕುಸಿದ ಮಕ್ಕಳನ್ನೆತ್ತು ಸರ್ವೇಶ್ವರಿಯೆ !
ಓ ಮಾತೆ ಕನ್ನಡದ ಕುಲದೇವಿ !
ನಿತ್ಯ ಪೂಜ್ಯಳು ನೀನು—

ನಮ್ಮ ಹೃದಯ ಮಂದಿರದಲ್ಲಿ ನೀನೆ ಒಡಮೂಡು ಬಾ !
ನಿನ್ನ ಮಕ್ಕಳೆದೆಯಲ್ಲಿ ಮರವಾಗಿ ಬೆಳೆದಿರುವ
ಮನೆಮುರುಕತನವ ನೀ ಕಳೆಯೆ ತಾಯಿ !
ನಿನ್ನಡಿಗೆ ಪೊಡಮಟ್ಟು ಕೇಳುವೆವು :
ಒಂದೆ ಕಟ್ಟಿನಲಿ ನಮ್ಮ ಮನವನೊಲಿಸು
ಒಂದೆ ಕೂಟದಲಿ ನಮ್ಮ ಜನವ ನಿಲಿಸು !
ನಿನಗಾಗಿ ನಮ್ಮ ಗೆಲಿಸು !

ಭಾರತದ ಪರಾತ್ಪರಶಕ್ತಿಯೇ, ಪರಮೇಶ್ವರಿಯೇ ಕನ್ನಡನಾಡಿನ ನಾಡೊಡತಿ ಭುವನೇಶ್ವರಿ. ಪರವೂ, ಅಪರವೂ, ಪರಾತ್ಪರವೂ ಆದ ಪರಾಶಕ್ತಿಯ ಮಹದ್ರೂಪವನ್ನೇ ಕನ್ನಡಿಗರು ಭುವನೇಶ್ವರಿಯೆಂದು ಕರೆಯುವುದು. ಆ ಭುವನೇಶ್ವರಿಯನ್ನೇ ಮಹಾಶಕ್ತಿಯೆಂದು ಇಲ್ಲಿ ಕವಿ ಸಂಬೋಧಿಸಿರುವುದು. ರಾಜೇಶ್ವರಿಯಾದ ಆಕೆಯ ಪಾದಮುದ್ರೆಯು ರಾಜಾಧಿರಾಜರಾಗಿ ಮೆರೆದ ವಿಜಯನಗರದ ರಾಜಮಹಾರಾಜರ ಮಕುಟ ಮಣಿಯಾಗಿ ಮೆರೆದಿದೆ. ಆಕೆಯ ಕೃಪೆಯೇ ಕನ್ನಡನಾಡಿನಲ್ಲಿ ತುಂಗೆಯೂ, ಭದ್ರೆಯೂ ಆಗಿ ತುಂಗಭದ್ರಾ ರೂಪದಿಂದ ಹೊನಲುಗಟ್ಟಿ ಹರಿಯುತ್ತಿದೆ.

ವಿಜಯನಗರದ ಭವ್ಯತೆಯೆಲ್ಲವೂ ಭುವನೇಶ್ವರಿಯ ದಿವ್ಯತೆಯ ಅಂಕಿತದಲ್ಲಿರುವವರೆಗೂ ಅಚ್ಚಳಿಯದಂತಿತ್ತು. ಕನ್ನಡಕುಲದೇವಿಯಾದ ಆ ಕುಲನಾಯಕಿಯು ವಿದ್ಯಾರಣ್ಯರ ವೀರಸಾಧನೆಯ ಸಿದ್ಧಿಯ ಸಾಕ್ಷಾತ್ ಸ್ವರೂಪ. ತಮ್ಮದೆಲ್ಲವನ್ನೂ ಆಕೆಯದೆಂದಾಗ ಆಕೆ ಅವರವಳಾದಾಕೆ, ತಮ್ಮದನ್ನೂ ಆಕೆಯದೆಂದು ಅವರು ಉಳಿದರು. ಆಕೆಯದನ್ನೂ ತಮ್ಮದೆಂದವರು ಅಳಿದರು. ನಿತ್ಯಪೂಜ್ಯಳೂ, ನಿತ್ಯಳೂ ಆದ ಆಕೆಯ ಅನುಗ್ರಹದಿಂದ ಅನಿತ್ಯವೂ ನಿತ್ಯವಾಗಿ ಬಾಳುತ್ತದೆ. ಅನಿತ್ಯವೇ ನಿತ್ಯವೆನಿಸಿ ನಿತ್ಯವೂ ಸತ್ಯವೂ ಆದ ಆಕೆಯನ್ನು ಮರೆತಾಗ ಅನಿತ್ಯವೇ ಅನಿಷ್ಟವಾಗಿ ಪರಿಣಮಿಸುತ್ತದೆ. ತಾಯಿಯು ಅನುಗ್ರಹಿಸಿ ಕೊಡುವ ವಿಷವೂ ಅಮೃತವೇ. ಆಕೆಯನ್ನು ಬಿಟ್ಟು ಕುಡಿಯುವ ಅಮೃತವೂ ವಿಷವೇ.

ಸರ್ವಭುವನಾಧೀಶ್ವರಿಯಾದ ಭುವನೇಶ್ವರಿಯನ್ನು, ವಿಶ್ವೇಶ್ವರಿಯನ್ನು ನಮ್ಮ ಹೃದಯಮಂದಿರದಲ್ಲಿ ಒಡಮೂಡಿಸಿಕೊಂಡು, ಆಕೆಯ ಮಹಾಶಕ್ತಿಯ ಜೊತೆಗೆ ಒಡಗೂಡಿಕೊಂಡು ಆಕೆಯ ದಿವ್ಯಸಂಕಲ್ಪಾನುವರ್ತಿಗಳಾಗುವುದೇ ಕನ್ನಡಿಗರಾದ ನಮ್ಮ ಉದ್ಧಾರದ ಮಹಾಮಾರ್ಗ. ಆದರೆ

ಆ ಮಹಾಶಕ್ತಿಯು ನಮ್ಮ ಹೃದಯಮಂದಿರದಲ್ಲಿ ಒಡಮೂಡದೆ ಇರುವುದಕ್ಕೆ ಕಾರಣ ನಮ್ಮ ಅ ಹಂ ಕಾ ರ. ಸರ್ವಕಾರ್ಯಕಾರಣಳು ಆ ಸರ್ವೇಶ್ವರಿಯೇ ಎಂಬ ಅರಿವು ಅಚಂಚಲವಾದಾಗ ಸಂಪೂರ್ಣವಾಗಿ ಆ ಮಹಾಶಕ್ತಿಗೆ ನಾವು ಶರಣಾಗಿ ಶರಣರಾದಾಗ ಆಕೆ ತಾನೇ ನಾವಾಗಿ ತನ್ನ ಕೆಲಸ ಮಾಡುತ್ತಾಳೆ. ನಾವು ಕೆಲಸ ಮಾಡುತ್ತೇವೆ ನಿಜವಾದರೂ, ಅಹಂ ಕರ್ತೃತ್ವಾಭಿಮಾನದಿಂದ ಅಹಂಭೋಕ್ತೃತ್ವಾಭಿಮಾನದಿಂದ ಆ ಕೆಲಸವೆಲ್ಲ ಹೊಲಸಾಗಿದೆ. ಅಹಂಕಾರ ಮಮಕಾರಗಳಿಂದ ಮಲಿನವಾದ ಜ್ಞಾನ ಕ್ರಿಯಾಭಕ್ತಿಗಳು ಬಂಧನಹೇತುವಾಗಿ ಮುಕ್ತಿಯ ಮಾರ್ಗಕ್ಕೆ ಕಂಟಕಪ್ರಾಯವಾಗಿದೆ.

ಹಿಂದಿನ ಕನ್ನಡಿಗರು ತಮ್ಮ ಮನೆಯನ್ನೇ ಭಗವತಿಯ ಮಂದಿರವನ್ನಾಗಿ ಮಾಡಿದ್ದರು. ಇಂದಿನ ಕನ್ನಡಿಗರು—ಹೆಚ್ಚಾಗಿ ಹುಸಿಹೆಸರಿನ ಆಸೆ, ಅಶಾಶ್ವತ ಪ್ರತಿಷ್ಠೆಯ ಪ್ರಲೋಭನೆಗಳಿಗೆ ಬಲಿಯಾದ ಮುಂದಾದ ಕನ್ನಡಿಗರು ಕೆಲವರು ಮನೆಮುರುಕರಾಗಿ ಪರಿಣಮಿಸಿದ್ದರಿಂದ ಕನ್ನಡನಾಡೂ ಕನ್ನಡನುಡಿಯೂ ಕಂಗಾಲಾಗುವ ಹೊತ್ತು ಬಂತು. ಸ್ವಾರ್ಥದ ವಿಷಬೀಜವನ್ನು ಹೃದಯದಲ್ಲಿ ಬಿತ್ತಿಕೊಂಡಾಗ ಅದು ಮನೆಮುರುಕತನದ ಮರವಾಗಿ ಬೆಳೆದು ನಿಂತಿತು. ಅದು ಸಮೂಲವಾಗಿ ನಾಶವಾಗಬೇಕೆಂದರೆ ನಮ್ಮೆಲ್ಲರ ಹೃದಯಮಂದಿರಗಳಲ್ಲಿ ಸ್ವಾರ್ಥವು ಇಲ್ಲವಾಗಿ ಪರಾರ್ಥರೂಪಿಣಿಯೂ, ಪರಮಾರ್ಥರೂಪಿಣಿಯೂ ಆದ ಭಗವತಿಯು ಒಡಮೂಡಬೇಕು.

ಒಕ್ಕಟ್ಟಿಲ್ಲದೆ, ಒಕ್ಕೊರಳಿಲ್ಲದೆ ಯಾರಿಗವರೇ ಆಗಿರುವುದೇ ಎಲ್ಲರೂ ಹಾಳಾಗಲು ಕಾರಣ. ಖಂಡಖಂಡವಾಗಿ, ಹೆಂಡಬಂಡವಾಗಿ ಹರಿಹಂಚಾದ ಕನ್ನಡನಾಡಿನ ಮೈ ಒಂದಾಗಬೇಕಾದರೆ ಅದಕ್ಕೆ ಪೂರ್ವಭಾವಿಯಾಗಿ ಕನ್ನಡಿಗರ ಮನಸ್ಸು ಒಂದಾಗಬೇಕು. ಕನ್ನಡಿಗರ ಕೊರಳು ಒಂದಾಗಬೇಕಾದರೆ ಕನ್ನಡಿಗರ ಕರುಳೂ ಒಂದಾಗಬೇಕು. ಹೊರಗಿನ ಏಕತ್ವ ಸಿದ್ಧಿಗೆ ಒಳಗಿನ ಏಕತ್ವವೇ ಸಾಧನೆ. ಈ ಸಾಧನೆಯೂ, ಈ ಸಿದ್ಧಿಯೂ ಆಕೆಯ ಕೃಪೆಯಿಂದ ಮಾತ್ರವೇ ಸಾಧ್ಯವಾದದ್ದರಿಂದ ಆ ಮಹಾಶಕ್ತಿಯ ಪಾದಕ್ಕೆ ಪ್ರೊಡಮಟ್ಟು ಅನನ್ಯಭಕ್ತಿಯಿಂದ ಬೇಡಬೇಕಾಗಿದೆ. ನಾವು ಗೆಲ್ಲ

ಬೇಕಾದದ್ದು ಆಕೆಗಾಗಿಯೇ ಆದ್ದರಿಂದ ಆಕೆಯೇ ನಮ್ಮನ್ನು ಗೆಲಿಸ ಬೇಕಾಗಿದೆ.

ಈ ಸ್ತೋತ್ರದಲ್ಲಿ ಉಕ್ತವಾಗಿರುವ :

೧. ರಾಜರಾಜರ ಮಕುಟದಲಿದೆ ನಿನ್ನಪಾದಮುದ್ರೆ
ನಿನ್ನ ಕೃಪೆಯನೆ ಹೊತ್ತು ಹರಿಯುವಳು ತುಂಗಭದ್ರೆ !

೨. ನಿನ್ನ ಮಕ್ಕಳೆದೆಯಲ್ಲಿ ಮರವಾಗಿ ಬೆಳೆದಿರುವ
ಮನೆಮುರುಕತನವ ನೀಕಳೆಯೆ ತಾಯಿ !

೩. ನಿನ್ನಡಿಗೆ ಪೊಡಮಟ್ಟು ಕೇಳುವೆವು
ಒಂದೆ ಕಟ್ಟನಲಿ ನಮ್ಮ ಮನವನೊಲಿಸು
ಒಂದೆ ಕೂಟದಲಿ ನಮ್ಮ ಜನವನಿಲಿಸು !
ನಿನಗಾಗಿ ನಮ್ಮಗೆಲಿಸು !

—ಎಂಬ ಮಾತುಗಳು ಕವಿಯು ಕಾಲ್ಪನಿಕಶಕ್ತಿಯಿಂದ ಕಟ್ಟಿದ ಮಾತುಗಳಲ್ಲ. ಈ ಭಾವವೂ, ಈ ಭಾಷೆಯೂ ಮನಸ್ಸಿನ ಸಾಮಾನ್ಯ ಮಟ್ಟದಿಂದ ಅತಿ ಮೇಲಿರುವ ಉನ್ಮನೋವಲಯದಿಂದ ಹರಿದುಬಂದ ಜ್ಯೋತಿರ್ವಾಹಿನಿ.



ಮಹೇಶ್ವರಿ

ಓ ಕನ್ನಡ ಮಹೇಶ್ವರಿಯೇ !
ವಾತಾಪಿ ಪುರವಾಸಿನೀ ತಾಯಿ ಬನಶಂಕರಿಯೆ
ಶಂಕರಿ ಶಿವಂಕರಿಯೆ !
ವೃದ್ಧಿವರ್ಧಿನಿಯೆ, ವೈಭವವಿಧಾತ್ರಿ ನೀನು !
ಓ ತಾಯಿ !

ನಿನ್ನ ಮಹೊನ್ನತಿಯ ಗಂಭೀರಘೋಷವನು
ಕೂಗುತಿದೆ ಕೊರಳೆತ್ತಿ ಕಲೆಯೆ ಕಲ್ಲಾಗಿ !
ನಮ್ಮೆದೆಯ ಸ್ವಾರ್ಥ ತಿಮಿರವನು
ನಿನ್ನ ಕರವಾಳಕಾಂತಿಯಿಂ ಕಳೆಯೆದೇವಿ !
ಹತ್ತುದಿಕ್ಕಿನಿಂ ಮುತ್ತಿ ಮುತ್ತೇರಿ ಬರುತಿರುವ
ಘೋರಭಯ ದೈನ್ಯಕ್ಷುದ್ರತೆಯ ಪರಿಹರಿಸಿ
ದಿವ್ಯಧೀರತೆ ನೀಡು ಅನ್ನಪೂರ್ಣೆ !
ನಿನ್ನ ಸಂತಪ್ತ ಸಂತಾನದೆದೆಯಲ್ಲಿ
ನೀನೆ ಆವಿರ್ಭವಿಸು :
ದಿವ್ಯ ಸಾಂತ್ವನವಾಗಿ !
ಓ ತಾಯಿ !

ನಿನ್ನ ಸಾನ್ನಿಧ್ಯದಲಿ ನನ್ನ ಕನ್ನಡ ಕುಲಕೆ
ಭೂಮಾನುಭೂತಿಯನು ಕರುಣಿಸಮ್ಮ !

೩

ಕನ್ನಡದ ಮಹೇಶ್ವರಿಯೂ, ಕರ್ನಾಟಕ ಮಹೇಶ್ವರಿಯೂ ಆದಾಕೆ ಬನಶಂಕರಿ. ಆಕೆ ಶಂಕರಿ ಶಿವಂಕರಿ!

ಬನಶಂಕರಿಯನ್ನೇ ನಾಡೊಡತಿಯನ್ನಾಗಿ ಮಾಡಿಕೊಂಡು, ಆಕೆಯನ್ನೇ ನಾಡದೇವಿಯಾಗಿ ಆರಾಧಿಸಿ ವೈಭವೋಪೇತರಾಗಿ ಆಳಿದರು ಹಿಂದಿನ ಕನ್ನಡದ ಅರಸು ಮಕ್ಕಳಾದ ಚಾಳುಕ್ಯರು ರಾಜ್ಯ ವಿಸ್ತರಣಾ ಕಾಂಕ್ಷೆಯಿಂದ ಮೇಲಿದ್ದ ಹರ್ಷವರ್ಧನ ಕೆಳಕ್ಕಿಳಿದು ಬಂದು ಕನ್ನಡನಾಡನ್ನು ಕಬಳಿಸಲೆಳಸಿದಾಗ, ವಾತಾಪಿ ನಗರವೇ ರಾಜಧಾನಿಯಾಗಿ ಆಳುತ್ತಿದ್ದ ಪ್ರೌಢಪ್ರತಾಪಿ ಪುಲಕೇಶಿ ಅವನನ್ನು ಪರಾಜಯಗೊಳಿಸಿದ್ದು ಇತಿಹಾಸ ಪ್ರಸಿದ್ಧವಿದೆ. ಈ ಐತಿಹಾಸಿಕ ಘಟನೆ ಎತ್ತಿ ಹೇಳುವ ಒತ್ತಿ ಹೇಳುವ ಮಾತೆಂದರೆ—ಕನ್ನಡಿಗರು ಪರಾಕ್ರಮಶೀಲರೇ ಹೊರತು ಪರಾಕ್ರಮಣ ಶೀಲರಲ್ಲ.

ಮಹೇಶ್ವರಿಯಾದ ಬನಶಂಕರಿಯನ್ನು ಮರೆಯದೆ ಆಕೆಯನ್ನೇ ನೆರೆ ನಂಬಿರುವವರೆಗೂ ವನವೆಲ್ಲವೂ ಪಟ್ಟಣವಾಗಿ ಪ್ರಕಾಶಿಸಿತು. ಆಕೆಯನ್ನು ಮರೆತಾಗ ಪಟ್ಟಣವೇ ವನವಾಯಿತು. ಕನ್ನಡನಾಡು ಕಗ್ಗಾಡಾಯಿತು. ವೈಭವೋಪೇತವಾಗಿದ್ದ ರಾಜ್ಯ ಗತವೈಭವಪ್ರೇತವಾಯಿತು. ಈ ಕಾಡಿನಲ್ಲಿ ಮರವೆಯ ಮಹಾಂಧಕಾರದಲ್ಲಿ, ಸ್ವಾರ್ಥತಿಮಿರದಲ್ಲಿ ಕನ್ನಡಿಗರು ಬಡಬಡಿಸಿದರೂ ಫಲವಿಲ್ಲ-ಬಡಿದಾಡಿದರೂ ಫಲವಿಲ್ಲ. ನಮ್ಮ ವೈಮನಗಳಿಗೆ ಮುತ್ತಿಕೊಂಡಿರುವ ಮೆತ್ತಿಕೊಂಡಿರುವ ಸ್ವಾರ್ಥಾಂಧಕಾರವು ಕಳೆಯಬೇಕಾದರೆ ಮಮತೆಯಮಲದಿಂದ ಮುಕ್ತರಾಗಿ, ಸಮತೆಯಬಲದಿಂದ ಯುಕ್ತರಾಗಿ ಮೇಲೇರಿ ಬರುತ್ತಿರುವ ವೈರಿವರ್ಗಗಳನ್ನು ಗೆಲ್ಲಬೇಕಾದರೆ ಮಹೇಶ್ವರಿಯ ಮಹಾಯುಧವಾದ ಕರವಾಳ ಕಾಂತಿಯೇ ಶರಣ್ಯ. ಕರವಾಳವು ಕಾಂತಿ ಮತ್ತು ಕ್ರಾಂತಿದ್ಯೋತಕ. ಕ್ರಾಂತಿ, ಭ್ರಾಂತಿಜನ್ಯವಾಗಿರಬಾರದು. ನಿರ್ಭ್ರಾಂತಿಯೂ ಶಾಂತಿಯೂ ಕನ್ನಡ ಕ್ರಾಂತಿಯ ತಳಹದಿ. ಒಳಹೊರಗಿನ

ಕಾಂತಿ ಮತ್ತು ಉತ್ಕ್ರಾಂತಿಯೇ ಅದರ ಮಹೋದ್ದೇಶ. ಸ್ವಾರ್ಥತೆಯ ಕತ್ತಲೆ ಕಳೆಯುವ ಶಕ್ತಿಯಿರುವುದು ಪರಾರ್ಥರೂಪಿಯೂ ಪರಮಾರ್ಥ ರೂಪಿಯೂ ಆದ ಮಹೇಶ್ವರಿಯ ಕರವಾಳಕಾಂತಿಗೊಂದಕ್ಕೇ. ಹೊರಗಿನ ಶತ್ರುತಂಡಗಳು ನಮ್ಮ ಮೈ ಮುತ್ತಿಕೊಂಡು ನಮ್ಮ ಉತ್ಕ್ರಾಂತಿಪಥಕ್ಕೆ ಉದ್ಧಾರಮಾರ್ಗಕ್ಕೆ ಅಡ್ಡವಾಗಿರುವಂತೆ ನಮ್ಮೊಳಗಿನ ಶತ್ರುತಂಡಗಳು ನಮ್ಮ ಮನಸ್ಸಿಗೆ ಮುತ್ತಿಕೊಂಡು ಸಂಕುಚಿತಗೊಳಿಸಿವೆ. ಭಯ, ದೈನ್ಯತೆ, ಕ್ಷುದ್ರತೆ, ದಾರಿದ್ರ್ಯಗಳೇ ನಮ್ಮ ಅಂತಶ್ಶತ್ರು ಸಮುದಾಯ. ಈ ಅಭ್ಯಂತರ ಶತ್ರು ಸಂಹರಣ ಹೇತುವಾದದ್ದು ದಿವ್ಯಧೀರತೆ ಮಾತ್ರ. ಪಾರ್ಥಿವ ರಜೋಗುಣ ಪ್ರಚೋದಿತವಾದ, ಪ್ರಾಕೃತ ಗುಣತ್ರಯ ಪ್ರಪೋಷಿತವಾದ ಧೀರತೆ ಸಾಲದು. ಭಗವತಿಯು ಒಲಿದು ನೀಡುವ ಧೀರತೆಯೇ ದಿವ್ಯ ಧೀರತೆ. ನಮ್ಮ ಹುಟ್ಟಿಗೆ ಹೇತುವಾಗಿ ಮೈನೀಡಿ ಮಾತೆಯಾದ, ಮೈಯ ಬಲವನ್ನು ಬೆಳೆಸುವ ಅನ್ನವನ್ನು ನೀಡಿ ಅನ್ನಪೂರ್ಣೆಯಾದ ಆ ಮಹೇಶ್ವರಿಯೇ ನಮಗೆ ದಿವ್ಯಧೀರತೆಯ ಆತ್ಮಬಲವನ್ನೂ ನೀಡಬೇಕು.

ಮಹಾಶಕ್ತಿಯ ಕೈಯೊಳಗಿನ ವೀರ ಕರವಾಲದಂತಾಗಬೇಕು ಕನ್ನಡದ ಭಕ್ತನಾದವನು. ಭಗವಾನ್ ಶ್ರೀ ಅರವಿಂದರ ಈ ಮಾತುಗಳು ಮನನೀಯವಾಗಿವೆ:

"There is no greater pride and glory than to be a perfect instrument of the master".

The sword did not ask to be made, nor does it resist its user, nor lament when it is broken.

ಆತ್ಮತಂತ್ರಳಾದ ಪರಾಶಕ್ತಿಗೆ ಪರತಂತ್ರವಾಗುವುದೇ ಶ್ರೇಷ್ಠವಾದ ಸ್ವಾತಂತ್ರ್ಯ. ಏಕೆಂದರೆ ಸ್ವಃ ಪರ ರೂಪಿಣಿ ಆಕೆಯೇ. ಇದಂತಾ, ಅಹಂತಾ, ಪರಾಹಂತಾ – ಇವು ಮೂರೂ ಆಕೆಯ ವಿರೂಪತ್ರಯಗಳೇ !

ಕಷ್ಟ ಕಾರ್ಪಣ್ಯಗಳ ಅವಾಂತರದಲ್ಲಿ ಅವಸ್ಥೆಪಟ್ಟು ಸಂತಪ್ತಮಾನಸರಾದ ಆಕೆಯ ಮಕ್ಕಳೆದೆಯಲ್ಲಿ ಸುಧಾಮತಿಯಾದ ಆ ಮಹಾಮಾತೆಯೇ ದಿವ್ಯ ಸಾಂತ್ವನವಾಗಿ ಮೂಡಿ ಬರಬೇಕು. ಅದಕ್ಕೆ ಕಾಲವೂ ಕೂಡಿ ಬರಬೇಕು.

ವೈಭವ ವಿಧಾತ್ರಿಯಾದ ಬನಶಂಕರಿಯನ್ನು ಕಲಾವೈಭವಗಳಿಂದ ಬಾದಾಮಿಯಲ್ಲಿ ಕಲಾಪ್ರೇಮಿಗಳಾದ ಚಾಳುಕ್ಯರು ನೆಲೆಗೊಳಿಸಿದರು. ಕಲಾ ರೂಪಿಯಾದ ಆ ಮಹಾಶಕ್ತಿಯ ಪಾದಪೂಜೆಯಲ್ಲಿ ಕಲ್ಲೂ ಕಲೆಯಾಗಿ ಅರಳಿ ನಿಂತಿತು. ಕಲೆಯು ಆಕೆಯ ಸ್ವರೂಪವೆಂಬುದನು ಮರೆತು ಮರ್ತ್ಯಪ್ರಜ್ಞೆಯ ಮಾನವನ ಕೃತಕಕಲ್ಪನೆಯೇ ಕಲೆಯೆಂಬ ಭಾವವೇ ಸಂಭಾವ್ಯವಾದಾಗ, ಕಲೆಯೆಂದರೆ ಯೋಗವೆಂಬ ದೃಷ್ಟಿ ಹೋಗಿ, ಕಲೆಯನ್ನು ಉಪಯೋಗ ದೃಷ್ಟಿಯಿಂದ ನೋಡಹತ್ತಿದಾಗ ಕಲೆಯೇ ಕಲ್ಲಾಗಿ ಉರುಳಿತು.

ಬಾದಾಮಿಯ ಮತ್ತು ಬನಶಂಕರಿಯ ಅಭೂತಪೂರ್ವ ಮಹೋನ್ನತಿಯ ಗತವೈಭವದ ಗಂಭೀರಘೋಷವನ್ನು ಕಲೆಯ ನೆಲೆವನೆಯಾದ ಅಲ್ಲಿಯ ಕಲ್ಲೇ ಕೊರಳೆತ್ತಿ ಕೂಗುತ್ತಿದೆ. ಆ ಅಶೃತವಾಣಿಯನ್ನು ಕೇಳಿ, ಆ ಅಭಿವ್ಯಕ್ತ ಶ್ರೀರೂಪವನ್ನು ಕಂಡು, ದಿವ್ಯಧೀರತೆಯನ್ನು ಪಡಕೊಂಡು ಸರ್ವೈಶ್ವರ್ಯ ಸಂಪೂರ್ಣವಾದ ಸಕಲಕಲಾಸಂಪೂಜ್ಯವಾದ, ಅಂತರ್ಮುಖ ಸಮಾರಾಧ್ಯವೂ ಬಹಿರ್ಮುಖ ಸುದುರ್ಲಭವೂ ಆದ ಆಕೆಯ ವಿಶ್ವವಿಭೂತಿಯನ್ನು ಸಂದರ್ಶಿಸಿದಾಗ, ಆಗುವ ಮಹದನುಭೂತಿ ಭವ್ಯಭೂಮಾನುಭೂತಿ. ಅದುವೇ ದಿವ್ಯ ಆತ್ಮಾನುಭೂತಿ! ಬನಶಂಕರಿಯ ಕೃಪೆಯಿಂದ ಭವ್ಯವೂ ದಿವ್ಯವೂ ಆದ ಈಭೂಮಾನುಭೂತಿ ಕನ್ನಡ ಕುಲಕ್ಕೆ ಒದಗಿ ಬರಬೇಕು. ತನ್ಮೂಲಕ ಕನ್ನಡ ನೆಲಕ್ಕೆ ಒದಗಿ ಬರಬೇಕು.

'ನಖದೀಧಿತಿ ಸಂಛನ್ನ ನಮಜ್ಜನತಮೋಗುಣ
ಪದದ್ವಯ ಪ್ರಭಾಜಾಲ ಪರೀಕೃತ ಸರೋರುಹ'

—ಶ್ರೀ ಲಲಿತಾ ಸಹಸ್ರನಾಮ



ಮಹಾಕಾಳಿ

೪

ಓ ಕನ್ನಡ ಮಹಾಕಾಳಿ ಚಂಡಿ
ಚಾಮುಂಡಿ !
ಮಹಿಷಮರ್ದಿನಿಯೆ ಈಶ್ವರಿ
ರಾಜರಾಜೇಶ್ವರಿ !
ಬರಿ ಮೈಸೂರ ಕುಲದೇವಿ ನೀನಲ್ಲ ತಾಯಿ—
ಸಮಸ್ತ ಕನ್ನಡಿಗರಧಿದೇವಿ ನೀನು !
ಮೈಸೂರ ಮಕ್ಕಳ ಮನದದ್ವೈತವ ದಹಿಸಿ
ಅವರೆದೆಯ ಶಂಕೆ ಭಯಗಳನು ಸಂಹರಿಸಿ
ವೀರ ಮಾರ್ಗವ ತೋರ್ದೆ ಸಿಂಹವಾಹಿನಿಯೆ !
ಸುಪ್ತ ಚೇತನವನೆಚ್ಚರಿಸು, ನಿನ್ನ ಕಾರ್ಯಕ್ಕೆ
ನಮ್ಮನಣಿಗೊಳಿಸಿ ಉದ್ದಂಡ ಧೈರ್ಯವ ನೀಡು !
ಭಿನ್ನಭಾವವ ತೊರೆದು ಸ್ವಾರ್ಥ ಬಂಧವ ಹರಿದು
ಮುಂಬರುವ : ಮುಂಬರಿವ ಬಲವ ನೀಡು !
ನಿನ್ನ ಭಕ್ತರ ನೆತ್ತರಲಿ ಕಾವೇರಿ
ಹರಿವಂತೆ ಹರಸು ತಾಯಿ : ರುದ್ರೆ ಭದ್ರಕಾಳಿ !

೪

ಕಾಲ ದೇಶ ಪರಿಸ್ಥಿತಿಗಳು ತಮೋವೃತವಾಗಿ ರಾಕ್ಷಸಾಧೀನವಾದಾಗ, ಆಸುರೀಶಕ್ತಿಯೇ ನೆಲವನ್ನಾಳುವ ಅರಸೊತ್ತಿಗೆ ವಹಿಸಿದಾಗ ಮಹಾಕಾಳಿಯ ಅವತಾರವಾಗುತ್ತದೆ. ಮಹೇಶ್ವರಿಯೇ ಮಹಾಕಾಳಿಯಾಗಿ ಅವತರಿಸುತ್ತಾಳೆ.

ಪ್ರಚಂಡರಾದ ಚಂಡ ಮುಂಡಾಸುರರನ್ನು ಸಂಹರಿಸಿ ಚಾಮುಂಡ್ಯಭಿದಾನದಿಂದ ಕನ್ನಡಿಗರಿಗೆ ಸಂಪೂಜ್ಯಳಾದ ಮಹಾಕಾಳಿ ಮಹಿಷಾಸುರನನ್ನೂ ಆಹವದಿ ಗೆದ್ದ ಮಹಿಷಮರ್ದಿನಿ. ಮಹಿಷಾಸುರನ ರಕ್ಕಸಾಡಳಿತದಲ್ಲಿ ಇದ್ದ ಮಹಿಷಪುರಿ 'ಮಹಾಕಾಮೇಶ ಮಹಿಷಿ'ಯಾದ ಚಾಮುಂಡಿಯ ವೀರವಿಜಯದಿಂದ ಮೈಸೂರಾಯಿತು. ದೇವತೆಗಳಿಗೆಲ್ಲ ಕಾಲ ಸ್ವರೂಪನಾಗಿದ್ದ ಮಹಿಷಾಸುರನನ್ನು ಕಾಲಾತೀತಳಾದ ಮಹಾಕಾಳಿ ಸಂಹರಿಸಿ ತನ್ನ ದೇವಕಾರ್ಯವನ್ನು ನೆರವೇರಿಸಿದಳು.

ಚಾಮುಂಡಿ ಸಮಸ್ತ ಕನ್ನಡ ಕುಲದ ಕುಲನಾಯಕಿ. ಮೈಸೂರು ಆ ಮಹಾಮಾತೆಯ ಗರ್ಭಗುಡಿಯಷ್ಟೆ. ರಾಜರಾಜೇಶ್ವರಿಯಾದ ಆಕೆಯ ನೆಲವನ್ನು ಆಕೆಗಾಗಿ ಆಳಿದ ಮೈಸೂರ ಅರಸು ಮನೆತನ ಆಕೆಯ ಕೃಪಾಹಸ್ತದಿಂದ ಪೋಷಿತವಾದದ್ದು.

ಕನ್ನಡರಾಜ್ಯ ರಮಾರಮಣರೆನಿಸಿಕೊಂಡು ವಿಜಯನಗರದ ರಾಜರ ಪತನಾನಂತರ ಆ ಅಭಿದಾನಕ್ಕೂ ಆ ಅಭಿಮಾನಕ್ಕೂ ಸಾರ್ಥಕ್ಯವೊದಗುವಂತೆ ಎಲ್ಲ ಕನ್ನಡಿಗರ ಆದರಕ್ಕೆ ಆದ್ಯರಾಗಿ ಆಳಿದವರು ಮೈಸೂರರಸರು. ಕನ್ನಡಿಗರೆಲ್ಲರೂ ಮೈಸೂರರಸರನ್ನು ತಮ್ಮ ಅರಸರೆಂದೂ ಮೈಸೂರನ್ನೇ ತನ್ನ ಮನೆಮಾಡಿಕೊಂಡು ನೆಲೆಸಿದ ಮಹಾಕಾಳಿ ಚಾಮುಂಡಿಯನು ತಮ್ಮೆಲ್ಲರ ಅಧಿದೇವತೆಯೆಂದೂ ಭಾವಿಸಿದರಾಗಲಿ, ಮೈಸೂರಿನ ಜನ ಮಾತ್ರ ಮೈಸೂರು ಮಾತ್ರವೇ ಕನ್ನಡವೆಂದು ಬಗೆಯುವ ಸಂಕುಚಿತಭಾವವನ್ನು ತೀರಾ ಇತ್ತೀಚಿಗೆ ತಳೆಯಹತ್ತಿತು. ಕನ್ನಡಿಗರ ದೃಷ್ಟಿಯಲ್ಲಿ ಮೈಸೂರಿತ್ತಾಗಲಿ ಮೈಸೂರಿನ ದೃಷ್ಟಿಯಲ್ಲಿ ಕನ್ನಡವಿರಲಿಲ್ಲ; ಕನ್ನಡಿಗರೆಲ್ಲರೂ

ಇರಲಿಲ್ಲ. ಕನ್ನಡಿಗರೆಲ್ಲರೂ ಒಂದು ಎಂಬ ಅಖಂಡ ದೃಷ್ಟಿ ಮೈಸೂರಿನ ರಾಜಕಾರಣದಲ್ಲಿ ಮೂಡಿಬರದಿರುವುದೇ ಕರ್ನಾಟಕ ಏಕೀಕರಣಕ್ಕೆ ಆಗಿದ್ದ ದೊಡ್ಡ ಅಡ್ಡಿ. ಆಸುರೀಶಕ್ತಿಗಳ ಹಿಡಿತಕ್ಕೆ ಸಿಕ್ಕಿಬಿದ್ದ ರಾಜಕಾರಣಿಗಳ ಮನದ ದ್ವೈತಭಾವವೇ ಅದ್ವಯವಾದ ಅಖಂಡವಾದ ಕರ್ನಾಟಕವು ಬೇಗನೆ ರೂಪುಗೊಳ್ಳುವಂತೆ ಆಗದಿರಲು ಕಾರಣವಾಯಿತು. ರಾಜರಾಜೇಶ್ವರಿಯ ಸಂಕಲ್ಪವನ್ನೇ ಅರಿಯದಿದ್ದ ರಾಜಕಾರಣಿಗಳ ಈ ಇಬ್ಬಗೆಗೆ ಬೆಂಬಲ ಕೊಟ್ಟದ್ದು ರಾಜರಾಜೇಶ್ವರಿಯ ಸಂಕಲ್ಪವನ್ನು ಮರೆತಿದ್ದ ಸ್ವಾರ್ಥಿಸಾಹಿತಿಗಳ ತೂತುಮಾತು. ಕರ್ನಾಟಕ ಏಕೀಕರಣಕ್ಕೆ ಪೂರ್ವಭಾವಿಯಾಗಿ ಕನ್ನಡಿಗರ ಮನಸ್ಸನ್ನುಒಗ್ಗೂಡಿಸುವ ಸ್ತುತ್ಯಪ್ರಯತ್ನಶೀಲರಾದವರು ಸಾಹಿತಿಗಳು. ಯಾವ ಸಾಹಿತಿಗಳು ಏಕೀಕರಣದ ಬಗ್ಗೆ ತೀವ್ರವಾದಿಗಳಾಗಿದ್ದರೋ ಅವರೇ ತೀರಾ ಬಿಕ್ಕಟ್ಟಿನ ಸಮಯದಲ್ಲಿ ಒಕ್ಕಟ್ಟಿನ ಮಾತು ಬಿಟ್ಟು ಇಕ್ಕಟ್ಟಿನ ಮಾತು ಮುಂದೆ ಮಾಡಹತ್ತಿದರು. ರಾಜಕಾರಣಿಗಳ ರಜೋಗುಣಕ್ಕೆ ಸಾಹಿತಿಗಳ ಅಸಾತ್ವಿಕ ಸತ್ತ್ವ ಸಹಾಯಕಾರಿಯಾಗಿ ಸಹಜವಾದದ್ದೂ ಅಸಹಜವೆನಿಸತೊಡಗಿತು. ಮೊಲ ಎದ್ದಾಗ ಮಲಗಿದ ಬೇಟೆನಾಯಿಯಂತೆ ಸತ್ತ್ವಶಾಲಿಗಳಾಗಿ ಮುಂದೆ ಬಂದು ಮಾರ್ಗದರ್ಶನ ಮಾಡಬೇಕಾದ ಸಮಯ ಒದಗಿ ಬಂದಾಗ ಕೆಲವು ಸಾಹಿತಿಗಳು ನಿರ್ವಿಣ್ಣರಾದರು; ಕೆಲವು ಸಾಹಿತಿಗಳು ಸ್ವಾರ್ಥದೃಷ್ಟಿಯಿಂದ ರಾಜಕಾರಣಿಗಳ ಬೆಂಬಲಿಗರಾದರು. ಈ ಮಾತು ಮೈಸೂರಿನ ಕೆಲವು ರಾಜಕಾರಣಿಗಳಿಗೆ ಕೆಲವು ಸಾಹಿತಿಗಳಿಗೆ ಮಾತ್ರ ಅನ್ವಯಿಸುತ್ತದೆ. ಮೊದಲಿನಿಂದಲೂ ಒಂದೇ ಸಮನಾಗಿ ತಮ್ಮ ಕವಿವಾಣಿಯಿಂದ ಕನ್ನಡಿಗರ ಮನಸ್ಸನ್ನು ಅರಳಿಸಿದ, ಅರಳಿದ ಮನಸ್ಸನ್ನು ಏಕೀಕರಣದತ್ತ ಹೊರಳಿಸಿದ ಕುವೆಂಪುವನ್ನೂ, ಬರೆಹದ ಮೂಲಕವಾಗಿಯೂ ಭಾಷಣಗಳ ಮೂಲಕವಾಗಿಯೂ ಕನ್ನಡದ ಕೆಚ್ಚನ್ನು ಕೆರಳಿಸಿದ ಕರ್ನಾಟಕವೇ ಮನೆಯಾಗಿ ಕನ್ನಡವೇ ಮನವಾದ ಕೃಷ್ಣರಾಯರನ್ನೂ, ಪತ್ರಿಕೋದ್ಯಮದಲ್ಲಿ ಕನ್ನಡದ ಹಿತನನ್ನೇ ಉದ್ದೇಶವಾಗಿಟ್ಟುಕೊಂಡು ಸಾಗಿದ ಶಿವಮೂರ್ತಿಶಾಸ್ತ್ರಿಗಳನ್ನೂ ಕನ್ನಡನಾಡು ಯಾವಾಗಲೂ ಪೂಜ್ಯದೃಷ್ಟಿಯಿಂದ ನೋಡಿದೆ. ಭಾವುಕರಾದ ಕೃಷ್ಣರಾಯರು ಏಕೀಕರಣ ಪ್ರಶ್ನೆಯನ್ನು ಬೌದ್ಧಿಕವಾಗಿಯೂ ಪರಿಷ್ಕೃತವಾದ ರೀತಿಯಲ್ಲಿ ಸರ್ವಸಮ್ಮತವಾಗುವಂತೆ ನಿರ್ಧರಿಸಿದ್ದಾರೆ.

ಅವರ 'ಅಖಂಡ ಕರ್ನಾಟಕ' ಸಂಶಯಾತ್ಮರ ಶಂಕಾಕಂಪಿತ ಸವಾಲುಗಳಿಗೆ ಸರ್ವಾಂಗೀಣ ಸಮಾಧಾನ. ಆದರೂ ಮೈಸೂರಿನ ಕನ್ನಡಿಗರಲ್ಲಿ ಯಾವ ಸಂಶಯಗಳನ್ನು ಕುವೆಂಪು ಕೃಷ್ಣರಾಯರಂತಹ ಶ್ರೇಷ್ಠ ಸಾಹಿತಿಗಳು ಕಳೆಯಲು ಪ್ರಯತ್ನಿಸಿದ್ದರೋ ಆ ಸಂಶಯಗಳನ್ನೇ ಉಳಿದ ಕೆಲವರು ಸ್ವಹಿತರತರು ವಿಷಬೀಜವಾಗಿ ಬಿತ್ತಹತ್ತಿದರು. ಇದನ್ನು ನೆನೆಸಿಕೊಂಡರೆ ದೇವೀ ಮಹಾತ್ಮೆಯ ರಕ್ತಾಬೀಜಾಸುರನ ಆಖ್ಯಾಯಿಕೆ ನೆನಪಿಗೆ ಬರುತ್ತದೆ. ಚಾಮುಂಡಿ ರಕ್ತಬೀಜನನ್ನು ಕೊಲ್ಲಲೆಳಸಿ ಖಡ್ಗದಿಂದ ಹೊಡೆಯುತ್ತಾಳೆ. ಅವನು ಸಾಯುವ ಬದಲು ನೆಲದ ಮೇಲೆ ಚಿಮ್ಮಿದ ರಕ್ತದ ಹನಿಗಳಿಂದ ಅವನಂತಹ ರಕ್ತಬೀಜರು ಉದ್ಭವಿಸುತ್ತಾರೆ. ಅವರನ್ನು ಇರಿದಾಗ ಅವರಿಂದ ಅವರಂತಹ ಅನೇಕರು ಹುಟ್ಟುತ್ತಲೇ ಹೋಗುತ್ತಾರೆ. ದುಷ್ಟ ಸಂಹಾರಕ್ಕೆ ನಿಂತ ಮಹಾಕಾಳಿಯೇ ದುಷ್ಟಸೃಷ್ಟಿಗೆ ಕಾರಣಳಾದಳೆನಿಸುವಂತಾಗುತ್ತದೆ. ಆಗ ಆಕೆಯು ನೆಲಕ್ಕೆಲ್ಲಾ ನಾಲಗೆ ಹಾಸಿ ರಕ್ತಬಿಂದುವು ಭೂಗತವಾಗದಂತೆ ಸ್ವಗತವಾಗಿ ಸವ್ಯೈಕ್ಯಮಾಡಿಕೊಳ್ಳುತ್ತಾಳೆ. ಭಗವತಿಯ ವಿರಕ್ತಭಾವದ ವಿರಾಡ್ಗರ್ಭದಲ್ಲಿ ರಕ್ತಬೀಜಾಸುರರು ನಿರಕ್ತರಾಗುತ್ತಾರೆ. ಹಾಗೆಯೇ ಸಂಶಯಸಂತಾನ ನಿರ್ಮೂಲವಾಗಬೇಕಾದರೆ ಭಗವಚ್ಛಕ್ತಿಯ ಅವತರಣಿಕೆ ಅತ್ಯಾವಶ್ಯಕ. ಅದಕ್ಕಾಗಿಯೇ ಈ ಸ್ತೋತ್ರದಲ್ಲಿ ಆ ಮಹಾಕಾಳಿಯ ಶ್ರೀ ಪಾದಕ್ಕೆ ಮೊರೆಯಿಡಲಾಗಿದೆ.

ಮಹೀಶೂರರಾದ ಮೈಸೂರು ಕನ್ನಡಿಗರನ್ನು ಕಾಡುತ್ತಿರುವ ಮನದ ದ್ವೈತಭಾವವನ್ನು ತನ್ನ ನಿಟಲಾಕ್ಷಿಯಿಂದ ದಹಿಸಿ, ನಿರ್ದ್ವಂದ್ವಭಾವದಿಂದ ಅಖಂಡ ಕರ್ನಾಟಕವೂ ತಮ್ಮ ಮನೆಯೇ ಎಲ್ಲ ಕನ್ನಡಿಗರೂ ತಮ್ಮ ಸೋದರರೇ ಎಂಬ ವಿಶಾಲ ಭಾವನೆಯನ್ನು ವಹಿಸಿ ಅವರು ಮುನ್ನಡೆಯಬೇಕಾದ ವೀರಮಾರ್ಗವನ್ನು ವೀರಾರಾಧ್ಯಳೂ, ವೀರಮಾತೆಯೂ ಆದ ರಾಜರಾಜೇಶ್ವರಿ ಚಾಮುಂಡಿ ತೋರಬೇಕು. ಕನ್ನಡಿಗರಲ್ಲಿ ಗುಪ್ತವಾಗಿಯೂ ಸುಪ್ತವಾಗಿಯೂ ಇರುವ ಚೈತನ್ಯವನ್ನು ಮಹಾಚೇತನಾತ್ಮಕಳಾದ ಆಕೆಯು ಸಂಕಲ್ಪ ಮಾತ್ರದಿಂದ ಎಚ್ಚರಿಸಬಲ್ಲಳು. ಭಗವತಿಯ ದಿವ್ಯ ಸಂಕಲ್ಪದಿಂದ ಜಾಗೃತವಾದ ಕನ್ನಡಿಗರ ಕ್ರತುಶಕ್ತಿ ಭಿನ್ನಭಾವವನ್ನು ತೊರೆದು ಸ್ವಾರ್ಥ ಬಂಧವನ್ನು ಹರಿದು ಅಭಿನ್ನಬುದ್ಧಿಯಿಂದ ಅವಿಚ್ಛಿನ್ನಧೃತಿಯಿಂದ

ಮುಂಬರಬೇಕು, ಮುಂಬರಿಯಬೇಕು. ತನ್ನ ಕಾರ್ಯಕ್ಕೆ ಸಿದ್ಧರಾಗಿ ಬಂದ ಕನ್ನಡಿಗರನ್ನು ಅಣಿಗೊಳಿಸಿ ಧರ್ಮ ಕಾರ್ಯ ಸಾಧನೆಯ ಕಾರ್ಮಿಕ ಜ್ಞಾನವನ್ನೂ, ನಿರ್ಭಯವಾಗಿ ಸಾಧಿಸುವ ಉದ್ದಂಡ ಧೈರ್ಯೋತ್ಸಾಹ ಗಳನ್ನೂ ಆಮಹಾತಾಯಿಯೇ ಇತ್ತು ಹರಸಬೇಕು.

ಕೊನೆಯ ಎರಡು ಸಾಲುಗಳು ಅತ್ಯುತ್ತಮವಾದ ಸಾಂಕೇತಿಕ ಸಾಹಿತ್ಯಕ್ಕೆ, ಮಹೋತ್ತುಂಗಭಾವಕ್ಕೆ ನಿತ್ಯ ನಿದರ್ಶನವಾಗಿ ನಿಲ್ಲಬಲ್ಲ ಶ್ರೇಷ್ಠ ಕಾವ್ಯಲಕ್ಷಣೋಪಾತವಾಗಿವೆ.

ಕನ್ನಡಿಗರ ನೆತ್ತರು ಶಂಕೆ, ಭಯ, ಸ್ವಾರ್ಥಾದಿಗಳಿಂದ ಕಾವಾರಿದೆ. ಕಾವಾರಿದ ನೆತ್ತರು ಮತ್ತೆ ಕಾವೇರಿದಾಗ, ಕನ್ನಡ ನಾಡಿನಲ್ಲಿ ಕನ್ನಡಿಗರ ನಾಡಿ ನಾಡಿಯಲ್ಲಿ ಕಾವೇರಿದ ನೆತ್ತರು ಧೃತಗತಿಯಿಂದ ಸಂಚರಿಸಿದಾಗ ಶವತ್ವಕ್ಕೆ ಕುಸಿದುಬಿದ್ದ ಕರ್ನಾಟಕ ಜೀವನ ಶಿವತ್ವಕ್ಕೇರುತ್ತದೆ. ಚಾಮುಂಡಿಯ ಕೃಪೆಯು ಎಂದಿಗೂ ಕಾವಾರುವದಲ್ಲ. ಅದು ಅವಿಚ್ಛಿನ್ನ ಅವಿಶ್ರಾಂತ ಸ್ರೋತಶ್ರೀ. ದೈವಿಕವಾದ ಆಕೆಯ ಕೃಪೆಯ ಭೌತಿಕರೂಪವೇ ಮೈಸೂರಿನಲ್ಲಿ ಹರಿಯುವ ಕಾವೇರಿ. ಯಾವ ಪ್ರಾಂತದಲ್ಲಿ ಚಾಮುಂಡಿಯ ಕೃಪೆಯ ಕಾವೇರಿ ಹೊನಲುಗಟ್ಟಿ ಹರಿಯುತ್ತಿದೆಯೋ ಆ ಪ್ರಾಂತದ ಜನರೇ ಕಾವಾರಿದ ನೆತ್ತರವರಾಗಿ ನಿರ್ವಿಣ್ಣಭಾವದವರಾದರೆ ಗತಿಯೇನು ! ಕಾವಾರಿದ ಕಾವೇರೀ ನಾಡಿನ ಜನರ ನೆತ್ತರು ಕಾವೇರಿ ಹರಿಯುವಂತೆ ಮಹಾಕಾಳಿಯ ಕೃಪೆಯು ಹೇಕೆಯಾಗಬೇಕು.

೧. ಮೈಸೂರ ಮಕ್ಕಳ ಮನದ ದ್ವೈತವ ದಹಿಸಿ
ಅವರೆದೆಯ ಶಂಕೆ ಭಯಗಳನು ಸಂಹರಿಸಿ
ವೀರ ಮಾರ್ಗವ ತೋರ್ದೆ ಸಿಂಹವಾಹಿನಿಯೆ !

೨. ನಿನ್ನ ಭಕ್ತರ ನೆತ್ತರಲಿ ಕಾವೇರಿ
ಹರಿವಂತೆ ಹರಸು ತಾಯಿ : ರುದ್ರೆ ಭದ್ರಕಾಳಿ !

ಈ ಸಾಲುಗಳೂ ಮನೋಭೂಮಿಕೆಯ ಮೇಲ್ಮಟ್ಟದಿಂದ ಇಳಿದು ಬಂದ ಭಾವಧಾರೆಯೇ. 'ಕಾವೇರಿ' ಶಬ್ದವು ಕೇವಲ ಶ್ಲೇಷವಲ್ಲ; ವಿಶೇಷ !



ಮಹಾಲಕ್ಷ್ಮಿ

೫

ಕನ್ನಡ ಮಹಾಲಕ್ಷ್ಮಿ ತಾಯಿ ರೇಣುಕೆ !
    ಅಂಬೆ ಜಗದಂಬೆ
    ನಮೋ ಎಂಬೆ !
ನಿನ್ನಮಳ ಪಾದಕ್ಕೆ ಜನವೆ ತಿಂತಿಣಿಗಟ್ಟಿ
    ಎನ್ನುತಿದೆ ಉಘೋ ಉಘೋ !
ಹೃದಯ ತುಂಬಿ ತುಳಿಯುವ ತಮವ ಕಳೆಯೆ !
ಮುದವ ತುಂಬುವ ಆತ್ಮಜ್ಯೋತಿಯನು ಬೆಳಗೆ !
ಎತ್ತು ಬಡಬದ್ಧರನು ತುಳಿದು ಕೃದ್ಧರನು
ಸಿದ್ಧ ಬುದ್ಧರನು ಹುಟ್ಟಿಸೇಳು ತಾಯಿ !

ಭೌತಿಕ ಸಂಪತ್ತೂ, ಅಣಿಮಾದ್ಯಷ್ಟಸಿದ್ಧಿಗಳೂ ಯಾವ ಮಹಾಶಕ್ತಿಯ ಪಾದರೇಣುವೋ ಆಕೆಯೇ ಮಹಾಲಕ್ಷ್ಮಿಯಾದ ರೇಣುಕೆ.

ಐಶ್ವರ್ಯವು ಅವ್ಯಕ್ತ ಈಶ್ವರ ಶಕ್ತಿಯ ಅಭಿವ್ಯಕ್ತರೂಪ. ಈಶ್ವರೀ ಭಾವದಿಂದ ಐಶ್ವರ್ಯವನ್ನು ನೋಡಬೇಕೇ ಹೊರತು ಐಶ್ವರ್ಯವು ತನ್ನದೆಂಬ ಮಮಕಾರವಾಗಲೀ ಐಶ್ವರ್ಯಕ್ಕೆ ತಾನೇ ಹೇತುವೆಂಬ ಅಹಂಕಾರವಾಗಲೀ ಸಲ್ಲದು. ಆಸುರೀ ಭಾವದಿಂದ ಭುಜಿಸುವುದೂ, ಆಸುರೀ ಭಾವದಿಂದ ತ್ಯಜಿಸುವುದೂ ದಿವ್ಯಗುಣವಲ್ಲ. ವಿಪರೀತವಾದ ಭೋಗಭಾವದಿಂದಲೂ ಅಷ್ಟೇ ವಿಪರೀತವಾದ ತ್ಯಾಗಭಾವದಿಂದಲೂ ಭಾರತ ಸಂಪತ್ತನ್ನು ನೀಗಿ ಕೊಂಡು ವಿಪತ್ತಿನಲ್ಲಿ ಸಿಕ್ಕಿ ಬಳಲುವಂತಾಯಿತು.

'ಹಿಂದಿಲ್ಲ ಮುಂದಿಲ್ಲ ಇಂದಿನದು ಇಂದಿಗೇ. ದೈಹಿಕ ಸೌಖ್ಯಕ್ಕಿಂತಲೂ ಹೆಚ್ಚಿನದು ಇನ್ನೇನೂ ಇಲ್ಲ. ದೇಹವೇ ನೀನು ಎಂದಾಗ ಈ ದೇಹ ಪತನಾನಂತರ ಮತ್ತೊಮ್ಮೆ ಹುಟ್ಟದೆ ಎನ್ನುವ ಮೂರ್ಖತೆಯ ಮಾತನ್ನು ಒಪ್ಪದೆ ಸಾಲ ಮಾಡಿದರೂ ಚಿಂತೆಯಿಲ್ಲ ತುಪ್ಪ ಕುಡಿದು ಸಾಯಿ. ಏಕೆಂದರೆ ಇಲ್ಲದ ಪುಣ್ಯಮಾಡಿ ಬರಲಾರದ ಪುನರ್ಜನ್ಮಕ್ಕೆ ಕಾಯುವ ತಿಳಿಗೇಡಿತನಕ್ಕಿಂತಲೂ ಈ ಜನ್ಮದಲ್ಲಿಯೇ ಆದಷ್ಟು ಸೌಖ್ಯವನ್ನು ಸೂರೆಗೊಳ್ಳುವುದು ವಾಸಿ' – ಎಂಬ 'ದೇಹೋಹಂ' ಭಾವವನ್ನೇ ಚಾರ್ವಾಕ ಸಿದ್ಧಾಂತ ಮುಂದುಮಾಡಿತು. ಚಾರು—ವಾಕ್ ಉಳ್ಳವನು ಚಾರ್ವಾಕ ಎಂದರೆ ಒಳಿತಾಗಿ ಮಾತಾಡುವವನು ಎಂದರ್ಥ. ಅವನ ಮಾತಿನಲ್ಲಿ ಒಳ್ಳೆಯದಿದೆಯಾಗಲಿ, ಅವನ ಮನಸ್ಸಿನಲ್ಲಿಯಾಗಲಿ ಅವನ ಮಾಳ್ಕೆಯಲ್ಲಾಗಲಿ ಒಳ್ಳೆಯದಿಲ್ಲ. ಒಳ್ಳೆಯದನ್ನು ಮಾತಾಡಿ ಕೆಟ್ಟದ್ದನ್ನು ಮಾಡುವವರೆಲ್ಲರೂ ಚಾರ್ವಾಕರೇ. ಚಾರ್ವಾಕ ಸಿದ್ಧಾಂತವನ್ನು ಭಾರತೀಯ ದರ್ಶನಕಾರರೆಲ್ಲರೂ ಖಂಡಿಸಿದ್ದಾರೆ. ಶಾಸ್ತ್ರೀಯವಾಗಿ ಖಂಡಿಸಿದರೂ ಎಲ್ಲರ ರಕ್ತವಾಗಿರುವುದು ಚಾರ್ವಾಕಸಿದ್ಧಾಂತವೇ. ಆತ್ಮಶೋಧನೆ

ಯಿಂದ ಆರಂಭವಾದ ಆಧ್ಯಾತ್ಮಿಕ ಸಾಧನೆ ದೈಹಿಕ ಸುಖ ಐಹಿಕ ಸಂಪತ್ತು ಮಾತ್ರವೇ ಮಾನವ ಜೀವನದ ಆತ್ಯಂತಿಕ ಗುರಿಯೆನ್ನುವುದನ್ನು ಒಪ್ಪುವದಿಲ್ಲ. ಆದರೆ ಆತ್ಮಾನಾತ್ಮ ವಿಚಾರ ವಿಚಾರವಾಗಿಯೇ ಉಳಿಯಿತಾಗಲಿ ಆಚಾರಕ್ಕೆ ಚಾರ್ವಾಕವೇ ಅನುಸರಣೀಯವಾಯಿತು. ಚಾರ್ವಾಕರ ಮಾತನ್ನೂ ಮತವನ್ನೂ ಖಂಡಿಸಿ ಅವರ ಮತವನ್ನು ಮತಿಯಲ್ಲಿ ತುಂಬಿಕೊಂಡು ಅವರ ಮಾತನ್ನೇ ಮನಸಾ ಆಚರಿಸಿತು ಯಾವದ್ಭಾರತ. ಈಶ್ವರನನ್ನು ಮರೆತ ಭೋಗವೇ ಬಂಧನವಾಯಿತು. ಯಾವ ಐಶ್ವರ್ಯವು ಈಶ್ವರನನ್ನು ಅರಿಯಲು ಪ್ರೇರಕವೂ ಪೂರಕವೂ ಆಗಬೇಕಿತ್ತೋ ಆ ಐಶ್ವರ್ಯವೇ ಅವನನ್ನು ಮರೆಯಲು ಕಾರಣವಾದಾಗ ತ್ಯಾಗದ ಹಿರಿಮೆಯನ್ನು ಎತ್ತಿ ಹಿಡಿಯುವ ಕ್ರಾಂತಿಯೊಂದು ಆಗಬೇಕಾದದ್ದು ಅಗತ್ಯವಾಯಿತು. ಅಂತಹ ಕ್ರಾಂತಿಯೂ ಆಯಿತು. ಮಹಾವೀರ, ಬುದ್ಧ, ಶಂಕರರು ಸಾಲಾಗಿ ಭೋಗನಿರಸನಾತ್ಮಕವಾದ ಬೋಧೆಯನ್ನೇ ಮುಂದುಮಾಡಿದರು. ಭೋಗವು ಮಾತ್ರವಲ್ಲದೆ ಭೋಗಭೂಮಿಯೂ ಅಲ್ಲಗಳೆಯಲ್ಪಟ್ಟಿತು ; ಇಲ್ಲಗಳೆಯಲ್ಪಟ್ಟಿತು. ಬೌದ್ಧ ದರ್ಶನವು ಜಗತ್ತು ಕ್ಷಣಿಕ ಮತ್ತು ಅದರ ಭೋಗಭಾಗ್ಯವೂ ಕ್ಷಣಿಕವೆಂದು ಆರಂಭಿಸಿದ ಕ್ಷಣಿಕವಾದವು ಜಗತ್ತೇಇಲ್ಲ, ಇಲ್ಲದ ಜಗತ್ತು ಇದ್ದಂತೆ ಕಾಣುವುದಕ್ಕೆ ಕಾರಣ ಮಾಯಾಕಲುಷಿತವಾದ ಮಿಥ್ಯಾದೃಷ್ಟಿಯೇ ಎಂಬ ಶಂಕರರ ಜಗನ್ಮಿಥ್ಯಾವಾದದಲ್ಲಿ ಪರ್ಯವಸಾನವಾಯಿತು. ಶಿವ – ಜೀವರ ನಡುವೆ ಅಡ್ಡಗೋಡೆಯಾಗಿ ನಿಂತಿರುವ ಜಗತ್ತು ಇಲ್ಲದಂತಾದಾಗಲೇ ಜೀವನಿಗೆ ಸ್ವಸ್ವರೂಪಾತ್ಮಕವಾದ ಶಿವತ್ವ ಸಿದ್ಧಿ. ಅವನು, ಎಂದರೆ ಶಿವನು, ಇವನಿಗೆ ಇಲ್ಲದಂತಾಗಿರುವುದಕ್ಕೆ ಕಾರಣ ಜಗತ್ತೇ. ಇಲ್ಲದ ಜಗತ್ತು ಇರುವಂತೆ ತೋರುಪಿಕೆಯೇ ಇರುವ ಬ್ರಹ್ಮನು ಇಲ್ಲದಂತಾಗಿರುವದಕ್ಕೆ ಕಾರಣ. ತತ್ಪ್ರಯುಕ್ತ ಜಗತ್ತೇ ಇಲ್ಲದಂತಾಗುವುದೇ ಬ್ರಹ್ಮ ಸಾಕ್ಷಾತ್ಕಾರಕ್ಕೆ ಹೇತುವಾಗುತ್ತದೆ. ಇರುವ ಬ್ರಹ್ಮನನ್ನು ಮರೆತು ಇಲ್ಲದ ಜಗತ್ತನ್ನೇ ಇರುವುದೆಂದು ಯಾವಾಗಲೂ ಇರುವಂಥಾದ್ದೆಂದೂ ಪರಿಭ್ರಮಿತನಾಗುವದಕ್ಕೆ ಜೀವಿಗೆ ಜಗತ್ತಿನ ಸಂಗದೋಷದಿಂದ ಪ್ರಾಪ್ತವಾಗಿರುವ ಜೀವತ್ವಾರೋಪಣವೇ ಕಾರಣವೆಂಬ ಜಗನ್ಮಿಥ್ಯಾವಾದವು ಶಂಕರರ ಕಾಲದಿಂದ ದೇಶಾದ್ಯಂತ ವ್ಯಾಪಿಸಿತು. ಭೋಗವೂ ಭೋಗದ ನೆಲೆವೀಡಾದ ಜಗತ್ತೂ ಶಂಕರರ ವಾದವೈಖರಿಯಲ್ಲಿ

ಕೊಚ್ಚಿಕೊಂಡು ಹೋದವು. ಇದೊಂದು ಕಾಲ.

ಆದರೆ ವೈದಿಕಯುಗ ಮತ್ತು ತತ್ಪೂರ್ವಕಾಲದಿಂದಲೂ ಸನಾತನವೆಂದು ಯಾವ ಧರ್ಮವನ್ನು ಭಾರತೀಯರು ಕರೆಯುತ್ತಾ ಬಂದರೋ ಆ ಧರ್ಮದಲ್ಲಿ ಈರೀತಿಯಾದ ನ್ಯೂನಾತಿರೇಕಗಳಿಗೆಡೆಯಿಲ್ಲ. ಕ್ಷುದ್ರವೂ ದರಿದ್ರವೂ ಆದದ್ದೇ ದೈವಿಕವೆನ್ನುವ ಮಾತಿಗೆ ಇಂಬಿಲ್ಲ.

'ಸರ್ವಂ ಖಲ್ವಿದಂ ಬ್ರಹ್ಮ'
'ಈಶಾವಾಸ್ಯಂ ಜಗತ್ಸರ್ವಂ'
'ಚರಾಚರಾಣಿ ಭೂತಾನಿ ಸರ್ವಾಣಿ ಭಗವದ್ವಪುಃ'
'ಯದ್ಯದ್ವಿಭೂತಿ ಮತ್ಸತ್ತ್ವಂ ಶ್ರೀಮದೂರ್ಜಿತಮೇವವಾ'
'ಸರ್ವಂ ಶಿವಮಯಂ ಜಗತ್'
'ದಾತಾಭೋಕ್ತಾ ಸ್ವಯಂಶಿವಃ'
'ಸತ್ಯಂ ಜ್ಞಾನಂ ಅನಂತಂ ಬ್ರಹ್ಮ'
'ಸತ್ಯಂ ಶಿವಂ ಸುಂದರಂ'

—ಈ ಮಹದ್ಭಾವಗಳನ್ನು ತನ್ನ ದೇವವಾಣಿಯಲ್ಲಿ ಬಿತ್ತರಿಸಿದ ಭಾರತ ಯಾವಾಗ ತನ್ನ ಮಾತನ್ನೇ ತಾನು ನಂಬದಾಯಿತೋ ನಂಬಿ ನಡೆಯದಾಯಿತೋ ಅಂದಿನಿಂದ ತಮೋವೃತವಾಯಿತು. ತ್ಯಾಗ ಭೋಗಗಳ ಸಮನ್ವಯವೇ ಯೋಗವೆಂಬ ಸಾಮರಸ್ಯ ಸಿದ್ಧಾಂತದ ಸಿದ್ಧಿಯೇ ಭಾರತದಲ್ಲಿ ಅಂತ್ಯವಾಗತೊಡಗಿದಾಗ ಯಾವದ್ದೇಶವೂ ಪರಕೀಯರಿಂದ ಪರಾಜಿತವಾಯಿತು. ಭೌತಿಕಭಾಗ್ಯಗಳಲ್ಲಿ ಅತ್ಯನುರಾಗದಿಂದ ರೋಗಗ್ರಸ್ತವಾದ ನಾಡು ಅತಿ ವಿರಾಗದಿಂದ ನೆಲಹಿಡಿಯುವಂತಾಯಿತು. ಆಕೆಯನ್ನು ಮರೆದುಣ್ಣುವ ಆಕೆಯನ್ನು ತೊರೆದುಣ್ಣುವ ಭೋಗದಿಂದಾಗಲೀ, ಉಣ್ಣುವುದೇನಿದೆ ಅದೆಲ್ಲವೂ ಆಕೆಯ ಕೃಪಾಪ್ರಸಾದವಾದ್ದರಿಂದ ಅದನ್ನು ತ್ಯಾಜ್ಯ ದೃಷ್ಟಿಯಿಂದ ನೋಡುವಿಕೆಯೇ ಪಾಪಯೆನ್ನುವುದನ್ನು ಬಿಟ್ಟ ತ್ಯಾಗದಿಂದಾಗಲೀ ಮುಕ್ತಿಯಿಲ್ಲ. ಎಲ್ಲವೂ ತನಗೇ ಬೇಕು ಎನ್ನುವ ಭೋಗದಾಹವನ್ನೂ ತನಗೇನೂ ಬೇಕಿಲ್ಲ ಎನ್ನುವ ಹುಂಬತನವನ್ನೂ ಖಂಡಿಸಿಯೇ ಈಶ್ವರಯೋಗ ಪ್ರತಿಪಾದಕವಾದ ಈಶಾವಾಸ್ಯೋಪನಿಷತ್ತು:

" ತೇನತ್ಯಕ್ತೇನ ಭುಂಜೀಥಾ ಮಾಗೃಧಃ ಕಸ್ಯಸ್ವಿದ್ಧನಂ "

—ಎಂದು ತ್ಯಾಗ ಯೋಗಗಳ ಸಮನ್ವಯದ ಕಡೆಗೇ ಮಾನವನ ದೃಷ್ಟಿಯನ್ನು ಸೆಳೆದಿದೆ.

ಏನು ಮಾಡಬೇಕೆಂಬುದನ್ನು ತಿಳಿಯುವದೇ ಜ್ಞಾನ. ತಿಳಿದಂತೆ ತಿಳುವಳಿಕೆಯ ಬೆಳಕಿನಲ್ಲಿ ಮಾಡುವ ಕ್ರಿಯೆಯೇ ಕರ್ಮ. ತಿಳಿಯುವ ಬುದ್ಧಿಯೂ, ಮಾಡುವ ಕೈಯೂ, ತಿಳುವಳಿಕೆಯೂ ಈಶ್ವರ ಸ್ವರೂಪವೆಂಬ ಶ್ರದ್ಧಾಭಾವದಿಂದಿರುವುದೇ ಭಕ್ತಿ. ತಿಳಿದಮೇಲೆ ಮಾಡುವದೇನಿಲ್ಲವೆಂಬ ಜ್ಞಾನಿಗಳೂ, ತಿಳಿಯಬೇಕಾದ್ದೇನೂ ಇಲ್ಲವೆಂದು ಮನಸ್ಸಿಗೆ ಬಂದಂತೆ ಮಾಡುವ ಕರ್ಮಿಗಳೂ, ನಿಶ್ಶಕ್ತರಾದ ಭಕ್ತರೂ ಭಾರತದ ಅವನತಿಗೆ ಕಾರಣರು.

ಕೊಟ್ಟ ತನ್ನನ್ನು ನೆನೆಯದೆ ತಾನು ಕೊಟ್ಟದ್ದೇ ದೊಡ್ಡದೆಂದು ಭಾವಿಸುವ ಭಾವಿಗಳನ್ನೂ, ತಾನು ಕೊಟ್ಟದ್ದನ್ನು ಕಡೆಗಣ್ಣಿನಿಂದ ನೋಡಿ ಇರುವುದನ್ನು ಜರಿದು ಮುಂದಿರುವುದನ್ನು ತೊರೆದು ಇಲ್ಲದ್ದನ್ನು ಪಡೆಯಲು ಸಾಯುವ ಅನುಭವಿಗಳನ್ನೂ ಮಹಾಲಕ್ಷ್ಮಿ ಮೆಚ್ಚಳು. ಆಕೆಯ ದಿವ್ಯದೃಷ್ಟಿ ಅಂಥವರ ಮೇಲೆ ಹಾಯುವದಿಲ್ಲ. ಆಕೆಯ ಶ್ರೀಪಾದ ಅಂಥವರ ಮನೆಯಲ್ಲಿ ನಿಲ್ಲುವುದಿಲ್ಲ. ಆಕೆಯು ಕಣ್ದೆರೆದತ್ತ ಹರ್ಷದ ಹಾಲುಕ್ಕುತ್ತದೆ. ಆಕೆಯು ನಿಂತ ನೆಲ ಸರ್ವ ಸೌಭಾಗ್ಯದ ನೆಲೆಯಾಗುತ್ತದೆ. ಭೂಮವಾದ ದ್ದೆಲ್ಲವೂ, ಭವ್ಯವಾದದ್ದೆಲ್ಲವೂ, ದಿವ್ಯವಾದದ್ದೆಲ್ಲವೂ ಆ ಭಗವತಿಯ ಅಭಿವ್ಯಕ್ತಿಯೇ. ಅಂದವಿಲ್ಲದೆಡೆಯಲ್ಲಿ ಚಂದವಿಲ್ಲದೆಡೆಯಲ್ಲಿ ಸ್ವಚ್ಛಂದಳಾದ ಲಕ್ಷ್ಮಿಯು ನಿಲ್ಲದೆ ಓಡುತ್ತಾಳೆ ನಗುತ್ತಾ, ನಗಿಸುತ್ತಾ ಆಕೆಯು ಈಶ್ವರ ಕಾರ್ಯವನ್ನು ಮಾಡುತ್ತಾಳೆ ಮತ್ತು ಮಾಡಿಸುತ್ತಾಳೆ.

' ಆನಂದಂ ಬ್ರಹ್ಮಣೋ ವಿದ್ವಾನ್.'

—ಎಂದು ಹೇಳುವ ಶ್ರುತಿವಾಕ್ಯದ ಬ್ರಹ್ಮನ ಆನಂದದ ಆವಿಷ್ಕಾರವೇ ಮಹಾಲಕ್ಷ್ಮಿ. 'ಮಹಾಲಕ್ಷ್ಮೀರ್ಮೃಡಪ್ರಿಯಾ' ಎಂದು ಹೇಳುವ ಶ್ರೀ ಲಲಿತಾಸಹಸ್ರನಾಮದ ಪ್ರಕಾರ ಮಹಾಲಕ್ಷ್ಮಿಯು ಮೃಡಪ್ರಿಯೆ. ಆಕೆಯು ಜಡರೂಪಿಯಾದರೂ ಮೃಡಪ್ರಿಯೆ. ತೋರಿಕೆಯಲ್ಲಿ ಪದಾರ್ಥರೂಪಿಯಾ ದರೂ ಆಕೆ ಪರಿಣಾಮದಲ್ಲಿ ಪ್ರಸಾದರೂಪಿ. ಅನೈಶ್ವರ್ಯವಾದದೂ

ನಿರೀಶ್ವರೀಯವಾದದ್ದೂ ಆಕೆಯ ದಿವ್ಯಗತಿಯಲ್ಲಿ ಐಶ್ವರ್ಯಶೋಭಿಯಾಗಿ ಈಶ್ವರಮಯವಾಗಿ ಪರಿಣಮಿಸುತ್ತದೆ.

ಈ ಸ್ತೋತ್ರದಲ್ಲಿ ಆ ಮಹಾಲಕ್ಷ್ಮಿಯ ಕೃಪೆಯನ್ನು ಕೈಯ್ಯೊಡ್ಡಿ ಬೇಡಲಾಗಿದೆ. ಅಹಂಕಾರ ಮಮಕಾರಗಳ ಅಂಧತಮನಸ್ಸಿನಿಂದ ಕರಿಗೊಂಡ ಹೃದಯ ಆಕೆಯ ದಿವ್ಯದೃಷ್ಟಿಯಿಂದ ಪ್ರಕಾಶಗೊಳುವ ಆತ್ಮಜ್ಯೋತಿಯ ಬೆಳಕಿನಿಂದ ಸ್ವಯಂಪ್ರಕಾಶಮಯವಾಗಬೇಕು. ಅಹಂಭಾವದಿಂದ ಉನ್ಮತ್ತರಾಗಿ ಲಕ್ಷ್ಮಿಯ ಕೃಪೆಯ ಭೌತಿಕ ಭಾಗ್ಯಗಳನ್ನು .ಆಸುರೀ ರೀತಿಗಳಲ್ಲಿ ಬಳಸುತ್ತಿರುವ ಕೃದ್ಧರನ್ನು ತುಳಿದು ಬಡತನದಲ್ಲಿಯೇ ಬದ್ಧರಾಗಿ ಬಿದ್ದಿರುವ ನಿರಹಂಭಾವ ನಿರ್ಮಮ ಭಾವದ ಪತಿತರನ್ನು ಆಕೆಯೇ ಉದ್ಧಾರ ಮಾಡಬೇಕು. ಆಕೆ ಕೈಕೊಟ್ಟು ಎತ್ತುವುದೇ ಉದ್ಧಾರ. ಮೇಲೆತ್ತಲು ಕೈಗೊಡುವ ಆ ಮಹಾಲಕ್ಷ್ಮಿಯನ್ನು ತಾವಿರುವ ಮಟ್ಟಕ್ಕೇ ಕೆಳಗೆಳೆಯುವ ಜನರೇ ಬಹಳ. ಹಾಗಾಗಬಾರದು. ಹಾಗಾಗದಿರಲು ಸಿದ್ಧರೂ, ಬುದ್ಧರೂ, ಪ್ರಬುದ್ಧರೂ ಹುಟ್ಟಬೇಕು. ಸ್ವಯಂಸಿದ್ಧಳೂ, ಸಿದ್ಧಮಾತೆಯೂ ಆದ ಮಹಾತಾಯಿಯೇ ಅಂಥವರನ್ನು ಹುಟ್ಟಿಸಬೇಕು.

3



ಮಹಾಸರಸ್ವತಿ

ಓ ಮಹಾಸರಸ್ವತಿಯೆ, ಶೃಂಗೇರಿಶಾರದೆಯೆ !
ಶೃಂಗಗಿರಿ ಇಳಿದು ಬಾ ತಾಯಿ ಕನ್ನಡದೇವಿ !
ಲೆಕ್ಕಣಿಕೆ ಬಿಟ್ಟೆದ್ದು ಕೂರಸಿಯ ತೊಡುತಾಯಿ !
ನಮ್ಮಲಸ ವಿಲಾಸವನು, ಭೋಗದಾಹವನು
ತ್ಯಾಗಯೋಗವನೊರೆದು ನೀಗಿಸಮ್ಮ !
ನಾವು ಬರಿಯಂತ್ರಗಳು ನೀನು ಯಂತ್ರಾರೂಢೆ
ಓ ಮಂತ್ರಶಕ್ತಿ !
ನಿನ್ನ ತಂತ್ರವನರುಹಿ ನಮ್ಮ ನಿಯಂತ್ರಿಸು
ತಾಯಿ ಬ್ರಹ್ಮಾಣಿ!

ಮಹಾಲಕ್ಷ್ಮಿಯ ಕೃಪೆಯನ್ನು ಬೇಡಿ ಪಡೆದು ಮಹಾಸರಸ್ವತಿಯ ಕಡೆಗೆ ತಿರುಗಿ ಆಕೆಯ ಕೃಪೆಯನ್ನೂ ಬೇಡಲಾಗಿದೆ ಈ ಸ್ತೋತ್ರದಲ್ಲಿ. ಐಶ್ವರ್ಯವನ್ನು ಈಶ್ವರ ಪ್ರಸಾದವೆಂದು ತಿಳಿಯುವ ಮತ್ತು ಈಶ್ವರ ಸೇವೆಗೆ ಅದನ್ನು ವಿನಿಯೋಗಿಸುವ ಸದ್ಬುದ್ಧಿ ನಮಗೆ ಸಿದ್ಧಿಸಬೇಕಾದರೆ ಜ್ಞಾನಾಧಿದೇವತೆಯಾದ ಸರಸ್ವತಿಯ ಅನುಗ್ರಹದಿಂದಲೇ ಸಾಧ್ಯ.

ಶುದ್ಧ ಜ್ಞಾನಸ್ವರೂಪಿಯಾದ ಮಹಾಸರಸ್ವತಿಯ ಪರಿಶುದ್ಧ ರೂಪವೇ ಶ್ರೀಮಚ್ಛಂಕರ ಭಗವತ್ಪಾದರಿಂದ ಪ್ರತಿಷ್ಠಾಪಿತಳಾದ ಶೃಂಗೇರಿಯ ಶಾರದೆ. ಶಾರದೆಯೆಂದರೆ ಬೆಳಗನ್ನು ನೀಡುವಾಕೆ ಎಂದರ್ಥ. ಚಂದ್ರಾರ್ಕಾಗ್ನಿಗಳು ಯಾರ ದಿವ್ಯಪ್ರಭೆಯ ಸತ್ಯ ಸಂಕೇತಗಳೋ, ಯಾವ ಮಹತ್ಪ್ರಕಾಶವು ಜಗತ್ತಿನ ಬಾಹ್ಯಾಂತರಗಳಲ್ಲಿ ತುಂಬಿಕೊಂಡು ಬೆಳಗುತ್ತಿದೆಯೋ ಆ ಬೆಳಕಿನ ಸ್ವರೂಪವೇ ಶಾರದೆ. ಕರ್ಮದ ಕತ್ತಲೆಯಲ್ಲಿಯೇ ಕೊಳೆಯುತ್ತಿದ್ದ ಭಾರತಕ್ಕೆ ಜ್ಞಾನವಿಲ್ಲದ ಕರ್ಮ ಅಧರ್ಮವೆಂಬ ಅರಿವನ್ನು ನೀಡಿದ ಜ್ಞಾನಸಿದ್ಧ, ಸಿದ್ಧಜ್ಞಾನಿ ಶ್ರೀ ಶಂಕರರು. ಆಸೇತುಹಿಮಾಚಲ ಪರ್ಯಂತ ಪರ್ಯಟನ ಮಾಡಿ ವೇದಾಂತದ ವೀರವಾಣಿಯನ್ನು ಗರ್ಜಿಸಿದ ವೀರಕೇಸರಿ ಶಂಕರರಿಗೆ ತಳವೂರಲು ಶಾಶ್ವತವಾಗಿ ಸ್ಥಾನ ಕೊಟ್ಟದ್ದು ಕನ್ನಡನಾಡೇ. ಪೂರ್ವಕ್ಕೆ ಋಷ್ಯಶೃಂಗ ಮಹಾಮುನಿ ತಪಸ್ಸಿದ್ಧ ಪ್ರದೇಶ ಶೃಂಗಗಿರಿ. ಪರಂಪರಾನುಗತವಾದ ಪುರಾತನ ಪುಣ್ಯಕ್ಷೇತ್ರವಾದ ಶೃಂಗಗಿರಿಯ ಪ್ರಾಂತವನ್ನೇ ತಮ್ಮ ನೆಲೆವೀಡಾಗಿ ಆಯ್ದುಕೊಂಡು ತಮ್ಮ ಶ್ರೀಪಾದಸ್ಪರ್ಶದಿಂದ ಶಂಕರರು ಇನ್ನಷ್ಟು ಪಾವನಗೊಳಿಸಿದರು.

ಆದರೆ ಯಾವ ನಾಡಿನಲ್ಲಿ ಜ್ಞಾನಜ್ಯೋತಿ ತಾನೇತಾನಾಗಿ ಅಖಂಡವಾಗಿ ಬೆಳಗಬೇಕೋ ಆ ನಾಡೇ ಕತ್ತಲೆಯಲ್ಲಿ ಮುಳುಗಿತ್ತು. ಕನ್ನಡ ನಾಡಿನಲ್ಲಿ ಶಾರದೆ ಪ್ರತಿಷ್ಠಿತಳಾದಳೇ ಹೊರತು ಕನ್ನಡ ನಾಡಿನ ಚೈತನ್ಯ ರೂಪರಾದ ಕನ್ನಡಿಗರ ಮನದಲ್ಲಿ ಆಕೆ ಇಲ್ಲದಾದಳು. ಅದಕ್ಕೆ ಕಾರಣಗಳು ಎರಡು: ಮೊದಲನೆಯದಾಗಿ ಆಕೆ ಇರುವ ಎತ್ತರಕ್ಕೆ ಹೋಗಿ ಆಕೆಯ

ಕೃಪೆಯನ್ನು ಪಡೆಯಲು ಕೈಲಾಗದೆ ಆಲಸ್ಯಭಾವದಿಂದ, ವಿಲಾಸೋನ್ಮತ್ತತೆಯಿಂದ ಭೋಗದಾಹದಿಂದ ಬಾಯಾರಿದ ಜನ ಆಮುಷ್ಮಿಕಕ್ಕೆ ದಾರಿಗೊಡದ ಐಹಿಕ ಮತ್ತು ದೈಹಿಕ, ಸುಖಗಳಲ್ಲಿಯೇ ಮೈ ಮರೆತಿದ್ದು. ಎರಡನೆಯದಾಗಿ ಶೃಂಗಗಿರಿ—ಅಂದರೆ ಕೋಡುಗಲ್ಲು—ಕೋಡುಗಲ್ಲಿನ ಮೇಲೆ ಹತ್ತಿ ಕುಳಿತಿರುವ ಶಾರದೆ, ತನ್ನ ಹತ್ತಿರಕ್ಕೆ ಹತ್ತಿಬರಲು ಕೈಲಾಗದೆ ನೆಲಕ್ಕೆ ಹತ್ತಿಕೊಂಡು ಕುಳಿತಿರುವ ಕನ್ನಡಿಗರ ಹೃದಯಪೀಠಕ್ಕೆ ತಾನೇ ಇಳಿದುಬಂದು ಮುಹೂರ್ತ ಮಾಡದೆ ಇರುವಿಕೆ.

ಮೇಲಿನದರ ಅವತರಣಿಕೆಯೇ ಕೆಳಗಿನದರ ಉದ್ಧಾರಕ್ಕೆ ಪೂರ್ವಪೀಠಿಕೆ. ಕೆಳಗಿರುವ ಭಕ್ತನು ಮೇಲೇರ ಬಯಸಿದಾಗಲೇ ಮೇಲಿರುವ ಶಕ್ತಿ ಕೆಳಗಿಳಿದು ಬಂದು ಸಹಕರಿಸುತ್ತದೆ. ಕೆಳಗೆ ಕುಸಿದ ಕನ್ನಡಿಗನು, ನೆಲಕ್ಕೇ ಹತ್ತಿಕೊಂಡಿರುವ ಕನ್ನಡಿಗನು ಉತ್ತುಂಗ ಶಿಖರದಲ್ಲಿ ಮಂಡಿಸಿರುವ ಆ ಮಹಾಶಕ್ತಿಯ ಕೃಪಾವತರಣದಿಂದ ಮೇಲೆದ್ದು ಆಕೆಯ ಈಶ್ವರ ಕಾರ್ಯೋನ್ಮುಖನಾಗಬೇಕಾಗಿದೆ. ಈ ಇರುವಷ್ಟೇ ಸಾಕು, ಈ ಇರುವಷ್ಟೊ ನನಗೇ ಬೇಕು ಎನ್ನುವ ಕ್ಷುದ್ರ ಭಾವವೂ ದರಿದ್ರ ಭಾವವೂ ನಮ್ಮೆಲ್ಲರನ್ನೂ ಕಾಡುತ್ತಿದೆ. ತ್ಯಾಗವಿಲ್ಲದ ಭೋಗ, ಭೋಗವನ್ನೇ ಒಲ್ಲದ ತ್ಯಾಗ—ಈ ಎರಡು ಆಸುರೀ ಭಾವಗಳು ಭಾರತವನ್ನೂ ಹೆಚ್ಚಾಗಿ ಕನ್ನಡ ನಾಡನ್ನು ಘಾಸಿಗೊಳಿಸಿವೆ. ಕನ್ನಡಿಗರಲ್ಲಿ ಕೆಲವರು ಮುಂದಿರುವ ಮುಳ್ಳೇ ಗುಲಾಬಿಯೆಂದುಕೊಂಡು ಮುದ್ದು ಕೊಡುತ್ತಿದ್ದರೆ, ಇನ್ನೂ ಕೆಲವರು ಮುಳ್ಳೇ ಇಲ್ಲದ ಗುಲಾಬಿ ಗಿಡಕ್ಕೆ ಬೀಜ ಹುಡುಕುತಿದ್ದಾರೆ. ಈ ಹುಚ್ಚಿನಂತೆಯೇ ಇದೆ ತ್ಯಾಗರಹಿತ ಭೋಗ, ಭೋಗರಹಿತವಾದ ತ್ಯಾಗ ಮತ್ತು ಕ್ರಿಯಾವಿಹೀನವಾದ ಜ್ಞಾನ, ಜ್ಞಾನವಿಹೀನವಾದ ಕರ್ಮ. ಕರ್ಮವೆಂದರೆ ಜರಿಯುವ ಜ್ಞಾನವೇ ಅಜ್ಞಾನವೆಂಬ ಅರಿವೂ, ಜ್ಞಾನವಿಲ್ಲದ ಕರ್ಮ ಅಧರ್ಮವೆಂಬ ಅರಿವೂ, ಶಾರದೆಯ ಕೃಪೆಯಿಂದ ಕನ್ನಡ ಕುಲಕ್ಕೆ ಬರಬೇಕು. ಮೇಲೆಯೇ ಇರುವ ದೇವಭಾವ, ಕೆಳಗೇ ಇರುವ ಜೀವಭಾವ ಎರಡೂ, ವಿಯೋಗದಲ್ಲಿಯೇ ಪರಿತಪಿಸುತ್ತಿರುವ ಸತಿಪತಿಗಳಂತೆ. ಶಿವ ಜೀವೈಕ್ಯಕ್ಕೆ ತ್ಯಾಗವೇ ಯೋಗ. ಶಿವ ಕೃಪೆ ಮೇಲೆಯೇ ಇರುವದನ್ನು ತ್ಯಜಿಸಿ ಕೆಳಗಿಳಿದು ಬರುವಿಕೆಯೂ, ಜೀವನು ಕೆಳಗಿರುವ ಅಲ್ಪತೃಪ್ತಿಯನ್ನು

ತ್ಯಜಿಸಿ ಮೇಲೇರ ಬಯಸುವಿಕೆಯೂ ತ್ಯಾಗವೇ. ಇಬ್ಬರಲ್ಲಿಯೂ ತ್ಯಾಗವಿಲ್ಲದೆ ಹೋದರೆ ಯೋಗವಿಲ್ಲ—ಸಂಯೋಗವಿಲ್ಲ.

ಕನ್ನಡನಾಡಿನ ಚೈತನ್ಯವನ್ನು ಸಾರಸ್ವತಮುಖದಿಂದ ಆರಾಧಿಸುವ ಕನ್ನಡ ಭಾವಕವಿ, ಅನುಭಾವಕವಿ ಅಂಬಿಕಾತನಯದತ್ತ ಈ ತ್ಯಾಗ ಯೋಗದ ಬಗ್ಗೆ ಸೊಗಸಾದ ಒಂದು ಚಿತ್ರಣ ಕೊಟ್ಟಿದ್ದಾರೆ 'ಗರಿ'ಯಲ್ಲಿ. ಕನ್ನಡಿಗ 'ಕಣಸಿನೊಳಗೊಂದು ಕನಸು' ಕಾಣುತ್ತಾನೆ. ಕೆಲವರಿಗೆ ಮನಸ್ಸಿನಲ್ಲಿದ್ದದ್ದೇ ಕನಸಿನಲ್ಲಿ ಕಾಣುತ್ತದೆ. ಕೆಲವರಿಗೆ ಕನಸಿನಲ್ಲಿ ಕಂಡದ್ದೇ ಮನಸ್ಸಿನಲ್ಲಿ ಮನೆಮಾಡಿಕೊಳ್ಳುತ್ತದೆ. ಕನಸು ಮನಸುಗಳಲ್ಲಿ ಕನ್ನಡನಾಡಿನ ಏಳ್ಗೆಯನ್ನೇ ಬಯಸುತ್ತಿದ್ದ ಕನ್ನಡಿಗನ ಕನಸಿನಲ್ಲಿ ಕನ್ನಡನಾಡೊಡತಿ ಕಾಣಸಿಕೊಳ್ಳುತ್ತಾಳೆ. ಅವನಿಗೂ ಆಕೆಗೂ ಮಾತು ಕಥೆ ನಡೆಯುತ್ತದೆ. ಆ ಹಿರಿಯ ಮುತ್ತೈದೆಯನ್ನು ಕುರಿತು ಆ ಕಿರಿಯ ಕನ್ನಡಿಗ ಕೇಳುತ್ತಾನೆ:

'ಈಗ ಬಂದಿಹುದೇನು ಏನು ಬೆಸನ'

ಈ ಪ್ರಶ್ನೆಗೆ ನೇರವಾದ ಉತ್ತರವನ್ನು ಹೇಳದೆ ಆ ತಾಯಿ:

'ಯೋಗವಿಲ್ಲದೆ ತಿಳಿಯದೆನ್ನ ವೆಸನ'

ಎನ್ನುತ್ತಾಳೆ.

ವ್ಯಸನವನ್ನು ಕಳೆಯುವದಕ್ಕೆ ಮಾತ್ರ ಯೋಗವೆಂದು ತಿಳಿದಿದ್ದ ಕನ್ನಡಿಗ ಕನ್ನಡಮ್ಮನ ವ್ಯಸನವನ್ನು ತಿಳಿಯಲು ಬೇಕಾಗಬಹುದಾದ ಯೋಗವಾವುದೆಂದು ತಿಳಿಯದೆ ಕಕ್ಕಾವಿಕ್ಕಿಯಾಗಿ ಆಕೆಯನ್ನೇ ಮತ್ತೆ ಕೇಳುತ್ತಾನೆ:

'ತಿಳುಹು ಬೆಸನೇನಿಹುದೊ ಯಾವ ಯೋಗ.'

ಯಾವಯೋಗದಿಂದ ಆಕೆಯ ವ್ಯಸನವನ್ನು ತಿಳಿಯಬಹುದು ಯಾವ ಯೋಗದಿಂದ ಆಕೆಯ ವ್ಯಸನವನ್ನು ಕಳೆಯಬಹುದು ಎಂಬುದನ್ನು ಆಕೆಯೇ ಹೇಳುತ್ತಾಳೆ:

'ಆದಿ ಅಂತ್ಯವು ಇಲ್ಲದಂಥ ತ್ಯಾಗ'

ನಿಜವಾದ ಮಾತು! ಆತ್ಮವಿಕಾಸಕ್ಕೆ ಎಡಗೊಡದ ವಿಷಯ ವಿಲಾಸ, ಅಲ್ಪವೂ ಸ್ವಲ್ಪವೂ ಆದ ಸುಖ ಭೋಗಗಳಲ್ಲಿ ದುರ್ದಮನೀಯವಾದ ದಾಹ

ಮತ್ತು ಕ್ಷುದ್ರವಾದ ವ್ಯಾಮೋಹ—ಇವು ಸಾಮೂಹಿಕವಾಗಿ ನಾಡಿನ, ವೈಯಕ್ತಿಕವಾಗಿ ವ್ಯಕ್ತಿಯ ಉದ್ಧಾರಕ್ಕೆ ದಾರಿ ಬಿಡದ ಕಟಂಕಗಳು. ಯೋಗವನ್ನೇ ತ್ಯಾಗಮಾಡಿ ಭೋಗಲಂಪಟನಾದ ಕನ್ನಡಿಗನಿಗೆ ತ್ಯಾಗವೇ ಯೋಗವೆಂದು ತಿಳಿಯುವ ತಿಳುವಳಿಕೆ ಶಾರದೆಯ ಕೃಪೆಯಿಂದ ಆಗ ಬೇಕಾಗಿದೆ.

ಈ ತ್ಯಾಗಯೋಗವು ಎಷ್ಟು ಮಹತ್ವದ್ದೋ ಅಷ್ಟೇ ಮಹತ್ವವಾದದ್ದು ಜ್ಞಾನ ಕ್ರಿಯೆಗಳ ಸಮನ್ವಯ ದೃಷ್ಟಿ. ಕರ್ಮವನ್ನು ಜರಿಯುವ ಜ್ಞಾನ ನಿಜವಾಗಿಯೂ ಜ್ಞಾನವಲ್ಲ. ಕೆಲಸಗೇಡಿಯಾದ ಜ್ಞಾನ, ಕೆಲಸಕ್ಕೆ ಬಾರದ ಜ್ಞಾನ ನಮ್ಮ ದೇಶಕ್ಕೆ ಜಾಡ್ಯವಾಗಿ ವೇಧಿಸುತ್ತಿದೆ. ಜ್ಞಾನವಿಲ್ಲದ ಕರ್ಮ ತಾಯಿಯಿಲ್ಲದ ಮಗುವಿನಂತೆ ದಿಕ್ಕಿಲ್ಲದ್ದು; ಕರ್ಮವಿಲ್ಲದ ಜ್ಞಾನ ಮಗುವಿಲ್ಲದ ತಾಯಿಯಂತೆ ಬಂಜೆ.

> “ ಓಂ ಕ್ರತೋಸ್ಮರ ಕೃತಗ್ಂಸ್ಮರ ಕ್ರತೋಸ್ಮರ ಕೃತಗ್ಂಸ್ಮರ ”
> “ ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇಚ್ಛತಂ ಸಮಾಃ ”
> “ ನಿಯತಂ ಕುರು ಕರ್ಮಾಣಿ ”
> “ ನಹಿಕಶ್ಚಿತ್ ಕ್ಷಣಮಪಿ, ಜಾತುತಿಷ್ಠತ್ಯಕರ್ಮಕೃತ್ ”

—ಈ ಸಿದ್ಧಾಂತ ವಾಕ್ಯಗಳು ತಿಳಿದು ಮಾಡುವ ಕರ್ಮಕ್ಕೇ ಪ್ರಾಧಾನ್ಯತೆ ಇತ್ತಿವೆ.

ದೇಹ ರಚನೆಯನ್ನು ನೋಡಿಕೊಂಡರೂ ಈ ತತ್ತ್ವ ವಿಶದವಾಗುತ್ತದೆ. ದೇಹದಲ್ಲಿ ಜ್ಞಾನೇಂದ್ರಿಯಗಳಿರುವಂತೆ ಕರ್ಮೇಂದ್ರಿಯಗಳೂ ಇವೆ. ಜೀವಿಯ ಜೀವನಕ್ಕೆ ದೇಹವನ್ನು ನೀಡಿರುವ ಭಗವಂತ ಜ್ಞಾನವೇ ಸಾಕೆನಿಸಿದ್ದರೆ ಜ್ಞಾನೇಂದ್ರಿಯಗಳನ್ನು ಮಾತ್ರ ಮಾಡಿ ಕೈಬಿಡುತ್ತಿದ್ದ. ಆದರೆ ಈಶ್ವರ ರಚಿತವಾದ ದೇಹದಲ್ಲಿ ಕರ್ಮೇಂದ್ರಿಯಗಳೂ ಇರುವಿಕೆ ಕರ್ಮ ಪ್ರಧಾನ್ಯವನ್ನೂ ಸೂಚಿಸುತ್ತದೆ.

ತಿಳಿದು ಮಾಡುವವನು ಸಿದ್ಧ; ಮಾಡಿ ತಿಳಿಯುವವನು ಸಾಧಕ. ಮಾಡಲು ಬಾರದವನಿಗೆ ತಿಳಿದಿಲ್ಲ; ತಿಳಿದವನು ಮಾಡದೇ ಇರುವುದಿಲ್ಲ. ಕ್ರಿಯಾತ್ಮಕವಾದ ಜ್ಞಾನ, ಜ್ಞಾನ ಶುದ್ಧವಾದ ಕ್ರಿಯೆ—ಜ್ಞಾನ ಕ್ರಿಯೆ

ಗಳೆರಡೂ ಈಶ್ವರಾತ್ಮಕವೆಂಬ ಬ್ರಹ್ಮಜ್ಞಾನ ಬ್ರಹ್ಮಾಣಿಯಾದ ಆ ಭಗವತಿಯು ಅನುಗ್ರಹಿಸಲಿ.

ಆಕೆಯ ಅನುಗ್ರಹಕ್ಕೆ ಹಾರೈಸುವ ಹೃದಯವನ್ನು ಹಿಡಿದೆಳೆಯುವ ಆಸುರೀ ಶಕ್ತಿಯೇ ಅಹಂಕಾರ. ಭಗವನ್ನಿರ್ಮಿತವಾದ ಈ ದೇಹದಲ್ಲಿ ಅಹಂಕಾರ ಮನೆಮಾಡಿಕೊಂಡಿದೆ. ತಾನೇನೂ ಮಾಡದಿದ್ದರೂ ಮಾಡಿದ್ದೆಲ್ಲವೂ ತಾನೇ ಎಂಬ ಅಹಂಕಾರ ನಿರ್ಮೂಲವಾಗುವವರೆಗೂ ಅಂಧಕಾರ ಅಳಿಯುವದಿಲ್ಲ. ಅಂಧಕಾರ ಅಳಿದು ತಿಳಿಬೆಳಗು ಮೂಡಬೇಕಾದರೆ ಆ ಬೆಳಕನ್ನು ಆಳುವ, ಆ ಬೆಳಕಿನಲ್ಲಿ ಆಡುವ, ಆ ಬೆಳಕೇ ತಾನಾಗಿರುವ ಶಾರದೆಯ ಶ್ರೀ ಸನ್ನಿಧಿಯಲ್ಲಿ ನಾವು ಕೇವಲ ಯಂತ್ರಗಳಂತಾಗಿ ಸಮರ್ಪಿತವಾಗಬೇಕು. ಮಂತ್ರಮೂರ್ತಿಯಾದ ಆಕೆಯೇ ಈ ಜಗದ್ಯಂತ್ರದ ಯಂತ್ರವಾಹಕಳು. ಯಾವ ಯಂತ್ರವನ್ನು ಯಾವ ಕಾರ್ಯಕ್ಕೆ ನಿಯಂತ್ರಿಸಬೇಕೆಂಬುದು ಆಕೆಗೆ ಮಾತ್ರ ಗೊತ್ತಿರುವ ಗೆಯ್ಮೆ. ಚಿದ್ಯಂತ್ರರೂಪಿಯಾದ ಮಾನವ ಯಂತ್ರಾರೂಢೆಯಾದ ಶಾರದೆಯ ತಂತ್ರವನ್ನು ತಿಳಿದು ಆಕೆಯ ಈಶ್ವರ ಕಾರ್ಯದಲ್ಲಿ ನಿಯಂತ್ರಿತವಾಗಬೇಕು. ಶಂಕರಿಯೂ ಆಚಾರ್ಯ ಶ್ರೀಮಚ್ಛಂಕರಾರಾಧಿತೆಯೂ ಆದ ಶಾರದೆ ಈ ಯಂತ್ರಮಯ ಜಗತ್ತಿನ ತಂತ್ರವನ್ನು ವೈದಿಕ—ತಾಂತ್ರಿಕನಾದ ಕನ್ನಡಿಗನಿಗೆ ತಿಳುಹಲಿ.

"You must do the work as an offering to the Divine and take it as a part of your Sadhana. In that spirit the nature of the work is of little importance and you can do any work without losing the contact with the inner presence."

—*The Mother.*

"A divine action arising spontaneously, freely, infallibly from the light and force of our spiritual self in union with the Divine is the last state of this Integral Yoga of works."

—*Sri Aurobindo*



ಮೂಕಾಂಬಿಕಾ

೭

ಓ ತಾಯಿ ಶ್ರೀ ಶಕ್ತಿ ಕನ್ನಡದ ಪ್ರಾಣಪಂಚಕಳೆ !
ದೇವಿ ಮೂಕಾಂಬೆ ಪರಶುರಾಮಕ್ಷೇತ್ರಾಧಿವಾಸಿನಿ !
ನಿನ್ನ ಕಂದರ ಪಂಚಪ್ರಾಣದಲಿ ನಿಂತು
ನಿನ್ನ ಲೀಲೆಯ ನೀನೆ ಪೂರ್ಣಗೊಳಿಸು !
ನಿನ್ನ ಸಮಯ ಸಂಕಲ್ಪ ನೀನೆ ಸಾಧಿಸುತಿರುವೆ.
ನಿನ್ನ ಅರ್ಚನೆಗೆ ತೊಡಕಾದ ಎಡರುಗಳ
ತೊಡೆದು ಹಾಕುವ ದಿವ್ಯ ಬಲವ ನೀ ನೀಡುತಾಯಿ !
ಹಿಂದೆನಿಂದವರ ಮುಂದಕೊಯ್ಯುವ ಮನವನಿತ್ತು
ಒಂದೆ ಪೂಜೆಯಕೊಳ್ಳು ತಾಯಿ ಕನ್ನಡದೇವಿ !

ಧೀಶಕ್ತಿಯ ಸ್ವರೂಪಳಾದ ಶಾರದೆಯನ್ನು ಜ್ಞಾನಸಿದ್ಧಿಗಾಗಿ ಬೇಡಿದ ತರುವಾಯ ಶ್ರೀ ಶಕ್ತಿಯ ಸ್ವರೂಪಳಾದ ಮೂಕಾಂಬೆಯನ್ನು ಅಂತಶ್ಶುದ್ಧಿಗಾಗಿ ಬೇಡಲಾದ ಸ್ತೋತ್ರವಿದು. ಪರಶುರಾಮಕ್ಷೇತ್ರವೆಂದು ಪ್ರಸಿದ್ಧವಾದ ದಕ್ಷಿಣ ಕನ್ನಡಜಿಲ್ಲೆಯ ನಾಡೊಡತಿಯಾದ ಮೂಕಾಂಬೆ ಕನ್ನಡನಾಡಿನ ಆತ್ಮಶ್ರೀಯ ಸಂಕೇತಸ್ವರೂಪಳು. ಕನ್ನಡಿಗನಾದ ಪರಶುರಾಮ ಪುರಾಣ ಪ್ರಸಿದ್ಧನಾದ ಅವತಾರಪುರುಷ. ವೀರಶಾಕ್ತ; ಮಹಾಶೈವ; ಅಪರರುದ್ರ! ಕ್ಷತಿಯಿಂದ ಕ್ಷಿತಿಯನ್ನು ಕಾಪಾಡುವ ಕ್ಷಾತ್ರವು ಸ್ವಧರ್ಮ ಪಾಲನೆಯಿಂದ ಚ್ಯುತಿಯಾದಾಗ, ಕ್ಷತ್ರಿಯನು ಪರಪೀಡನೆಯೇ ಸ್ವೋತ್ಕರ್ಷವೆಂದು ಬಗೆದಾಗ ಬ್ರಾಹ್ಮೀಶಕ್ತಿಯೇ ಕ್ಷಾತ್ರ ಧರ್ಮವನ್ನು ಪಾಲನಮಾಡಬೇಕಾಯಿತು. ಅಧರ್ಮಪ್ರವೃತ್ತರಾದ ಕ್ಷತ್ರಿಯರನ್ನು ದಮನಮಾಡುವ ಪ್ರಭುಶಕ್ತಿಯೊಂದು ಮೈದಳೆದು ಪರಶುರಾಮನೆನಿಸಿತು. ರಂಜನೆಯೇ ರಾಜನಾದವನಿಗೆ ಮುಖ್ಯ, ರಂಜನೆಗೆ ಮುಖ್ಯವಾದದ್ದು ರಾಜನ ತೋಳ್ಬಲವೆಂಬ ರಾಜನೀತಿಯೇ ರಾಜನ್ಯರಿಪು ಪರಶುರಾಮನ ಅವತಾರಕ್ಕೆ ಅವತರಣಿಕೆ ಹಾಕಿತು. ರಾಜ ಶಬ್ದವು ವೈದಿಕ ವಾಙ್ಮಯದಲ್ಲಿ ಈಶ್ವರಾರ್ಥ ಪ್ರತಿಪಾದಕ ಶಬ್ದವಾಗಿ ಬಳಸಲಾಗಿದೆ. ಈಶ್ವರನದಾದ ನೆಲವನ್ನು, ಈಶ್ವರ ಸ್ವರೂಪಿಗಳಾದ ಜನರನ್ನು ಈಶ್ವರ ಪ್ರೇರಣೆಯಿಂದ ಈಶ್ವರ ಪ್ರತಿನಿಧಿಯಾಗಿ ಆಳುವವರು ರಾಜರೆಂದು ಕರೆಯಲ್ಪಟ್ಟರು. ನೆಲವನ್ನು ಈಶ್ವರನ ಆಳಾಗಿ ಆಳಬೇಕಾದ ರಾಜನು ತಾನೇ ಈಶ್ವರನೆಂದು ದೇಹಾತ್ಮಿಕ ಬುದ್ಧಿಯಿಂದ ಅಹಂಕರಿಸಿ ದೈವಸ್ವರೂಪರಾದ ತನ್ನ ಪ್ರಜೆಗಳನ್ನೇ ತಾನು ಪೀಡಿಸಿದಾಗ, ರಾಜನು ತಿರುವುಮುರುವಾಗಿ ಜಾರನಾದನು. ಅಂತಹ ಜಾರನೂ, ಚೋರನೂ ಆದ ಕಾರ್ತವೀರ್ಯನನ್ನು ನಿಗ್ರಹಗೊಳಿಸಲೆಂದೇ ಪರಶುರಾಮಾಭಿದಾನದಿಂದ ಭಗವದವತಾರವಾಯಿತು. ಬ್ರಹ್ಮಜ್ಞಾನ, ಕ್ಷಾತ್ರಶಕ್ತಿ, ಈಶ್ವರ ಭಕ್ತಿ—ಈ ಮೂರರ ಒಂದುಗೊಂಡ ಸಂಕೇತ ಪರಶುರಾಮನಾಮ. ಮಾಹಿಷ್ಮತಿಯ ಅರಸನಾದ ಕಾರ್ತವೀರ್ಯನು ಮಹಿಷಮತಿಯಾದಾಗ ಸರ್ವ

ಜನಾಭಿರಾಮನಾದ ರಾಮನು ಪರಶುರಾಮನಾಗಬೇಕಾಗಿ ಬಂತು. ನಿರ್ವೈರ ಮನದಿಂದ ದುಷ್ಟಶಕ್ತಿಯನ್ನು ನಿಗ್ರಹಿಸಿ, ಗೆದ್ದ ನೆಲವನ್ನು ತನಗಾಗಿ ಎನ್ನದೆ ತನ್ನದು ಎನ್ನದೆ ನಿರ್ಮಮ ಬುದ್ಧಿಯಿಂದ ದಾನಮಾಡಿ ತನ್ನ ತಾಯ್ನಾಡನ್ನೇ ತಾನು ತೊರೆದು ಹೊರಹೊರಟ ಪರಶುರಾಮನೂ ಆತನ ಕ್ಷೇತ್ರಾಧಿನಾಯಕಿ ಯಾದ ಮೂಕಾಂಬೆಯೂ ಕನ್ನಡಜನದ ಆತ್ಮಶ್ರೀಯ ಸಂಕೇತ. ಪ್ರಪಂಚವೆ ಪಂಚಪ್ರಾಣವಾಗಿರುವ ನಾವು ನಮ್ಮ ಪಂಚಪ್ರಾಣಗಳೂ ಈಶ್ವರಾತ್ಮಿಕವಾಗಬೇಕೆಂದರೆ ಪ್ರಾಣಸ್ವರೂಪಳಾದ ಆ ಮಹಾಮಾತೆಯ ಅನುಗ್ರಹವಾಗಬೇಕು. ಪ್ರಾಣಶಕ್ತಿಯೇ ಪ್ರಾಣ, ಅಪಾನ, ಉದಾನ, ವ್ಯಾನ, ಸಮಾನಗಳೆಂದು ಐದು ವಿಧವಾಗಿ ವಿಭಜಿತವಾಗಿ ಪಂಚಭೂತಾ ತ್ಮಕವಾದ ಶರೀರದಲ್ಲಿ ನೆಲೆಸಿರುವಂತೆ, ಈ ಪ್ರಾಣ ಪಂಚಕಗಳಲ್ಲಿ ಆ ಮಹಾ ಶಕ್ತಿಯ ತ್ರಾಣವೇ ತುಂಬಿ ಬರಬೇಕು. ಪ್ರಾಣವಾಯುವು ಹೃದಯ ದಲ್ಲಿಯೂ, ಅಪಾನ ವಾಯುವು ನಾಭಿಯ ಅಧೋಭಾಗದಲ್ಲಿಯೂ, ಸಮಾನ ವಾಯುವು ನಾಭಿಯಲ್ಲಿಯೂ, ಉದಾನ ವಾಯುವು ಕಂಠದಲ್ಲಿಯೂ, ವ್ಯಾನವಾಯುವು ಸರ್ವಾವಯವಗಳಲ್ಲಿಯೂ ವ್ಯಾಪಿಸಿಕೊಂಡು ಪಾಂಚ ಭೌತಿಕ ಶರೀರವನ್ನು ಹೇಗೆ ನಡೆಸುತ್ತಿದೆಯೋ ಹಾಗೆಯೇ ನಮ್ಮ ಪ್ರಾಣದ ಪ್ರಾಣವೂ, ನಮ್ಮ ತ್ರಾಣದ ತ್ರಾಣವೂ ಆದ ಮಹಾಶಕ್ತಿ ತಾನೇ ನಮ್ಮ ಪಂಚಪ್ರಾಣಗಳಲ್ಲಿ ಕಲಾರೂಪದಿಂದ ನೆಲೆಸಬೇಕು. ಕಲಾರೂಪಿಣಿಯಾದ ಆಕೆಯ ಆವಾಸದಿಂದ ಮತ್ತು ಸಹವಾಸದಿಂದ ಮಾತ್ರವೇ ಜಗತ್ತಿಗೂ, ಜೀವಿಗೂ ಜೀವ ಕಳೆ.

ಪ್ರಾಣಕ್ಕೆ ಪ್ರಾಣಸ್ವರೂಪಳಾದದ್ದರಿಂದಲೇ ಆಕೆಯ ಶಕ್ತಿಯನ್ನು ಪ್ರಾಣಾಯಸ್ವಾಹಾ ಎಂದು ಪ್ರಾಣಾದಿ ಪಂಚಪ್ರಾಣಗಳಲ್ಲಿ ಆಹ್ವಾನಿಸುತ್ತೇವೆ.

‘ ಪ್ರಾಣಾಪಾನವ್ಯಾನೋದಾನ ಸಮಾನಾ ಮೇ ಶುದ್ಧ್ಯಂತಾಂ
ಜ್ಯೋತಿರಹಂ ವಿರಜಾವಿಪಾತ್ಮಾಭೂಯಾಸಗ್ಂ ಸ್ವಾಹಾ ’ *

—ಎಂದು ತತ್ತ್ವಶುದ್ಧಿಗೆ ಆ ಶುದ್ಧ ಚಿಚ್ಛಕ್ತಿಯನ್ನೇ ಕರೆಯುತ್ತೇವೆ.

ಕಲಾರೂಪಿಣಿಯೂ, ಕಾಲರೂಪಿಣಿಯೂ ಆಕೆಯೇ ಆಗಿ ತನ್ನ

* ಯಜುರ್ವೇದಾಂತರ್ಗತ ತೈತ್ತಿರೀಯಾರಣ್ಯಕ ಮಂತ್ರ

ಈಶ್ವರ ಕಾರ್ಯವನ್ನು ಸಾಧಿಸುತ್ತಿದ್ದಾಳೆ. ಕಾಲಕಾಲಾತೀತವಾದ, ಕಾರ್ಯ ಕಾರಣ ವಿನಿರ್ಮುಕ್ತವಾದ, ಸರ್ವತಂತ್ರ ಸ್ವತಂತ್ರವಾದ ಆ ಭಗವಚ್ಛಕ್ತಿಯೇ ಸ್ವಲೀಲಾ ವಿಲಾಸಕ್ಕಾಗಿ ಕಾರ್ಯಕಾರಣಗಳ ದೇಶಕಾಲ ಪರಿಸ್ಥಿತಿಗಳ ಸ್ವಕಲ್ಪಿತ ಸ್ವಯಮೇವನಿರ್ಮಿತ ಪ್ರಚ್ಛನ್ನ ಬಂಧನದಲ್ಲಿ ಸಿಕ್ಕಿಕೊಂಡಿದೆ. ಸಿಕ್ಕಿಕೊಂಡಿದೆ ಎನ್ನುವುದಕ್ಕಿಂತ ಸಿಕ್ಕಿಕೊಂಡಂತೆ ಕಾಣುತ್ತಿದೆಯೆನ್ನುವುದು ಹೆಚ್ಚು ಸಮಂಜಸ.

ಯಾವುದು ಸ್ವಲೀಲಾ ವಿಲಾಸಕ್ಕಾಗಿ ಏಕವಾದದ್ದು ಅನೇಕವಾಯಿತೋ ಅದೇ ಅನೇಕತೆಯನ್ನು ಸಾಕುಮಾಡಿಕೊಂಡು 'ಏಕಮೇವ ಅದ್ವಿತೀಯ'ವಾಗಿ ನಿಲ್ಲುತ್ತದೆ. ಆ ಸ್ವಸಂಕಲ್ಪಕ್ಕೆ ಸಮಯವನ್ನೂ ತಾನೇ ಸಾಧಿಸುತ್ತದೆ. ಮನುಷ್ಯನ ಮಂದದೃಷ್ಟಿಗೆ ಮರ್ತ್ಯಪ್ರಜ್ಞೆಗೆ ಆಕೆಯ ಸಂಕಲ್ಪವೂ, ಆಕೆಯ ಸಾಧನೆಯೂ, ಆಕೆಯ ಪೂರ್ವನಿರ್ಣೀತವಾದ ಸಮಯವೂ ಅಗಮ್ಯಗೋಚರ.

ಆದರೂ ಜೀವಶಕ್ತಿಗೆ ಅಗಮ್ಯಗೋಚರವಾದ ಆ ದೈವಸಂಕಲ್ಪ ಜೀವಿಯ ಭಕ್ತಿಗೆ ದೃಗ್ಗೋಚರಿಸುತ್ತದೆ. ಭಕ್ತಿಯಿಂದ ಆಕೆಯನ್ನು ಆರಾಧಿಸಿ, ಆಕೆಯ ಕೃಪೆಯನ್ನು ಪಡೆದು, ಪಡೆದಮೇಲೆ ಆಕೆಗಾಗಿ ದುಡಿಯುವ ಮಾರ್ಗವೇ ಶ್ರೇಯಃಪಂಥ. ಆಕೆಯ ಭಗವತ್ಕಾರ್ಯಸಾಧನೆಯಲ್ಲಿ ನಾವು ನೆರವಾಗುವುದು ನಮ್ಮ ಉದ್ಧಾರಕ್ಕಾಗಿ ಮಾತ್ರ. ನಾವಿಲ್ಲದಿದ್ದರೂ, ನಾವೊಲ್ಲದಿದ್ದರೂ ಆಕೆಯು ತನ್ನ ಈಶ್ವರಕಾರ್ಯದಿಂದ ವಿಮುಖಳಾಗಲಾರಳು. ಆಕೆಯಿಂದ ಪಡೆಯುವ ಮತ್ತು ಆಕೆಗಾಗಿ ದುಡಿಯುವ ಪ್ರಸಾದ ಭಾವ ಕನ್ನಡಿಗರಲ್ಲಿ ಮೂಡಿಬಂದಾಗ ಆಕೆಯ ಪಾದಾರ್ಚನೆಗೆ ಅಡ್ಡಗಟ್ಟಿ ನಿಂತಿರುವ ಆಸುರೀಶಕ್ತಿಗಳನ್ನು ದಮನಮಾಡುವ ಶಕ್ತಿಯನ್ನು ಆಕೆಯೇ ನೀಡುತ್ತಾಳೆ. ಕನ್ನಡಿಗನ ಈ ಪ್ರಸಾದ ದೃಷ್ಟಿಯ ಪ್ರಕಾಶವನ್ನು ಯಾವ ಆಸುರೀ ಅಂಧಕಾರವೂ ಅಡ್ಡಗಟ್ಟಲಾರದು. ಆಕೆಯ ವರಪ್ರಸಾದದಿಂದ ಪ್ರಸಾದಕಾಯನಾದ ಕನ್ನಡಿಗನ ಕಾರ್ಯಸಾಧನೆಗೆ ಯಾವ ಕಾರಣವೂ ಕಂಟಕವಾಗುವುದಿಲ್ಲ.

ಆದರೆ ಇಲ್ಲಿಯೂ ನಮ್ಮ ಅಹಂಕಾರವು ನಮ್ಮ ಮಮಕಾರವು ತಲೆಯೆತ್ತಲು ಅವಕಾಶವಿದೆ. ಅದನ್ನೂ ಇಲ್ಲದಂತೆ ಮಾಡಿಕೊಳ್ಳಲು ಕೊನೆಯ

ಸಾಲುಗಳು ಹೇಳುವ ಮಾತೇ ಮಹಾಯಾನ.

ಹಿಂದೆ ನಿಂದವರ ಮುಂದಕೊಯ್ಯುವ ಮನವನಿತ್ತು
ಒಂದೆ ಪೂಜೆಯ ಕೊಳ್ಳುತಾಯಿ ಕನ್ನಡದೇವಿ

—ಎಂಬ ಈ ಬೇಡಿಕೆ ಸರಿಯಾದ ಬೇಡಿಕೆ. ತನ್ನೊಂದಿಗರನ್ನೆಲ್ಲಾ ಹಿಂದಕ್ಕೆ ನೂಕಿ ತಾನೇ ಮುಂದೆ ಬಿದ್ದು ಮಾಡುವ ಪೂಜೆಯು ಮಾತೆ ಪ್ರಿಯವಾಗಲಾರದು. ಭ್ರಾತೃವಂಚನೆಯೂ ಮಾತೃವಂಚನೆಯಷ್ಟೇ ಹೀನಾಯವಾದದ್ದು. ಸಾತ್ತ್ವಿಕ ಕಾರ್ಯಗಳಿಗೂ ಅಸಾತ್ತ್ವಿಕ ಮನೋಭಾವ ಪ್ರೇರಕವಾದರೆ ಅಥವಾ ಸಾತ್ತ್ವಿಕ ವೃತ್ತಿಯ ಹಿನ್ನೆಲೆಯಲ್ಲಿ ಅಸಾಧುವಾದ ಅಸಾತ್ತ್ವಿಕ ಪ್ರವೃತ್ತಿ ನೆಲೆಸಿದ್ದರೆ ಊರ್ಜಿತವಾಗುವುದು ಬಹಳಕಷ್ಟ. ತತ್ಪ್ರಯುಕ್ತ ಎಲ್ಲರನ್ನೂ ಕೂಡಿಕೊಂಡು ಹಿಂದೆ ಬಿದ್ದವರನ್ನೂ ಮುಂದೆ ಇದ್ದವರು ತಮ್ಮ ಜೊತೆಗೆ ತಂದುಕೊಂಡು ಕನ್ನಡಕುಲವೆಲ್ಲ ಒಂದಾಗಿ, ಕನ್ನಡಕುಲವೆಲ್ಲ ಮುಂದಾಗಿ ಆಕೆಯನ್ನು ಆರಾಧಿಸಬೇಕು. ಕನ್ನಡನಾಡು ಒಮ್ಮೈಯ್ಯಾಗಿ, ಒಮ್ಮನವಾಗಿ ಆ ತಾಯಿಯ ಸೇವೆಯಲ್ಲಿ ತೊಡಗಬೇಕು.

ಶ್ರೀ ಮೂಕಾಂಬೆ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಕುಂದಾಪುರದ ಹತ್ತಿರ ವಿರುವ ಕೊಲ್ಲೂರಿನ ಅಧಿದೇವತೆ. 'ಶಬ್ದ ಬ್ರಹ್ಮಾತಿವರ್ತತೇ' ಎಂಬ ಶ್ರುತಿ ವಾಕ್ಯವು ಯಾವ ಮಹಾತತ್ತ್ವವನ್ನು ಪ್ರತಿಪಾದಿಸುತ್ತಿದೆಯೋ ಆ ಮಹಾ ತತ್ತ್ವದ ಪ್ರತೀಕವೇ ಮೂಕಾಂಬೆ. ನಾದರೂಪಿಯೂ, ವೇದ ರೂಪಿಯೂ ಆಕೆಯೇ. ನಾದಾತೀತಳೂ, ವೇದಾತೀತಳೂ ಆಕೆಯೇ ಆಗಿದ್ದಾಳೆ. ಪರಾಪಶ್ಯಂತಾದಿ ವಾಗ್ರೂಪಳೂ, ಅವಾಙ್ಮಾನಸಗೋಚ ರಳೂ ಆಕೆಯೇ ಆಗಿದ್ದಾಳೆ. "ನಿಶ್ಶಬ್ದಂ ಬ್ರಹ್ಮ" ಎಂಬಂತೆ ನಿಶ್ಶಬ್ದ ಬ್ರಹ್ಮ ಸ್ವರೂಪಿಯು ಮೂಕಾಂಬೆ. ತಾನು ಮೌನಿಯಾಗಿದ್ದು, ಎಲ್ಲರೂ ಆಡುವ ಮಾತು ತಾನೆ ಆಗಿ, ಎಲ್ಲರಿಂದ ಮಾತಾಡಿಸುವಾಕೆ ಯಾರೋ ಆಕೆ ಮೂಕಾಂಬೆ. ನಾಲಗೆಯಿಲ್ಲದೆ ಆಕೆ ಆಡುವ ಮಾತನ್ನು ಕಿವಿಯಿಲ್ಲ ದವನು ಮಾತ್ರ ಕೇಳಬಲ್ಲ. ಮಾತಿನಮಲ್ಲರಾದ ಕನ್ನಡಿಗರ ಒಣಮಾತಿಗೆ ಮುನಿದು ಆಕೆ ಮೌನಿಯಾಗಿದ್ದಾಳೆ. 'ಯಥಾವಚೋ ನಿವರ್ತಂತೆ ಅಪ್ರಾಪ್ಯ ಮನಸಾ ಸಹ' ಎಂಬಂತೆ ಮಾತಿಗೂ ಮನಕ್ಕೂ ಮೀರಿದ ಆಕೆಯು ಮೂಕಳಾಗಿದ್ದಾಳೆ.



ರತ್ನಗರ್ಭಾ

೮

ತಾಯಿ ರತ್ನಗರ್ಭೆ! ಕನ್ನಡದ ಭೂಶಕ್ತಿ !
ದೇವಿ ಪರಮೇಶ್ವರಿಯೆ ಚಂದ್ರಭಾಗಾತಟಸ್ಥೆ !
ಅಲ್ಲನೀ ಕಲ್ಲಲ್ಲ ಮಣ್ಣಲ್ಲ–ಅಲ್ಲ
ಬರಿಝುರಿಯೋ ಹೊನಲೋ ಹೊಳೆಯೊ
ಜಡವಲ್ಲ ನೀನು–ಅಲ್ಲ–ಮೃಣ್ಮಯಳು.
ಚಿನ್ಮಯಳು ತಾಯಿ ನೀ ಹಿರಣ್ಮಯಳು
ತಾಯಿ ಕನ್ನಡ ಮಾತೆ !
ಭಾರತಿಯ ತನುಜಾತೆ !
ನಮ್ಮ ಜೀವನಶಕ್ತಿ—
ಓಂಕಾರದಭಿವ್ಯಕ್ತಿ—
ಭಗವತಿಯು ನೀನು !

ಕನ್ನಡ ಆತ್ಮಶ್ರೀಯ ಪಾರ್ಥಿವ ರೂಪವೇ ಭೂಶಕ್ತಿಯಾದ ಪರಮೇಶ್ವರಿ ರತ್ನಗರ್ಭೆ! ದೇಹವೆಂದರೆ ಮಾಂಸಪಿಂಡ, ದೇಶವೆಂದರೆ ಮಣ್ಣುಮುದ್ದೆ ಎನ್ನುವ ಅವಾಸ್ತವಿಕ ಅನಾರ್ಯಭಾವವು ಆರ್ಯಾವರ್ತದಲ್ಲಿ ಆವರಿಸಿಕೊಂಡು, ದೇಶವೆಂದರೆ ಈಶ್ವರಶಕ್ತಿಯ ಪ್ರಕಟಿತರೂಪ, ದೇಹವೆಂದರೆ ಆತ್ಮದ ಅಭಿವ್ಯಕ್ತ ರೂಪವೆಂಬ ಭಾವವು ಅಭಾವವಾಗಹತ್ತಿತು.

'ಚಿಚ್ಛಕ್ತಿಶ್ಚೇತನಾರೂಪಾಜಡಶಕ್ತಿರ್ಜಡಾತ್ಮಿಕಾ'

—ಎಂದು ಅಜಡಮತಿಗಳಾದ ಋಷಿಗಳು ಹಾಡಿದರೂ

'ದೇಹೋದೇವಾಲಯಃ ಪ್ರೋಕ್ತೋಜೀವೋದೇವಸ್ಸನಾತನಃ'

—ಎಂದು ಆಧ್ಯಾತ್ಮಿಗಳು ನಿಜವಾದ ಮಾತನ್ನು ಆಡಿದರೂ ಆ ಮಾತೂ ಆ ಕಥೆ ನಮ್ಮವರಿಗೆ ಹಿಡಿಸಲಿಲ್ಲ. ಪಂಚಭೂತಗಳೂ ಈಶ್ವರರೂಪವೆಂಬ ಭಾವನೆ ಕೇವಲ ರೂಪಕವಾಗಿಯೇ ಉಳಿಯಿತು. ಈಶ್ವರನ ಪಂಚಮುಖಗಳೇ ಪಂಚಭೂತಗಳೆಂಬುದೂ ಪೃಥ್ವ್ಯಪ್ತೇಜೋವಾಯುರಾಕಾಶಗಳೂ ಚಂದ್ರ ಸೂರ್ಯ ಆತ್ಮಗಳೂ ಭಗವಂತನ ಅಷ್ಟದೇಹಗಳೆಂಬುದೂ, ಭಗವಂತನು ಈ ಅಷ್ಟಮಾತ್ರ್ಯಾತ್ಮಕನೆಂಬುದೂ ಆರ್ಯರ ಆಸ್ತಿಕ್ಯ ಭಾವ. ಎಲ್ಲದರಲ್ಲಿಯೂ ಅವನ ಶಕ್ತಿ ಅಂತರ್ಯಾಮಿಯಾಗಿದೆ. ಎಲ್ಲವೂ ಆ ಮಹಚ್ಛಕ್ತಿಯ ವ್ಯಕ್ತರೂಪಗಳೇ ಎಂಬ ಅರಿವು ಬರಬರುತ್ತಾ ಮರೆಯಾಗಿ ಭೌತಿಕ ವಿಜ್ಞಾನದ ಅಜ್ಞಾನದಲ್ಲಿ ಜಗತ್ತು ನಾಸ್ತಿಕಮಯವಾಯಿತು. ಧಾತ್ರಿಯೂ, ವಿಧಾತ್ರಿಯೂ ಆ ಮಹಾಶಕ್ತಿಯೇ ಎಂಬ ಪೂರ್ಣಜ್ಞಾನ ಇಲ್ಲದೇ ಇರುವಿಕೆಯೇ ನೆಲದ ಮೇಲೆ ಗೆರೆಗಳೆಳೆದು ಇದು ನನ್ನದು, ಇದು ನಿನ್ನದು ಎಂಬ ಇಲ್ಲದ ಸಲ್ಲದ ಕಾರ್ಯಕಲಾಪಕ್ಕೆ ಕಾರಣವಾಗಿದೆ. ಎಲ್ಲವೂ ಭಗವತಿಯ ರೂಪ ಆಕೆಯ ಕೃಪಾ ಪ್ರಸಾದಕ್ಕೆ ಸಲ್ಲದವರು ಯಾರೂ ಇಲ್ಲವೆಂಬ ತಿಳುವಳಿಕೆ ಬೆಳೆದಾಗ ಮನುಕುಲ ಮುನಿಕುಲವಾದೀತು. ಈನೆಲ, ಈನೀರು, ಈಗಾಳಿ, ಈಶ್ವರಾತ್ಮಕವಾದವು. ಆದ್ದರಿಂದ ಇವು ಎಲ್ಲರವು. ದೇಶವೆಂದರೆ ಮಹಾ

ಶಕ್ತಿಯು ಮೈ, ಹರಿಯುವ ನದಿಗಳೆಲ್ಲವೂ ಆಕೆಯ ಎದೆಯ ಹಾಲು. ನಾವು ಉಣ್ಣುವ ಅನ್ನ ಆಕೆಯ ಪ್ರಸಾದ, ಕುಡಿಯುವ ನೀರು ಆಕೆಯ ಪಾದತೀರ್ಥ ವೆಂಬ ಪ್ರಸಾದಿಕದೃಷ್ಟಿ ಕನ್ನಡಿಗರಲ್ಲಿ ಬೆಳೆಯಬೇಕು.

ದೇಶವು ಮೃಣ್ಮಯವೆಂದು ನೋಡುವ ದೃಷ್ಟಿ ಅದು ಪದಾರ್ಥ ದೃಷ್ಟಿ. ದೇಶವು ಚಿನ್ಮಯವೆಂದು ನೋಡುವ ದೃಷ್ಟಿ ಅದು ಪ್ರಸಾದ ದೃಷ್ಟಿ.

ಸರ್ವಮಂತ್ರಮೂಲವಾದ ಶಿವಾತ್ಮಕವಾದ ಪ್ರಣವದ ಚಿದ್ರೂಪವೇ ಸದ್ರೂಪವಾಗಿ ಪರಿಣಮಿಸಿ ದೇಶವಾಗಿದೆ. ಏನೂ ಇಲ್ಲದ ಏನೂ ಅಲ್ಲದ ಸರ್ವಶೂನ್ಯನಿರಾಲಂಬ ಸ್ಥಿತಿಯಿಂದ ಆಕಾಶವೂ, ಆಕಾಶದಿಂದ ವಾಯುವೂ, ವಾಯುವಿನಿಂದ ಅನಲವೂ, ಅನಲದಿಂದ ಜಲವೂ, ಜಲದಿಂದ ನೆಲವೂ— ಹೀಗೆ ಕ್ರಮಾನುಗತವಾಗಿ ಪರಿಣಮಿಸಿದವು. ಪ್ರಪಂಚವೆಲ್ಲವೂ ಈ ಭೂತ ಪಂಚಕಗಳ ಪ್ರಾಕೃತರೂಪ.

'ಮಾಯಾಂತುಪ್ರಕೃತಿಂ ವಿಧ್ದಿ
ಮಾಯಿನಂತು ಮಹೇಶ್ವರಂ'

–ಎಂದು ಹೇಳುವ ಶ್ವೇತಾಶ್ವತರ ಶ್ರುತಿಯಂತೆ ಪ್ರಕೃತಿಯೆಲ್ಲವೂ ಈಶ್ವರನ ಮಾಯೆ ಈ ಮಾಯಾವಿಲಾಸ ವಿಹಾರಿಯಾಗಿರುವ ಪರಮಪುರುಷನೇ ಈಶ್ವರ.

ಕನ್ನಡ ನೆಲದಲ್ಲಿ ನೆಲೆಸಿರುವ ಆ ಮಹಾ ಶಕ್ತಿಯನ್ನು 'ಮಾತೃ ಕೃಪೆ' ಯಲ್ಲಿಯೂ ಶ್ರೀ ದೊಡ್ಡಮೇಟಿಯವರು ನೆನೆದಿದ್ದಾರೆ.

"ನಾಡೆಂಬುದು ಬರಿ ಮಣ್ಣು ನೆಲವಲ್ಲ ಕಾಣಿರೋ
ನೆಲವೆಲ್ಲ ಮಣ್ಣೆಂಬ ಭ್ರಾಂತಿ ಮಾಣಿರೋ
ನೆಲವೆಂಬುದಿದು ತಾಯಿಯ ತನುವೆಂದರಿಯಿರೋ
ಅದು ಜಡವಲ್ಲ ಉಸಿರಿದ್ದೊಡಲು ನೋಡಾ
ತಾಯಿ ಭುವನೇಶ್ವರಿಯ ನಿಜರೂಪ"

"ನೆಲವ ಸುತ್ತಿ ಬಂದವನೊಬ್ಬ
ನಾಡ ಕಂಡೆನೆನಬಹುದೇ ತಾಯಿ ?
ಈ ನೆಲದ ಮಣ್ಣು ಕಣದಲ್ಲಿ ಮಾತೃರೂಪವನು
ನೆರೆ ನೋಡದನ್ನಕ್ಕ ನಾಡ ನಿಜದರ್ಶನವಪ್ಪುದೆ ?
ನಾಡ ತುಂಬೆಲ್ಲ ನಿಮ್ಮ ರೂಪವ ಕಾಣದ ಕಣ್ಣು
ಪೀಲಿಯ ಕಣ್ಣು ಕಾಣಾ ಭುವನೇಶ್ವರಿ !"

ದೇಶವೆಲ್ಲವೂ ಮಾತೃಶ್ರೀಯ ಶ್ರೀರೂಪವೆಂಬ ದಿವ್ಯದೃಷ್ಟಿ ಭಾರತೀಯ ನಾದ ಕನ್ನಡಿಗನಿಗೆ ಒದಗಿ ಬರಲಿ.



ಶ್ರೀ ದುರ್ಗೆ

೬

ಓ ತಾಯಿ ಕನ್ನಡ ದುರ್ಗೆ ಭದ್ರಕರ್ಣಿಕೆ
      ಗೋಕರ್ಣಕೃತನಿಲಯೆ !
ನಿನ್ನ ಪಾದಪಂಥವ ತೊಟ್ಟು ಎದ್ದಿಹೆವು ನಾವಿಂದು !
ಓ ಮಾತೆ ನಿನ್ನ ಸಂಕಲ್ಪ ಸಾಧಿಸಲು
ಅಗ್ನಿಪಥವನೆ ತುಳಿದು ನುಗ್ಗುವೆವು ಮುಂದೆ !
ನಮ್ಮ ಭಾವಜ್ವಾಲಾಮಾಲೆಯು ಮುಡಿಸಿ
      ನಿನ್ನ ಸಿರಿಯುಡಿಗೆ
ಪ್ರಾಣಫಲವನ್ನರ್ಪಿಸಿಹೆವು ತಾಯೆ !
ಉದ್ದಂಡ ಧೈರ್ಯವನು ನೀನಿತ್ತು ಹರಸಮ್ಮ
ಓ ಚಿದಗ್ನಿಕುಂಡಸಂಭೂತೆ ಮಹಾಬಲ ಸಂಭಾವ್ಯೆ !
ನಿನ್ನ ಬಲಗೊಂಡು ಬಂದೆಮಗೆ ಬಲವ ನೀಡು
ಓ ತಾಯಿ ಭಯವಿನಾಶಿನಿಯೆ ಭರ್ಗೆ
      ಶ್ರೀ ದುರ್ಗೆ !

*

೯

ಗೋಕರ್ಣ ಕ್ಷೇತ್ರವು ಭಾರತದ ಪುಣ್ಯ ಕ್ಷೇತ್ರಗಳಲ್ಲಿ ಒಂದು. ತ್ರೇತಾಯುಗದ್ದೆಂದು ಮಾನ್ಯವಾಗಿ ಪುರಾಣ ಪ್ರಸಿದ್ಧವಾದ ಈ ದಿವ್ಯ ಕ್ಷೇತ್ರಾಧಿನಾಯಕ ಮಹಾಬಲೇಶ್ವರ; ಕ್ಷೇತ್ರಾಧಿನಾಯಕಿ ಭದ್ರಕರ್ಣಿಕೆ. ಮಹಾಬಲನ ಬಲವೂ, ಗೆಲುವೂ, ಒಲವೂ ಆದ ಆಕೆ ಕನ್ನಡದ ಗಡಿಯನ್ನೂ ಕನ್ನಡದ ಗುಡಿಯನ್ನೂ ತನ್ನ ವರದಹಸ್ತದಿಂದ ಕಾಯುತ್ತಿರುವ ಶ್ರೀ ದುರ್ಗೆ. ಕಳ್ಳಭಕ್ತರ ಸುಳ್ಳುಭಕ್ತಿಗೆ ವಶನಾಗಿ ವಂಚಿತನಾಗದಂತೆ ಭಗವಂತನನ್ನು ಬೆಂಬಿಡದೆ ಕಾಯುವ ಶಕ್ತಿ ಆಕೆ—ಈ ಮಾತನ್ನೇ ಗೋಕರ್ಣ ಕ್ಷೇತ್ರದ ಇತಿಹಾಸ ಸೂಚಿಸುತ್ತಿರುವುದು. ವಿಶ್ವವೆಲ್ಲವೂ ಯಾವನ ಶಕ್ತಿಯ ಒಂದಂಶ ಮಾತ್ರವಾಗಿ ಬೆಳಗುತ್ತಿದೆಯೋ ಆ ವಿಶ್ವನಾಥನು ಅಖಂಡ ಶಕ್ತಿ ಸಂಯುಕ್ತ ನಾಗಿದ್ದಾನೆ. ಅವನಲ್ಲಿರುವ ಬಲವು ಮಾತ್ರ ಅಪರಿಮಿತ. ಉಳಿದೆಲ್ಲ ದರಲ್ಲಿಯೂ ಉಳಿದೆಲ್ಲವುಗಳಲ್ಲಿಯೂ ಇರುವ ಬಲವು ಪರಿಮಿತ. ಪರಿಮಿತ ವಾದದ್ದು, ಅಲ್ಪವಾದದ್ದು, ಸ್ವಲ್ಪವಾದದ್ದು ಮಹಚ್ಛಬ್ದವಾಚ್ಯವಾಗಲಾರದು. ಮಹತ್ತರವಾದ, ಮಹನೀಯವಾದ, ಮಹೋತ್ಕೃಷ್ಟವಾದ ಬಲವು ಯಾರದೋ ಅವನು ಮಹಾಬಲ. ಅಂತಹ ಮಹಾಬಲನಾಮನು ಭಗವಂತನೊಬ್ಬನೇ. ಮಹಾಬಲನಾದ ಭಗವಂತನ ಭಗವಚ್ಛಕ್ತಿಯೇ ಭದ್ರಕರ್ಣಿಕೆ.

ದುರ್ಗಮವಾದದ್ದು ದುರ್ಗ! ದುರ್ಗವೆಂದರೆ ಹೋಗುವುದು ಕಷ್ಟ ವೆಂದರ್ಥ. ಹೋಗುವುದೆಂದರೆ ಆಕೆಯ ಆಜ್ಞೆಯನ್ನು ಮೀರಿ ಹೋಗುವ ದೆಂದರ್ಥ. ಯಾರೂ ಮೀರಿ ಹೋಗಲಾರದ ಆಜ್ಞೆ ಆಕೆಯದು, 'ಸರ್ವಾನುಲ್ಲಂಘ್ಯಶಾಸನೆ'ಯೂ 'ಸವ್ಯಾಪಸವ್ಯ ಮಾರ್ಗಸ್ಥೆಯೂ', 'ಸರ್ವಾಪದ್ವಿನಿವಾರಿಣಿ'ಯೂ ಆದ ಆ ಮಹಾಶಕ್ತಿ ಶ್ರೀ ದುರ್ಗೆ. ಆಕೆಯನ್ನು ಮೀರಿ ಹೋಗುವುದೂ ಆಕೆಯು ಹೋಗುವದಾರಿಗೆ ಅಡ್ಡಾಗುವುದೂ ಯಾರಿಗೂ ಸಾಧ್ಯವಾಗದ ಮಾತು.

'ಮಹಾಬಲಸಂಭಾವ್ಯೆ'ಯೆಂದೂ, 'ಚಿದಗ್ನಿಕುಂಡಸಂಭೂತೆ' ಯೆಂದೂ ಸಂಬೋಧಿತಳಾಗಿರುವ ಶ್ರೀ ದುರ್ಗೆಯು ವೀರಾರಾಧ್ಯಳು! ವೀರ ಮಾತೆ! ವೀರ್ಯನಂದಿತೆ! ಅಂತರ್ಮುಖ ಸಮಾರಾಧ್ಯಳೂ ಬಹಿರ್ಮುಖ ಸುದುರ್ಲಭಳೂ ಆದ ಆಕೆಯು ನಿರ್ವಿಣ್ಣರಾಗಿ ನಿಲ್ಲುವ, ನಿರ್ವೀರ್ಯರಾಗಿ ನಿಲ್ಲುವ ನಡೆಯಲಾರದವರಿಗೆ ಸಿಕ್ಕುವ, ಸಿಕ್ಕಿದರೂ ದಕ್ಕುವ ಸುಲಭ ಸಾಧ್ಯಳಲ್ಲ. '**ದುರ್ಲಭಾ ದುರ್ಗಮಾ ದುರ್ಗಾ ದುಃಖಹಂತ್ರೀ ಸುಖಪ್ರದಾ**' ಆದ ಆ ಮಹಾಶಕ್ತಿಯು ಸ್ಥಿರ ಸಾಧನೆಗೂ, ಅಚಂಚಲ ಶ್ರದ್ಧೆಗೂ ಅಪ್ರಮತ್ತ ಬುದ್ಧಿಗೂ ಒಲಿಯುವ ಗೆಲುವು. ಆಕೆಯನ್ನು ಅರಿಯುವ ಜ್ಞಾನ ಮಾರ್ಗವೂ ಕಷ್ಟವೇ ಆಕೆಯ ಆಜ್ಞೆಯನ್ನು ನಿರ್ವಹಿಸುವ ಕ್ರಿಯಾಮಾರ್ಗವೂ ಕಷ್ಟವೇ. ನಿರ್ಭಯರಾಗಿ, ನಿರ್ಭವರಾಗಿ, ನಿರ್ವಿಕಲ್ಪಕರಾಗಿ, ನಿಶ್ಚಿತ ಮನಸ್ಕರಾಗಿ, ನಡೆಯುವವರು ಮಾತ್ರ ಆಕೆಯ ಕೃಪಾಪಾತ್ರರಾಗುತ್ತಾರೆ. ಉಳಿದವರು ತಾವುಳಿದಲ್ಲಿಯೇ ಕೊಳೆಯುತ್ತಾ ಉಳಿಯುತ್ತಾರೆ; ಇಲ್ಲ ಮಾರ್ಗ ಮಧ್ಯದಲ್ಲಿ ಅಳಿಯುತ್ತಾರೆ.

ಓ ಮಾತೆ ನಿನ್ನ ಸಂಕಲ್ಪ ಸಾಧಿಸಲು
ಅಗ್ನಿ ಪಥವನೆ ತುಳಿದು,
ನುಗ್ಗುವೆವು ಮುಂದೆ!

—ಈ ಶ್ರದ್ಧೆ, ಈ ನಿಷ್ಠೆ ಈ ಅವಧಾನಭಕ್ತಿಗೆ ಮಾತ್ರವೇ ಆಕೆಯ ಅಪೂರ್ವ ಪೂರ್ಣಾನುಗ್ರಹ.

ಆಕೆಯ ಭಕ್ತಿಯಿಂದ ಆಕೆಯ ಶಕ್ತಿಯಿಂದ ಹೊತ್ತಿಉರಿಯುವ ಹೃದಯಾಂತರಾಳದ ಜ್ವಾಜ್ವಲ್ಯಭಾವಜ್ವಾಲೆಯನ್ನು ಆಕೆಯ ಶ್ರೀ ಚರಣಕ್ಕೆ ಮುಡಿಸಿ ತಮ್ಮ ಪ್ರಾಣವನ್ನೇ ಆಕೆಗೆ ಫಲವಾಗಿ ನಿವೇದಿಸಿ ನಿರ್ಭಾವರಾಗಿ, ನಿಷ್ಪ್ರಾಣರಾಗಿ ನಿಂತಾಗ ಆಕೆಯ ಚಿಚ್ಛಕ್ತಿಯೇ ನಮ್ಮಲ್ಲಿ ಭಾವವಾಗಿ, ಬುದ್ಧಿಯಾಗಿ, ಪ್ರಾಣವಾಗಿ, ತ್ರಾಣವಾಗಿ ಪರಿಣಮಿಸುತ್ತದೆ.

ಆಕೆಯನ್ನು ಮರೆತ ಮತ್ತು ಆಕೆಯನ್ನು ತೊರೆದ ನಮ್ಮ ಬಲವೆಲ್ಲವೂ ಪಶುಬಲ. ಪಶುಬಲ ಪಾಶಬದ್ಧವಾದದ್ದು. ಪಾಶಬದ್ಧವಾದ ಪಶುಬಲ ನಿರ್ಬಲ. ನಾವು ನಿರ್ಬಲರಾಗಲು ಕಾರಣ ನಮ್ಮ ಬಲವು ಆಕೆಯದು ಎಂಬ ಅರಿವೂ ಆಕೆಯೇ ನಮ್ಮ ಬಾಹ್ಯಾಂತರಗಳಲ್ಲಿಯ ಬಲವೆಂಬ ಅರಿವೂ

ಇಲ್ಲದಿರುವಿಕೆಯೇ. ಯಾರನ್ನು ಮರೆತು ನಿರ್ಬಲರಾಗಿದ್ದೇವೆಯೋ ಆಕೆಯನ್ನು ಅರಿತು ಆಕೆಯ ಸಂಕಲ್ಪದ ಜೊತೆ ಬೆರೆತು ನಾವು ಮರಳಿ ಬಲವಂತರಾಗಬೇಕು. ಆಕೆಯ ಬಲವೇ ಬಲ. ಆಕೆಯ ಬಲದೆದುರು ಮರೆತು ನಿಲ್ಲುವ ಆಸುರೀ ಶಕ್ತಿಗೆ ಯಾವುದಕ್ಕೂ ಗೆಲುವಿಲ್ಲವಾದ್ದರಿಂದ ಆಕೆಯನ್ನೇ ಬಲಗೊಂಡು ಆಕೆಯ ಬಲವನ್ನೇ ನಂಬಿಕೊಂಡು ನಿಂತಾಗ ಆಕೆಯ ಬೆಂಬಲ ದೊರೆಯುತ್ತದೆ.

ಭಯವಿನಾಶಿನಿಯೂ, ಭರ್ಗೆಯೂ, ದುರ್ಗೆಯೂ ಆದ ಭದ್ರಕರ್ಣಿಕೆಯು ಉದ್ದಂಡ ಧೈರ್ಯವನ್ನೂ ಉತ್ಕೃಷ್ಟ ಶಕ್ತಿಯನ್ನೂ ಕನ್ನಡ ಕುಲಕ್ಕೆನೀಡಲಿ.

ಭಾರತದ ಬಂಧವಿಮೋಚನೆಗಾಗಿ ದುರ್ಗೆಯನ್ನು ಪ್ರಾರ್ಥಿಸಿದ ಶ್ರೀ ಅರವಿಂದರ 'Hymn to Durga' ಮಹೋಜ್ವಲವಾದ ಸ್ತವನಕವನ.

Mother Durga! Rider on the lion, giver of all strength, Mother, beloved of Siva! We, born from thy Parts of Power, we the youth of India, are seated here in thy temple. Listen, O Mother, descend upon earth, make thyself manifest in this land of India.

* * *

Mother Durga! India lies low in selfishness and fearfulness and littleness. Make us great, make our efforts great, our hearts vast, make us true to our resolve. May we no longer desire the small, void of energy, given to laziness, stricken with fear.

* * *

Mother Durga! When we possess thee, we shall no longer cast thee away; we shall bind thee to us with the tie of love and devotion, come, Mother, manifest thyself in our mind and life and body.

* * *

Come, Revealer of the hero-path. We shall no longer cast thee away. May our entire life become a ceaseless worship of the Mother, all our acts a continuous service to the Mother, full of love, full of energy. This is our Prayer, O Mother, descend upon earth, make thyself manifest in this land of India.

—Sri Aurobindo

—ಎಂದು ಭಾರತದ ರಾಜಕೀಯ ರಂಗಕ್ಕೆ ಭಾರತಿಯ ಶಕ್ತಿಯ ಅವತಾರವನ್ನೂ ಆವಿಷ್ಕಾರವನ್ನೂ ಆಹ್ವಾನಿಸಿ, ಆಧ್ಯಾತ್ಮಿಕವಾದ ಅತಿಮಾನಸ ಬಲವನ್ನು ನೆಲಕ್ಕೆ ತಂದು ನೆಲೆಗೊಳಿಸಿದ ಶ್ರೀ ಅರವಿಂದರ ಪೂರ್ಣಯೋಗದ ಮಾತೃಮಾರ್ಗಾವಲಂಬಿಯಾದ ಶ್ರೀ ದೊಡ್ಡಮೇಟಿಯವರೂ ಶ್ರೀ ದುರ್ಗೆಯ ಭಾರ್ಗವಶಕ್ತಿಯನ್ನು ಕನ್ನಡ ಕುಲದ ಉದ್ಧಾರಕ್ಕಾಗಿ, ಕನ್ನಡ ನೆಲದ ಉದ್ಧಾರಕ್ಕಾಗಿ ಇಲ್ಲಿ ಪ್ರಾರ್ಥಿಸಿದ್ದಾರೆ.

ದುರ್ಲಭಾ ದುರ್ಗಮಾ ದುರ್ಗಾ
ದುಃಖ ಹಂತ್ರೀ ಸುಖಪ್ರದಾ

—ಶ್ರೀ ಲಲಿತಾ ಸಹಸ್ರನಾಮ

ಆಪತ್ಸು ಮಗ್ನಃ ಸ್ಮರಣಂ ತ್ವದೀಯಂ
ಕರೋಮಿ ದುರ್ಗೇ ಕರುಣಾರ್ಣವೇ ಶಿವೇ
ನೈತಚ್ಛಠತ್ವಂ ಮಮ ಭಾವಯೇಥಾಃ
ಕ್ಷುಧಾ ತೃಷಾರ್ತಾ ಜನನೀಂ ಸ್ಮರಂತಿ

—ಶ್ರೀ ಶಂಕರಾಚಾರ್ಯರು

ಮಾತರ್ಮೇ ಮಧುಕೈಟಭಘ್ನಿ ಮಹಿಷಪ್ರಾಣಾಪಹಾರೋದ್ಯಮೇ
ಹೇಲಾನಿರ್ಮಿತ ಧೂಮ್ರಲೋಚನ ವಧೇ ಹೇ ಚಂಡ ಮುಂಡಾರ್ದಿನಿ
ನಿಶ್ಶೇಷೀಕೃತ ರಕ್ತಬೀಜ ದನುಜೇ ನಿತ್ಯೇ ನಿಶುಂಭಾವಹೇ
ಶುಂಭ ಧ್ವಂಸಿನಿ ಸಂಹರಾಶು ಧುರಿತಂ ದುರ್ಗೇ ಸಮಸ್ತಂಬಿಕೇ

—ಶ್ರೀ ದುರ್ಗಾ ವರಿವಸ್ಯಾಸರ್ವಸ್ವಂ



ಇಂದ್ರಾಣಿ

೧೦

ಓ ತಾಯಿ ಇಂದ್ರಾಣಿ !
ಅತೀಂದ್ರಿಯಾನಂದ ಅಭಿವ್ಯಕ್ತರೂಪೆ
    ಕನ್ನಡಾಂಬೆ !
ನಮ್ಮ ಬೆನ್ನಿಂಗಿರಲಿ ನಿನ್ನ ರಕ್ಷೆ !
ನುಗ್ಗುವೆವು ನಾವಿಂದು ಸತ್ಯಸೀಮೆಯನು
ದಾಟುವೆವು ನಾವಿಂದು ಭಯದ ಮೇರೆಯನು !
ಭಾರತದ ಮಾರ್ಗವನೆ ಹಿಡಿದು ಸಾಗುವೆವು.
ಮನುಕುಲದ ಕಲ್ಯಾಣವೇ ನಮ್ಮ ಗುರಿ !
ನಿನ್ನಭಯ ತಾನೊಂದೆ ನಮ್ಮ ಸಿರಿ!
ನಿನ್ನ ಕರುಣಾವತರಣದಿಂದ ತರುಣರನು
ಮುನ್ನಡೆಸು ನಡೆಸು ತಾಯಿ !
ನಿನ್ನ ಕೃಪೆಯೊಂದನೇ ಬೇಡುವೆವು ಮಾತೃಭಿಕ್ಷೆ!

*

ಭಯವಿನಾಶಿನಿಯಾದ ಶ್ರೀದುರ್ಗೆಯನ್ನು ಬಲಗೊಂಡು ಕನ್ನಡ ಸಾಧಕನು ಪೂರ್ಣಪ್ರಕಾಶ ಪೂರ್ಣಳಾದ ಇಂದ್ರಾಣಿಯನ್ನು ಪ್ರಾರ್ಥಿಸುತ್ತಿದ್ದಾನೆ—ಆಕೆಯ ಮಾತೃಕೃಪೆ ಬೆಂಬಲವಾಗಿ ಸದಾ ಸರ್ವದಾ ಇರಲಿ ಎಂದು.

ಭವೋನ್ಮುಖನಾಗಿ, ಭವಜೀವಿಯಾಗಿ, ಭವಿಯಾಗಿರುವ ಜೀವಿಗೆ ಭಯದ ಮೇರೆಯನ್ನು ಮೀರುವ ಸಾಹಸವಿಲ್ಲ, ಶಕ್ತಿಯಿಲ್ಲ. ಭವವು ಗೀಚಿರುವ ಭಯದ ಮಿತಿ ಮೇರೆಗಳನ್ನು ಮೀರುವ ಶಕ್ತಿ ಜೀವಿಗೆ ಬರುವುದು ನಿರ್ಭವಳೂ ನಿರ್ಭಯಳೂ ಆದ ಈಶ್ವರಶಕ್ತಿಯ ಅನನ್ಯ ಭಕ್ತನಾದಾಗಲೇ.

ಅತೀಂದ್ರಿಯಾನಂದದ ಅಭಿವ್ಯಕ್ತರೂಪಳೇ ಭಗವತಿ ಇಂದ್ರಾಣಿ. ಭಗವತಿಯ ಅಂತಃಕರಣವೇ ಆಕೆಯ ಸಂತಾನವಾದ ನಮ್ಮೆಲ್ಲರ ಕರಣಗಳು ಅಥವಾ ಇಂದ್ರಿಯಗಳು. ಅಹಂಕಾರ ಮಮಕಾರಗಳ ವಶವರ್ತಿಯಾಗಿರುವ ಇಂದ್ರಿಯ ಸಂಚಯ ಸರ್ವೇಂದ್ರಿಯಾಧಿದೇವತೆಯಾದ ಇಂದ್ರಾಣಿಯ ವಶವಾಗಬೇಕು. ಕಿವಿಯಲ್ಲಿಯ ಕೇಳುವ ಶಕ್ತಿಯೂ, ಕಣ್ಣಿನ ಕಾಣುವ ಶಕ್ತಿಯೂ, ನಾಲಗೆಯಲ್ಲಿಯ ರಸನಶಕ್ತಿಯೂ, ನಾಸಿಕದಲ್ಲಿಯ ಗಂಧ ಗ್ರಾಹಕ ಶಕ್ತಿಯೂ, ತ್ವಕ್ಕಿನ ಸ್ಪರ್ಶಶಕ್ತಿಯೂ ಆಕೆಯೇ. ಶಬ್ದಸ್ಪರ್ಶ ರೂಪರಸಗಂಧಾತ್ಮಕವಾಗಿರುವ ವಿಶ್ವವೂ ಆಕೆಯೇ ಅವುಗಳನ್ನು ಅನುಭವಿಸುವ ಇಂದ್ರಿಯಗಳೂ ಆಕೆಯೇ. ಅರಿಯುವ ಜ್ಞಾನೇಂದ್ರಿಯಗಳೂ ಆಚರಿಸುವ ಕರ್ಮೇಂದ್ರಿಯಗಳೂ ಆಕೆಯೇ ಎಂಬ ಐಕ್ಯಭಾವಕ್ಕೆ ಸಾಧಕನ ಸಾಧನೆಯ ಅನುಭಾವವೇ ಸಾಕ್ಷಿ. ಕಣ್ಣು ಆಕೆಯ ಶಕ್ತಿಯಿಂದ ಆಕೆಯನ್ನೇ ನೋಡುವಂತಾಗಬೇಕು. ಕಿವಿ ಆಕೆಯದಾಗಿ ಆಕೆಯ ಶಕ್ತಿಯಿಂದ ಆಕೆಯ ಶಬ್ದವನ್ನೇ ಕೇಳುವಂತಾಗಬೇಕು. ಜಿಹ್ವೆ ಆಕೆಯದಾಗಿ ಆಕೆಯ ಪ್ರಸಾದದಲ್ಲಿರುವ ಮಾಧುರ್ಯವನ್ನು ಸವಿಯುವಂತಾಗಬೇಕು. ವಾಸನೆಗಳೆಲ್ಲವೂ ಕ್ಷಯಿಸಿ ನಿರ್ವಾಸನಾಬುದ್ಧಿಯಿಂದ ನಾಸಿಕವು ಆಕೆಯದಾಗಿ ಆಕೆಯೇ ಎಲ್ಲದರಲ್ಲಿ ಗಂಧರೂಪಿಣಿಯಾಗಿ ವಾಸಿಸುವ ವಾಸನಾರೂಪಳೆಂದು

ಮೂಸುವಂತಾಗಬೇಕು. ಚರ್ಮವು ಆಕೆಯದಾಗಿ ಆಕೆಯ ಶಕ್ತಿಯಿಂದ ಆಕೆಯ ಶ್ರೀಪಾದದ ಸ್ಪರ್ಶ ಸುಖವನ್ನು ಅನುಭವಿಸುವಂತಾಗಬೇಕು. ಚರ್ಮವು ಆಕೆಯ ಶ್ರೀಚರಣಕ್ಕೆ ಚಮ್ಮಾವುಗೆಯಾಗಬೇಕು. ನಾನಿಲ್ಲ ನಾನಲ್ಲವೆಂಬ ಭಾವನೆ ಕರಿಗೊಂಡಾಗ ಎಲ್ಲವೂ ಆಕೆಯೇ ಎಲ್ಲದರಲ್ಲಿಯೂ ಆಕೆಯೇ ಎಂಬ ಭಾವನೆ ನಿಚ್ಚಳವಾಗಿ ನೆಲೆಗೊಳ್ಳುತ್ತದೆ.

ಜೀವಿಯು ಮಲಯುಕ್ತನಾಗಿ ಈಶ್ವರ ಬಲದಿಂದ ದೂರವಾಗಿದ್ದಾನೆ. ಮಲವೇ ತನ್ನ ಬಲವೆಂದು ತಿಳಿದಿದ್ದಾನೆ. ಮಲದ ಬಲವನ್ನೇ ಬೆಂಬಲ ಗೊಂಡ ಜೀವಿಗೆ ಭಯವೂ ಭ್ರಮಣೆಯೂ ಸಹಜವೇ. ಜೀವಿಗೆ ಜಂಜಡ ವಾಗಿ ಕಾಡುತ್ತಿರುವ ಈ ಮಲವು ತ್ರಿವಿಧ ರೂಪಕ. ತಾನು ಮಹದ್ರೂಪಿ ಯಾಗಿದ್ದರೂ ಶರೀರ ಸಂಗದಿಂದ ಅಣುರೂಪಿಯೆಂದು ತಿಳಿದುಕೊಂಡಿರು ವುದೇ ಆಣವ ಮಲ. ತಾನು ಮೂಲತಃ ಮಹೇಶ್ವರನಾಗಿದ್ದೂ ಪ್ರಾಕೃತ ವಾದ ದೇಶ ಕಾಲ ಪರಿಸ್ಥಿತಿಗಳ ಸೆರೆಯಲ್ಲಿ ಸಿಕ್ಕಿಕೊಂಡು ತಾನು ಮಾಯಾ ಧೀನವೆಂಬ ಅಲ್ಪತ್ವದ ಅಜ್ಞಾನವೇ ಮಾಯಾಮಲ. ನಾನೇ ಮಾಡಿ ದವನೆಂಬ ಮಾಡುವವನೆಂಬ ಅಹಂಕರ್ತೃತ್ವಾಭಿಮಾನವೂ ನಾನೇನೂ ಮಾಡಲಾರದವನೆಂಬುವ ಕಿಂಚಿತ್ಕರ್ತೃತ್ವಭಾವವೂ ಜೀವಿಯ ಕಾರ್ಮಿಕ ಮಲ. ಆತ್ಮಕ್ಕೆ ಅಂಟಿಕೊಂಡಿರುವ ಆಣವ ಮಲ, ಮನಸ್ಸಿಗೆ ಅಂಟಿ ಕೊಂಡಿರುವ ಮಾಯಾ ಮಲ, ದೇಹಕ್ಕೆ ಅಂಟಿಕೊಂಡಿರುವ ಕಾರ್ಮಿಕ ಮಲ—ಈ ಮಲತ್ರಯದಿಂದ ಮುಕ್ತನಾಗಿ ಭಗವತಿಯ ಈಶ್ವರಶಕ್ತಿ ಸಂಯುಕ್ತನಾಗಬೇಕಾದರೆ ಭಕ್ತಿಯೇ ಮುಖ್ಯ. ಆಕೆಯ ಇಚ್ಛಾ ಜ್ಞಾನ ಕ್ರಿಯಾ ಬಲಗಳೇ ಸ್ಥೂಲ ಸೂಕ್ಷ್ಮ ಕಾರಣ ಶರೀರಗಳ ಮಲತ್ರಯಗಳನ್ನು ಕಳೆಯುತ್ತದೆ. ಮಲತ್ರಯಗಳ ಬಂಧನದಿಂದ ಮುಕ್ತನಾದ ಭಕ್ತನೇ ಭವದ ಮತ್ತು ಭಯದ ಮೇರೆಯನ್ನು ಮೀರಿ ಸತ್ಯಸೀಮೆಯನ್ನು ಸೇರಬಲ್ಲ. ಸತ್ಯ ಸೀಮೆಯನ್ನು ಸೇರಲು ಭಾರತಮಾರ್ಗವೇ ಏಕೈಕವಾದ ಮಹಾಮಾರ್ಗ. ಭಾರತವೆಂದರೆ ಬೆಳಕಿನಲ್ಲಿ ಅನುರತವಾದದ್ದೆಂದರ್ಥ. ಬೆಳಕಿನ ಮಾರ್ಗವನ್ನು ಹಿಡಿದು ನಡೆಯುವ ಭಾರತೀಯನೇ ಸತ್ಯ ಸೀಮೆಯನ್ನು ಸೇರುವ ನಿಜವಾದ ಕನ್ನಡಿಗ. ಈ ದೃಷ್ಟಿಯಿಂದ ಅಂಬಿಕಾತನಯದತ್ತನು ಹಾಡಿದಂತೆ, ಭಾರತವೆಂದರು ಒಂದೇ ಕನ್ನಡವೆಂದರು ಒಂದೇ !

ಸರ್ವ ಮಾನವಕುಲದ ಕಲ್ಯಾಣಾಕಾಂಕ್ಷಿಯಾದ ಕನ್ನಡಿಗನು ಗುರಿ ಸೇರಲು ಜಗನ್ಮಾತೆಯ ಕೃಪೆಯ ಸಿರಿಯೇ ಸಾಧನೆ. ಆಕೆಯ ಕರುಣೆಯ ಅವತರಣದಿಂದ ತರುಣರು ಮುನ್ನಡೆಯುವಂತಾಗುತ್ತಾರೆ. ಸರ್ವೇಂದ್ರಿಯ ಗಳಲ್ಲಿಯೂ ಆಕೆಯ ಶಕ್ತಿಯನ್ನು ತುಂಬಿಕೊಂಡು ಸರ್ವಕಾರ್ಯಕಾರಣ ರೂಪಳಾದ ಆಕೆಯ ಬಲವನ್ನೇ ಇಂಬುಗೊಂಡು ದೃಢನಿಶ್ಚಿತ ಭಾವದಿಂದ ಕಾರ್ಯೋನ್ಮುಖನಾಗಿರುವ ಕನ್ನಡಿಗನು ಬೇಡಬೇಕಾದದ್ದು ಒಂದೇ ಒಂದು —ಆಕೆಯ ದಿವ್ಯಾಂತಃಕರಣದ ಪೂರ್ಣಕೃಪೆ ಆಕೆ ತನ್ನ ಸಂತಾನಕ್ಕೆ ನೀಡುವ ಮಾತೃಭಿಕ್ಷೆ ಅದೇ.

ಭಿಕ್ಷಾಂದೇಹಿ ಕೃಪಾವಲಂಬನಕರೀ
ಮಾತಾನ್ನಪೂರ್ಣೇಶ್ವರೀ

—ಶ್ರೀ ಶಂಕರ ಭಗವತ್ಪಾದರು



ವಾರಾಹಿ

*

೧೧

ತಾಯಿ ಕರ್ನಾಟಕಾಂಬೆ ವಾರಾಹಿ !
ನಮ್ಮ ಅಂತಸ್ಥ ಶತ್ರುಗಳ ನಿರ್ಮೂಲಗೊಳಿಸು.
ನೀರಸ ರಸಾತಳಕೆ ಕುಸಿದ ಕನ್ನಡತನವ
ನಿನ್ನ ರಸವದ್ಬಲವ ನಿಶಿತ ನಿಶ್ಚಿತ ಕೋರೆಯಲಿ
ನೆಗಹಿ ನಿಲಿಸೌ ತಾಯಿ ಮತ್ತೆ ಕೆಳಗುರುಳದಂತೆ !
ಅಮೃತಸತ್ವರು ನಾವು
ನಿನ್ನಭಯಬಲದಿಂದ !
ಓ ಶಕ್ತಿ ಕಲ್ಯಾಣಿ !
ನಿನ್ನ ಕಾರ್ಯದಲಿ ನಿರತರಾಗುವೆವು.
ನಮ್ಮ ತನು-ಮನ-ಪ್ರಾಣದಲಿ ಸಂಚರಿಸು
ಚಿಚ್ಛಕ್ತಿಯಾಗಿ !
ನಿರಾಶೆಯ ನೀರಿಗುರುಳಿದ ನೆಲವನೆತ್ತಿ ನಿಲಿಸಿದೆತಾಯಿ
ನಿನ್ನತುಳ ಬಲದಿಂದೆ !

*

೧೧

ಭೋಗೋಳವೆಲ್ಲವೂ ಆಸುರೀಶಕ್ತಿಯ ಕೈಗೆ ಸಿಕ್ಕಿ ಗೋಳಿಡುವ ಸಮಯದಲ್ಲಿ ಕಡಲೊಡಲಲ್ಲಿ ಮುಳುಗುತ್ತಿದ್ದ ಅದನ್ನು ಮತ್ತೆ ಮೇಲೆತ್ತಿ ನಿಲ್ಲಿಸಲು ಭಗವಚ್ಛಕ್ತಿಯು ಎತ್ತಿದ ಅವತಾರವೇ ವರಾಹಾವತಾರ. ಹಿರಣ್ಯಾಕ್ಷನು ನೀರಿಗೆಸೆದ ಹಿರಣ್ಯಗರ್ಭಳಾದ ಭೂದೇವಿಯನ್ನು ನೀರಿನಿಂದೆತ್ತಿ ಸಲಹಿದ ಪುಣ್ಯಮೂರ್ತಿ ವರಾಹಮೂರ್ತಿ. ದುಷ್ಟನಿಗ್ರಹ ಶಿಷ್ಟಪಾಲನಾತ್ಮಕ ನಾದ ಭಗವಂತನ ನಿಗ್ರಹಾನುಗ್ರಹವೆಂಬ ದ್ವಿವಿಧಾತ್ಮಕ ಶಕ್ತಿಯ ಸಂಕೇತ ಸ್ವರೂಪಿ ವಾರಾಹಿ. ಶಾಕ್ತ ಸಿದ್ಧಾಂತದ ಪ್ರಕಾರ ವಾರಾಹಿ ದಂಡಿನೀದೇವತೆ. ಈಶ್ವರಶಕ್ತಿಗೆ ಎದುರಾಂತ ಆಸುರೀ ಶಕ್ತಿಗಳೆಲ್ಲವನ್ನೂ ದಮನಗೈಯುವ, ಶಮನಗೈಯುವ ರಣಚಂಡಿಯಾಕೆ.

ದೇಶದೊಳಗೆ ನಮ್ಮ ಕಣ್ಣಿಗೆ ಕಾಣುವ ದೇಶದ್ರೋಹಿಗಳಾದ ಶತ್ರುಗಳಿರುವಂತೆ ನಮ್ಮ ದೇಹದೊಳಗೇ ಮರೆಯಾಗಿ ಕಾಣದ ಶತ್ರುಗಳೂ ಇದ್ದಾರೆ. ಆತ್ಮಶಕ್ತಿಯಿಂದ ದೇಹಾಂತರ್ಗತ ಸುಪ್ತ ಶತ್ರುಗಳನ್ನೂ ಗುಪ್ತ ಶತ್ರುಗಳನ್ನೂ ಗೆಲ್ಲುವಂತೆ ದೇಶಭಕ್ತಿಯಿಂದ ದೇಶಾಂತರ್ಗತ ದೇಶದ್ರೋಹಕ ಶತ್ರುಗಳ ತಂಡಗಳನ್ನೂ ಗೆಲ್ಲಬೇಕಾಗಿದೆ. ನಮ್ಮಲ್ಲಿಯ ಗೆಲ್ಲುವ ಶಕ್ತಿ ಮತ್ತು ಗೆಲಿಸುವ ಶಕ್ತಿ ಜಯೋನ್ಮುಖರಾಗಿ ನಿಲ್ಲುವಶಕ್ತಿ ಆ ವಾರಾಹಿಯದು.

ಸಾಯುವ, ನೋಯುವ, ಸೋಲುವ ಮನುಷ್ಯ ಜೀವವು ಭಗವಚ್ಛಕ್ತಿಯ ಅಭಯದಿಂದ ನಿರ್ಭಯವಾಗುತ್ತದೆ; ಈಶ್ವರ ಬಲದ ಬೆಂಬಲದಿಂದ ಅಮೃತಸತ್ತ್ವವಾಗುತ್ತದೆ.

ನಿರ್ವಿಣ್ಣಭಾವದಿಂದ ನಿರ್ವೀರ್ಯಭಾವದಿಂದ ನೀರಸ ರಸಾತಳಕ್ಕೆ ಕುಸಿದು ಬಿದ್ದಿರುವ ಕನ್ನಡತನವನ್ನು ವೀರ ವಾರಾಹಿ ತನ್ನ ರಸವದ್ಬಲದ ಕೋರೆಹಲ್ಲಿನ ನಿಶ್ಚಿತ ಶಕ್ತಿಯಮೇಲೆ ಎತ್ತಿ ನಿಲ್ಲಿಸಬೇಕಾಗಿದೆ. ಕನಡ್ನವನ್ನೂ, ಕನ್ನಡತನವನ್ನೂ ನೀರಸ ನೀರಧಿಗೆ ಎಸೆದ ದೈತ್ಯಶಕ್ತಿಯನ್ನು ತನ

ನಿಶಿತ ದಂತಗಳಿಂದ ಇರಿದು ಕೊಲ್ಲಬೇಕಾಗಿದೆ. ಅಸುರವಶವಾಗಿರುವ ಈ ನೆಲವನ್ನು ಗೆಲ್ಲಬೇಕಾಗಿದೆ.

ಈ ಈಶ್ವರ ಕಾರ್ಯ ಪ್ರವೃತ್ತರಾದವರೆಲ್ಲರ ಮನದಲ್ಲಿ ವೈಯ್ಯಲ್ಲಿ ಮನೆ ಮಾಡಿಕೊಂಡಿರುವ ವೀರಭಕ್ತಿ,ಆರ್ಯಶಕ್ತಿ ದಂಡಿನೀದೇವತೆಯಾದ ವಾರಾಹಿ ಯದು. ಕಲ್ಯಾಣಕಾರ್ಯಕ್ಕೆ ಕಂಕಣಕಟ್ಟ ನಿಂತಿರುವ ಕನ್ನಡಿಗರ ತನು—ಮನ ಪ್ರಾಣಗಳಲ್ಲಿ ಆ ಮಹಾಮಾತೆಯೇ ಚಿಚ್ಛಕ್ತಿಯಾಗಿ ಆವಿರ್ಭವಿಸು ತ್ತಾಳೆ.

ಆಗುವಂತೆ ಮಾಡುವ ಕ್ರಿಯಾಶಕ್ತಿಗೆ ಆದೀತು ಎಂಬ ಆಶೆಯೇ ಆದಿ ಮತ್ತು ಬುನಾದಿ. ಏಕೀಕರಣದ ಮಾತು ಆಶೆಯಾಗಿ ಉಳಿದಿದ್ದ ದಿನ ಗಳಲ್ಲಿ ಆ ಆಶೆಯನ್ನೂ ಆಶಯವನ್ನೂ ನೆಚ್ಚಿಕೊಂಡು ಕನ್ನಡಿಗರು ಅದಕ್ಕಾಗಿ ಸಾಧಿಸಿದರು. ಆದರೆ ಬರಬರುತ್ತಾ ಆ ಆಶೆಯೇ ಅಳಿಯುವಷ್ಟು ಬಿಕ್ಕಟ್ಟಿನ ಪ್ರಸಂಗಗಳು ಕನ್ನಡನಾಡಿಗೆ ಒದಗಿಬಂದುವು. ಆದೀತು ಎಂದು ಆಶಾ ವಾದಿಗಳಾಗಿದ್ದ ಜನದ ಮನಕ್ಕೆ ಆದೀತೆ?—ಎಂಬ ಪ್ರಶ್ನಚಿಹ್ನೆ ಕುಡು ಗೋಲಾಗಿ ಮುಂದೆ ನಿಂತಿತು. ಹೊರಗಿನ ಮಾರ್ಗಗಳೆಲ್ಲವೂ ದುರ್ಮಾರ್ಗಿಗಳ ವಶವಾಗಿ, ಒಳಗಿನ ಆಶೆಯೂ ಅಳಿದು ಕನ್ನಡತನ ಕಂಗೆಟ್ಟು ನಿಂತಿತು. ಇಡೀ ನಾಡು ನಿರಾಶೆಯ ನೀರಿಗುರುಳಿತು. ಅಂಥಾ ಸಮಯದಲ್ಲಿ—ವಿಷಮ ಸಮಯದಲ್ಲಿ ವೀರವಾರಾಹಿಯನ್ನು ನೆನೆದು ಆಕೆಯ ದಿವ್ಯ ಕೃಪೆಯನ್ನು ಪಡೆದು ಕನ್ನಡಿಗ ಮೇಲೆದ್ದು ನಿಂತು ತನ್ನ ಸಾಧನೆಯನ್ನು ಮುಂದುವರಿಸಿದ. ಆಪದ್ಬಾಂಧವಳಾಗಿ ವಿಪತ್ತಿನಿಂದ ಕನ್ನಡಕುಲವನ್ನೂ, ಕನ್ನಡ ನೆಲವನ್ನೂ ಕುಸಿದುಬೀಳದಂತೆ ಹಿಡಿದೆತ್ತಿ ನಿಲ್ಲಿಸಿದ ಆಕೆಯ ಅನುಗ್ರಹ ಶಕ್ತಿಗೆ ಶರಣು ಶರಣಾರ್ಥಿ!

೧. **ನೀರಸ ರಸಾತಳಕೆ ಕುಸಿದ ಕನ್ನಡತನವ**
ನಿನ್ನರಸವದ್ಬಲದ ನಿಶಿತನಿಶ್ಚಿತ ಕೋರೆಯಲಿ
ನೆಗಹಿ ನಿಲಿಸೌತಾಯಿ ಮತ್ತೆ ಕೆಳಗುರಳದಂತೆ!

೨. **ನಿರಾಶೆಯ ನೀರಿಗುರುಳಿದ ನೆಲವನೆತ್ತಿ ನಿಲಿಸಿದೆ ತಾಯಿ**
ನಿನ್ನ ತುಳ ಬಲದಿಂದೆ!

—ಈ ಮಾತುಗಳು ಸುಂದರಕಾವ್ಯವಾಣಿ.



අඩස

೧೨

ತಾಯಿ ಅದಿತಿ ! ಕನ್ನಡದೇವಮಾತೆ !
ಭಾಗ್ಯನಿಧಿ ಭಗವತಿಯೆ ಏಳು ಎದ್ದೇಳು !
ನಿನ್ನ ಮಂದಿರದ ಮಹಾದ್ವಾರ ಮುಖದಲ್ಲಿ
ಬದ್ಧಾಂಜಲಿಗಳಾಗಿ ಶ್ರದ್ಧೆಯಲಿ ನಿಂತಿರುವ
ಭಕ್ತರಿಗೆ ನಿನ್ನಾಣತಿಯ ಹೇಳು—
ಹೇಳುತಾಯಿ !
ತಮ್ಮ ತನುಮನ ಪ್ರಾಣಗಳ
ನಿನ್ನಡಿಗೆ ಮುಡುಪಿಟ್ಟ ನಿನ್ನ ಭಕ್ತರ ಹರಕೆ
ಕೇಳು ತಾಯಿ !
ಸಕಲ ಕಾರ್ಯ ಕಾರಣಳೆ !
ನಿನ್ನ ಕಾರ್ಯಕ್ಕೆ ಇಂದೆ ಕಂಕಣಕಟ್ಟು
ನಿನ್ನ ಪ್ರಸಾದದಿಂಬರಲಿ ಕನ್ನಡ ಕುಲಕೆ
ಹೊಸಹುಟ್ಟು !

*

೧೨

ದಿವ್ಯಶಕ್ತಿಗಳ ಮತ್ತು ದಿವ್ಯವ್ಯಕ್ತಿಗಳ ಮಾತೃಮೂರ್ತಿಯಾದ ಅದಿತಿ—ಆಕೆ ದೇವಮಾತೆ. ಕನ್ನಡನಾಡನ್ನು ಒಂದುಮಾಡಬೇಕು-ಕನ್ನಡನಾಡು ಒಂದಾಗಿ ಸಕಲ ಮಾನವಕಲ್ಯಾಣಕ್ಕೆ ಕಂಕಣಕಟ್ಟಿ ನಿಂತಿರುವ ಭಾರತಕ್ಕೆ ನೆರವಾಗಬೇಕು-ವಿಶ್ವದ ಉದ್ಧಾರಕ್ಕಾಗಿ ಭಾರತವೂ, ಭಾರತಕ್ಕಾಗಿ ಕನ್ನಡವೂ ಬಾಳಬೇಕು—'ಜಗದೇಳಿಗೆಯಾಗುವದಿದೇ ಕರ್ನಾಟಕದಿಂದೇ' ಎಂಬ ಕಾವ್ಯವಾಣಿ ನಿಜವೆನಿಸಬೇಕು—'ಕನ್ನಡಬಲ್ಲವನೇ' ಆರ್ಯನಾಗಿ ಅನಾರ್ಯನವಶವಾಗದಂತೆ ಆರ್ಯಾವರ್ತವನ್ನು'ಭಾರತ'ವಾಗಿ ಬೆಳಗಿಸಬೇಕು —ಭಾರತದ ಶ್ರೀಪ್ರಕಾಶದಲ್ಲಿ ವಿಶ್ವವೆಲ್ಲವೂ ಬಾಳುವಂತೆ ಮಾಡಬೇಕು—ಎಂದು ಸಾಧಿಸುತ್ತಿರುವ ಕನ್ನಡ ವ್ಯಕ್ತಿಗಳೆಲ್ಲರೂ ಅದಿತಿಯ ಗರ್ಭದಿಂದೊಗೆದ ಆದಿತ್ಯ ಸಂತತಿ. ಅಹಂಕಾರ ಮಮಕಾರಗಳ ತಮೋವೃತ ಬುದ್ಧಿಭಾವಗಳವರೆಲ್ಲರೂ ದೈತ್ಯಸಂತಾನ. ಕನ್ನಡದ ಏಕೀಕರಣದ ಪ್ರಶ್ನೆ ಕುಟಿಲ ರಾಜಕಾರಣಿಗಳ ಜಟಿಲ ಪ್ರಶ್ನೆಯಾಗಿರದೆ ದೇವಕಾರ್ಯವೆಂದು ಬಗೆಯುವ ಕನ್ನಡ ಸಾಧಕನಿಗೆ ದೇವಮಾತೆಯಾದ ಅದಿತಿಯ ಆಶೀರ್ವಾದ ಅವಶ್ಯ.

ಪ್ರಬುದ್ಧವಾದ ಬುದ್ಧಿ ಮತ್ತು ಭೂಮವಾದ ಭಾವನೆಗಳಿಂದ ಕೂಡಿದ ಕನ್ನಡಿಗರು ಮಾತೃಮಂದಿರದ ಮಹಾದ್ವಾರದೆದುರು ಅಂಜಲಿಬದ್ಧರಾಗಿ ನಿಂತು ಆಕೆಯ ಸಂದೇಶಕ್ಕಾಗಿ ಕಾದುನಿಂತಿದ್ದಾರೆ. ತ್ರಿಪುರಸುಂದರಿಯಾದ ಆಕೆಯ ಶ್ರೀಪಾದಕ್ಕೆ ತಮ್ಮ ತ್ರಿಕರಣಗಳನ್ನೇ ಮುಡುಪಿಟ್ಟು ತ್ರಿಕರಣಶುದ್ಧರಾಗಿ ಆಕೆಯ ಕಾರ್ಯಸಾಧನೆಗೆ ಸಿದ್ಧರಾದ ಕನ್ನಡಕುಲಕ್ಕೆ ಆಕೆಯ ನಿರೂಪ ಮತ್ತು ನಿರ್ದೇಶಬೇಕಾಗಿದೆ—ಕನ್ನಡಿಗರ ಹರಕೆಯನ್ನು ಕೇಳಿ ಹರ್ಷಚಿತ್ತಳಾಗಿ ಆ ದೇವಮಾತೆ ಹರಸಬೇಕಾಗಿದೆ. ಏನು ಮಾಡಬೇಕೆಂಬ ಚಿಂತೆಯಲ್ಲಿ ಏನೂ ಮಾಡಲಾರೆನೆಂಬ ಭ್ರಾಂತಿಯಲ್ಲಿ ಕೈಕಟ್ಟಿಕೊಂಡು ಕುಳಿತಿದ್ದ ಕನ್ನಡಿಗ ಇಂದು ಎದ್ದುನಿಂತು ಕಾರ್ಯಸಾಧನೆಯ ಧೀರಮತಿಯಾಗಿ ಮುಂದೆ ಬಂದು ಕಂಕಣಕಟ್ಟೆಂದು ಕೈಕೊಟ್ಟಿದ್ದಾನೆ. ಸಕಲಕಾರ್ಯಕ್ಕೆ ಕಾರಣರೂಪ

ಳಾದ ಆ ಮಹಾಮಾತೆಯ ಪ್ರಸಾದದಿಂದ ಕನ್ನಡಕುಲಕ್ಕೆ ಹೊಸಹುಟ್ಟು ಬಂದು ಕನ್ನಡನೆಲದ ಭವ್ಯತೆಗೆ ದಿವ್ಯತೆಯು ಮೇಳವಿಸಬೇಕಾಗಿದೆ.

ನಿನ್ನ ಕಾರ್ಯಕೆ ಇಂದೆ ಕಂಕಣಕಟ್ಟು
ನಿನ್ನ ಪ್ರಸಾದದಿಂ ಬರಲಿ ಕನ್ನಡ ಕುಲಕೆ ಹೊಸಹುಟ್ಟು !

—ಈ ಭಾವ ಅನುಭಾವ ಕಾವ್ಯದ ಹಿರಿಯಭಾವ.



ಕೌಮಾರಿ

ಓ ತಾಯಿ ಭಗವತಿಯೆ ! ಕನ್ನಡ ಕೌಮಾರಿ !
ನಿನ್ನ ಅಮೃತಪುತ್ರರು ನಾವು
ನಿತ್ಯ ನಿನ್ನನೆ ನೋಂತು ನಿತ್ಯರಾಗುವೆವು !
ನಿನ್ನ ನೆಲ ನೀರಿನಲಿ ಸುಳಿವ ಗಾಳಿಯಲಿ
ಬಿಸಿಲು—ಬೆಳದಿಂಗಳಲಿ ಮೇಣ್ ಬಯಲಿನಲ್ಲಿ
ತುಂಬಿರುವ ನಿನ್ನಮರ ಪ್ರೇಮಮಾಧುರ್ಯದಿಂ
ಮಧುರವಾಗಲಿ ತಾಯಿ ನಮ್ಮ ಬಾಳ್ !
ನಿನ್ನ ನಂಬಿದ ನಮ್ಮ ಮೈಮನವನ್ನು
ತುಂಬಿ ಬಾ ಓ ತಾಯಿ !
ನಿನ್ನ ಏಕತೆಯ ಸಾಧಿಸಿದೆವಮ್ಮ
ನಿನ್ನ ಸಮತೆಯ ಸುಖವ ಸವಿವೆವಮ್ಮ !

ಜಗತ್ತಿನ ಕ್ಷಯವೃದ್ಧಿಗಳಿಗೆ ಕಾರಣವಾದ ಈಶ್ವರಶಕ್ತಿ ತಾನು ಸ್ವತಃ ಕ್ಷಯವೃದ್ಧಿ ವಿನಿರ್ಮುಕ್ತವಾದದ್ದು; ಜರಾಮರಣ ರಹಿತವಾದದ್ದು. ಅಜರಾಮರವಾದ ಆ ಮಹಾಶಕ್ತಿ ನಿತ್ಯಯೌವನಶೋಭಿಯಾದ ನವನವೋನ್ಮೇಷಶಾಲಿನಿ. ಲೀಲಾವಿನೋದಿಯಾಗಿ ಸೃಷ್ಟಿ, ಸ್ಥಿತಿ, ಲಯ, ತಿರೋಧಾನ ಅನುಗ್ರಹಗಳೆಂಬ ಪಂಚಕೃತ್ಯ ಪರಾಯಣಳಾದ ಭಗವಚ್ಛಕ್ತಿಯೇ ಕೌಮಾರಿ. ದೇವಸೇನಾನಿಯಾಗಿ ತಾರಕವಧೆಗೆ ಹೊರಟುನಿಂತ ಕುಮಾರಸ್ವಾಮಿಯ ಸ್ಕಾಂದಶಕ್ತಿಯನ್ನೇ ಕೌಮಾರಿಯೆಂದು ಕರೆಯುವ ವಾಡಿಕೆ. ಕುಮಾರ ಶಬ್ದಕ್ಕೆ ನಿಜವಾದ ಅರ್ಥ ಕುತ್ಸಿತವನ್ನು ಅಳಿಯುವವನು ಎಂದು. ಕೆಟ್ಟದ್ದನ್ನು ಅಳಿದು ಕೆಟ್ಟದ್ದನ್ನು ತುಳಿದು ಉತ್ತಮವಾದದ್ದನ್ನು ಬೆಳೆಸುವ ಬಾಧ್ಯತೆ ವಹಿಸಿರುವ ಶಕ್ತಿಯೇ ಕೌಮಾರಿ.

ಕನ್ನಡನಾಡಿನ ನೆಲದಲ್ಲಿ, ನೀರಿನಲ್ಲಿ, ಬೀಸುವ ಗಾಳಿಯಲ್ಲಿ, ಬಿಸಿಲಿನಲ್ಲಿ, ಬೆಳದಿಂಗಳಿನಲ್ಲಿ ಆ ಮಾತೃಮೂರ್ತಿಯ ಪ್ರೇಮಮಾಧುರ್ಯವೇ ತುಂಬಿ ತುಳುಕುತ್ತಿದೆ. ಕನ್ನಡಿಗರೆಲ್ಲರೂ ಆ ದಿವ್ಯಶಕ್ತಿಯ ಅಮೃತಪುತ್ರರು. ವಿಶ್ವದ ಆದ್ಯಂತವಾಗಿ ವ್ಯಾಪಿಸಿಕೊಂಡಿರುವ ಆಕೆಯ ಚಿನ್ಮಯರೂಪವನ್ನು ಕಾಣುವ ಚಿದ್ದೃಷ್ಟಿ ಪಡೆದವರೆಲ್ಲರೂ ಆಕೆಯ ಅಮೃತಪುತ್ರರೇ. ದೇಹೋಹಂ ಭಾವದಿಂದ ಜರಾಮರಣಬಾಧೆಗೆ ಸಿಕ್ಕಿ ನರಳುವ ಮಾನವ ದೇಹೋಹಂ ಭಾವದಿಂದ ಮುಕ್ತನಾಗಿ 'ಸಚ್ಚಿದಾನಂದಾತ್ಮ ಶಿವೋಹಂ' ಎಂಬ ಪೂರ್ಣಭಾವಯುಕ್ತನಾಗಲೆಂದೇ ಉಪನಿಷದ್ವಾಣಿ 'ಶೃಣ್ವಂತು ವಿಶ್ವೇ ಅಮೃತಸ್ಯ ಪುತ್ರಾಃ' ಎಂದು ಸಂಬೋಧಿಸುತ್ತದೆ.

ನೀರಸವೆನಿಸಿದ ಭುವಿಯಬಾಳು ಸ್ವಾರಸ್ಯವಾಗಿ ರಸಮಯವೆನಿಸಬೇಕೆಂದರೆ ರಸರೂಪಿಣಿಯಾದ ಮಹಾಮಾತೆಯ ಮಧುರಕೃಪೆಯಾಗಬೇಕು. ಅನಿತ್ಯವಾದದ್ದೇ ನಿತ್ಯವೆಂದು, ಅಸತ್ಯವಾದದ್ದೇ ಸತ್ಯವೆಂದು ಪರಿಭ್ರಮಿತನಾಗಿರುವ ಮಾನವ ನಿತ್ಯಾನಿತ್ಯ ವಿವೇಕ ವಿಜ್ಞಾನಿಯಾಗಿ ನಿತ್ಯತ್ವವನ್ನು

ಪಡೆಯಬೇಕಾದರೆ ನಿತ್ಯರೂಪಿಣಿಯೂ ಸತ್ಯಸ್ವರೂಪಿಣಿಯೂ ಆದಶಕ್ತಿಯನ್ನು ನಿತ್ಯವೂ ಸೇವಿಸಬೇಕು.

ಹಾಗೆ ಆಕೆಯನ್ನು ಅನವರತವೂ ಸೇವಿಸುವ ಶ್ರೀವಿದ್ಯಾರತರಾದವರ ಮೈಮನಗಳನ್ನು ಆಕೆಯ ಕೃಪಾಮಾಧುರ್ಯ ತುಂಬಿಕೊಳ್ಳುತ್ತದೆ.

ಭವಜೀವನವು ಶಾಂಭವಜೀವನವಾಗಿ ಪರಿಣಾಮಗೊಳ್ಳುವುದು ಈಶ್ವರಶಕ್ತಿಯ ಪೂರ್ಣಾವತರಣದಿಂದಲೇ ! ಇದನ್ನೇ ಶಕ್ತಿಪಾತಾದ್ಯನಂತ ನಾಮಗಳಿಂದ ಕರೆಯುತ್ತಾರೆ.

ಈ ರೀತಿ ಶಕ್ತಿವಿಶಿಷ್ಟನಾದ ಕನ್ನಡಸಾಧಕ ಕನ್ನಡನಾಡಿನ ಏಕತೆಯನ್ನು ಸಾಧಿಸಿ ಸಿದ್ಧನಾಗಬೇಕು. ವಿಷಮ ವಾತಾವರಣಕ್ಕೆ ಸಿಲುಕಿ ತನ್ನ ಸಮತೆಯನ್ನು ನೀಗಿಕೊಂಡಿರುವ ನಾಡೊಡತಿ ಮರಳಿ ತನ್ನ ಸಮತೆಯನ್ನು ಸಾಧಿಸಿಕೊಂಡು ತನ್ನ ಮಕ್ಕಳಿಗೆ ಮಮತೆಯ ಹಾಲುಣಿಸಬೇಕು.

ಆಕೆಯ ಮಮತೆಯ ಮಾಧುರ್ಯ ಸವಿಯಲು ಮೊದಲು ಆಕೆಯ ಸಮತೆಯನ್ನು ಸಾಧಿಸಬೇಕು.

ಮಧುವಾತಾ ಋತಾಯತೇ ಮಧುಕ್ಷರಂತಿ ಸಿಂಧವಃ ।
ಮಾಧ್ವೀರ್ನಸ್ಸಂತೋಷಧೀಃ । ಮಧುನಕ್ತಮುತೋಷಸೋ
ಮಧುಮತ್ಪಾರ್ಥಿವಂ ರಜಃ । ಮಧುದ್ಯಾರಸ್ತುನಃ ಪಿತಾ ।
ಮಧುಮಾನ್ನೋ ವನಸ್ಪತಿರ್ಮಧುಮಾಂ ಅಸ್ತುಸೂರ್ಯಃ ।
ಮಾಧ್ವೀರ್ಗಾವೋ ಭವಂತಿನಃ ॥

—ಋಗ್ವೇದ



ಕುಂಡಲಿನೀ

೧೪

ತಾಯಿ ಕುಲ ಕುಂಡಲಿನೀ
　　ಕೌಳಿನೀ ಕುಲಯೋಗಿನೀ !
ಕನ್ನಡ ಯೋಗಶಕ್ತಿ !
ನಮ್ಮ ಮೂಲಾಧಾರದಿಂ ಸಹಸ್ರಾರದವರೆಗು
ನಿನ್ನ ಅಜಸ್ರ ಸಂಚಾರವಿದೆ ತಾಯಿ !
ಮೈಸೂರ ಮೂಲಾಧಾರದಿಂದ ನೀನೆ ಜಾಗೃತಳಾಗಿ
ಊರ್ಧ್ವಗಾಮಿನಿಯಾದೆ !
ನಿನ್ನ ಜಾಗೃತಿಯಿಂದ ನಾವೆಲ್ಲ ವಿಶ್ವವಿಜಯಿಗಳು
ಹುಟ್ಟಾಗೆಲಬಲ್ಲ ಸೋಲೆಂಬುದರಿಯದಿಹ
　　ಶಾಕ್ತರಾವು !
ಯೋಗಸ್ಥರಾಗಿ ನಿನ್ನ ಮಹಿಮೆಯನೆ ಹಾಡುವೆವು
ನಿನಗಾಗಿ ಎಲ್ಲವನು ತ್ಯಾಗಗೈಯುವೆವು
ಭೋಗಿಗಳಾಗಿ ನಿನ್ನ ಮಾತೃಕೃಪೆಯನ್ನುಪಭೋಗಿಪೆವು !
ಕ್ಷುದ್ರಭಾವದಿಂದ ಮುಕ್ತರಾಗಿ
ನಿನ್ನ ಮಹದ್ಭಾವದಿಂದ ಯುಕ್ತರಾಗುವೆವು ತಾಯಿ !

ಕನ್ನಡನಾಡಿನ ರಾಜಕಾರಣ ಕೇವಲ ಭೌತಿಕದೃಷ್ಟಿಯ ರಾಜಕಾರಣ ವಲ್ಲ ಅದು ಶ್ರೀ ರಾಜರಾಜೇಶ್ವರಿಯ ಕಾರ್ಯ ; ಈ ಕಾರ್ಯಕ್ಕೆ ಕಾರ್ಯಕಾರಣ ರೂಪಳು ಆ ಮಹಾಮಾತೆಯೇ ಎಂಬ ಮಾತು ಈ ಮಹಿಮ್ನಃ ಸ್ತೋತ್ರ ಷೋಡಶಿಯಲ್ಲಿ ಮೇಲಿಂದಮೇಲೆ ಉಕ್ತವಾಗಿದೆ. ಈ ದೇವಕಾರ್ಯವನ್ನು ದಿವ್ಯಯೋಗವೆಂದು ತಿಳಿದು ಸಾಧಿಸುತ್ತಿರುವ, ಆ ಸಾಧನೆಯಲ್ಲಿಯೇ ಸ್ವಯಂ ನಿಯೋಜಿತರಾದ ನಿಯೋಗಿಗಳ ಮತ್ತು ಯೋಗಿಗಳ ಸಿದ್ಧಿಯ ರೂಪಾಗಿ ಕನ್ನಡನಾಡು ಒಂದಾಯಿತು.

ಮೂಲಾಧಾರದಿಂದ ಸಹಸ್ರಾರದವರೆಗೂ ಆರೋಹಣಾವರೋಹಣ ಕ್ರಮಗಳಲ್ಲಿ ಸಂಚರಿಸುವ ಕುಂಡಲಿನೀಶಕ್ತಿ ಅದು ಜೀವಿಯ ದೇವಶಕ್ತಿ. ಅಂತರ್ಮುಖಿಯಾಗಿ ಸುಳಿಸುತ್ತಿಕೊಂಡು ಮಲಗಿರುವ ಕುಂಡಲಿನೀಶಕ್ತಿ ಎಚ್ಚತ್ತು ಎದ್ದು ಊರ್ಧ್ವಮುಖಿಯಾಗಿ ಮೂಲಾಧಾರದಿಂದ ಸಹಸ್ರಾರದವರೆಗಿರುವ ಷಟ್ಚಕ್ರಗಳನ್ನು ಭೇದಿಸಿಕೊಂಡು ಷಟ್‌ಸ್ಥಲಗಳನ್ನು ಮೆಟ್ಟಿ ಮುಂದುವರಿದು ಸಹಸ್ರದಳ ಪದ್ಮಪೀಠಸ್ಥನಾದ ಪರಮಶಿವನೊಡನೆ ಸಂಗಮಿಸುತ್ತದೆ. ಮೂಲಾಧಾರಕ್ಕೆ ಕುಲಪದ್ಮವೆಂದು ಹೆಸರು. ನಕುಲನೂ ನಕುಲೀಶನೂ ಆದ ಪರಶಿವನ ಆವಾಸಸ್ಥಾನವಾದ ಸಹಸ್ರಾರಕ್ಕೆ ಅಕುಲಪದ್ಮವೆಂದು ಹೆಸರು. ಜಾತನಾದ ಜೀವಿಯನ್ನೂ ಸದ್ಯೋಜಾತನಾದ ಶಿವನನ್ನೂ ಬೆಸೆಯುವ ಶಕ್ತಿಯೇ ಕೌಳಿನಿಯೂ ಕುಲಯೋಗಿನಿಯೂ ಆದ ಕುಂಡಲಿನೀಶಕ್ತಿ.

ಮೂಲಾಧಾರ ಚಕ್ರಕ್ಕೇ ಆಧಾರಚಕ್ರವೆಂದೂ, ಪಾರ್ಥಿವಚಕ್ರವೆಂದೂ ಪರ್ಯಾಯನಾಮಗಳಿವೆ. ಕನ್ನಡನಾಡಿನ ಯೋಗಶಕ್ತಿಯಾದ ಕುಂಡಲಿನೀ ಮನೆಮಾಡಿಕೊಂಡಿರುವುದು ಮೈಸೂರಿನ ಮೂಲಾಧಾರ ಚಕ್ರದಲ್ಲಿಯೇ. ಕನ್ನಡಏಕೀಕರಣಕ್ಕೆ ಮೈಸೂರಿನ ಶಕ್ತಿಯೇ ಮೂಲವಾದ ಆಧಾರ. ತಾನು ಬೇರೆಯೆಂಬ ಪೃಥಕ್‌ಭಾವನೆಯನ್ನು ಬಿಟ್ಟು ಕನ್ನಡನಾಡೆಲ್ಲ ತನ್ನದು ತನ್ನದೆಲ್ಲವೂ ಕನ್ನಡದ್ದು ಎಂಬ ಅಪೃಥಕ್‌ಭಾವನೆಯ ಐಕ್ಯಸ್ಥಿತಿಗೆ ಬಂದು

ಕನ್ನಡನಾಡನ್ನು ಸರ್ವೈಕ್ಯಸ್ಥಿತಿಗೆ ತಂದು ಒಂದಾಗಿ ನಿಂತದ್ದು ಮೈಸೂರಿನಲ್ಲಿ ಎಚ್ಚತ್ತುನಿಂತ ಕನ್ನಡದ ಕೆಚ್ಚೇ.

ಜಾಗ್ರತವಾದ ಕುಂಡಲಿನೀಶಕ್ತಿ ವ್ಯಕ್ತಿಯನ್ನು ಸಿದ್ಧಸ್ಥಿತಿಗೆ ಕೊಂಡೊಯ್ಯುವಂತೆ ಕನ್ನಡನಾಡಿನಲ್ಲಿ ಎಚ್ಚತ್ತ ಕೆಚ್ಚು ಕನ್ನಡನಾಡಿನ ಏಕೀಕರಣಕ್ಕೆ ಕಲ್ಯಾಣಕಾರಣವಾಯಿತು. ವ್ಯಷ್ಟಿ ಸಮಷ್ಟಿಗಳಲ್ಲಿ ತುಂಬಿಕೊಂಡಿರುವ ಚಿಚ್ಛಕ್ತಿಯನ್ನೇ ಆಧಾರಗೊಂಡ ಕನ್ನಡಿಗರು ಆಕೆಯ ದಿವ್ಯಾನುಗ್ರಹದಿಂದ ವಿಶ್ವವಿಜಯಿಗಳು; ಗೆಲುವುದಕ್ಕಾಗಿಯೇ ಹುಟ್ಟಿದ ಹುಟ್ಟಾಗೆಲಬಲ್ಲ, ಸೋಲಿಲ್ಲದ ಶಾಕ್ತರು ಮತ್ತು ಶಕ್ತರು.

> “ ಸೋಲೆಂಬುದೇ ಇಲ್ಲ ಗೆಲುವನೊಂದೇ ಬಲ್ಲ ನಮ್ಮನಲ್ಲ
> ಸೋಲುವವನೆಂದಿಗೂ ಶರಣನಲ್ಲ ” *

ಮಹಾಮಾತೆಯ ಕಾರ್ಯಕ್ಕಾಗಿ ಎಲ್ಲವನ್ನೂ ತ್ಯಾಗಮಾಡಿದ ತ್ಯಾಗಿಗಳಾಗಿ, ಆಕೆಯ ಹಾಡನ್ನೇ ಯೋಗಸ್ಥರಾಗಿ ಹಾಡುವ ಯೋಗಿಗಳಾಗಿ, ಆಕೆಯ ಕೃಪಾಪ್ರಸಾದದಿಂದ ತೃಪ್ತರಾಗುವ ಭೋಗಿಗಳಾಗಿ ಕನ್ನಡಿಗರು ಮುಕ್ತರಾಗಬೇಕು. ಮುಕ್ತಿಯೆಂದರೆ ಕ್ಷುದ್ರಭಾವದಿಂದ ಮುಕ್ತಿ.

ಕ್ಷುದ್ರಭಾವದಿಂದ ಮುಕ್ತರಾಗಿ, ಮಹದ್ಭಾವದಿಂದ ಯುಕ್ತರಾಗಿ ಶಕ್ತರಾಗಿ ಆ ಈಶ್ವರಶಕ್ತಿಯ ಭಕ್ತರಾಗಬೇಕು.

ವಿಭಕ್ತಭಾವನೆ ಅಳಿದು ಅವಿಭಕ್ತಭಾವನೆ ಅರಳುವುದೇ ಭಕ್ತಿ.

> ಪರಮಾತ್ಮನಿಯೋರಕ್ತೋ
> ವಿರಕ್ತೋ ಅಪರಮಾತ್ಮನಿ

—ಇದೇ ಪೂರ್ಣಯೋಗದ ಪ್ರಸಾದದೃಷ್ಟಿ.

---

* ಅಂಬಿಕಾತನಯದತ್ತ



ತ್ರಿಪುರಸುಂದರಿ

*

೧೫

ತಾಯಿ ಕರ್ನಾಟಕ ದೇವಿ !
ಶ್ರೀಮತ್ ಸಿಂಹಾಸನೇಶ್ವರೀ !
ತ್ರಿಪುರಸುಂದರೀ !
ಪಂಚದಶಾಕ್ಷರ ಮಂತ್ರಶರೀರೆ
ಜನ್ಮ ಜನ್ಮಗಳಲ್ಲಿ ಜನ್ಮಾಂತರಗಳಲಿ
ನಿನ್ನನೇ ನೆನೆಯುವೆವು ಕಾಪಾಡು ತಾಯಿ !
ನಿನ್ನ ಪಾದಪೀಠದ ಬಳಿ ಕುಳಿತು
ವ್ರತಬದ್ಧರಾಗಿಹೆವು ನಮ್ಮನಂಗೀಕರಿಸು ತಾಯಿ !
ಯಾವ ಆಶೆ – ಆಮಿಷಗಳೂ ನಮ್ಮನಲುಗಿಸವು !
ನಿನ್ನ ಏಕತೆಯ ನೆಲೆಸುವೊಡೆ ನಮ್ಮನುಳಿಸು
ಇಲ್ಲದಿರೆ ಸಾವಿನುಡಿ ತುಂಬಿ ಕಳಿಸಿಬಿಡು ತಾಯಿ !

ಕನ್ನಡ ನೆಲದ ಶ್ರೀಮತ್ ಸಿಂಹಾಸನೇಶ್ವರಿಯಾಗಿ ಕನ್ನಡಕುಲದ ಕುಲನಾಯಕಿಯಾಗಿ ಮೆರೆಯುವ ಮಹಾಮಾತೆ ಪಂಚದಶಾಕ್ಷರ ಮಂತ್ರ ಶರೀರೆಯಾದ ತ್ರಿಪುರಸುಂದರಿ. ಸ್ಥೂಲಸೂಕ್ಷ್ಮಕಾರಣ ಶರೀರತ್ರಯಗಳೇ ತ್ರಿಪುರಗಳು. ಈ ತ್ರಿಪುರಗಳಲ್ಲಿ, ಜಾಗ್ರತ್ ಸ್ವಪ್ನ ಸುಷುಪ್ತ್ಯಾತ್ಮಕ ಅವಸ್ಥಾತ್ರಯಗಳಲ್ಲಿ ಸರ್ವಾವಸ್ಥವಿವರ್ಜಿತೆಯಾದ ಈಶ್ವರಶಕ್ತಿ ನೆಲೆಗೊಂಡಿದೆ. ದೇಹವನ್ನು ಪುರವೆಂದೂ ದೇಹಾಂತರ್ಗತ ಆತ್ಮನನ್ನು ಪುರೀಶನೆಂದೂ ಶ್ರುತಿಗಳು ಲಾಕ್ಷಣಿಕವಾಗಿ ಕರೆದಿದ್ದಾವೆ. ತ್ರಿಪುರಗಳಲ್ಲಿ ಮನೆಮಾಡಿ ಕೊಂಡಿರುವ ತ್ರಿಪುರಾಸುರರನ್ನು ಸಂಹರಿಸಿ ತನ್ನ ತ್ರಿಪುರಗಳಲ್ಲಿ ತಾನೇ ನೆಲೆಸುವ ಈಶ್ವರನ ಆಧ್ಯಾತ್ಮಿಕ ಗಾಥೆಯನ್ನೇ ತ್ರಿಪುರಸಂಹಾರ ಲೀಲಾ ಪ್ರಸಂಗದ ಸನ್ನಿವೇಶ ಪುರಾಣಗಳಲ್ಲಿ ಸಾಂಕೇತಿಕವಾಗಿ ಪ್ರಕೀರ್ತಿತವಾಗಿದೆ. ಪುರೀಶನಾದ ಭಗವಂತನ ಭಗವಚ್ಛಕ್ತಿಯೇ ತ್ರಿಪುರಸುಂದರಿ. ಸತ್ಯಂ ಶಿವಂ ಸುಂದರಂ ಎಂದು ಸ್ತುತಿಸಲ್ಪಟ್ಟಿರುವ ಈಶ್ವರನು ಅಸತ್ಯವನ್ನೂ, ಅಶುಭ ವನ್ನೂ, ಅಸೌಂದರ್ಯವನ್ನೂ—ಇವು ಮೂರೂ ನೆಲೆಗೊಂಡಿರುವ ತ್ರಿಪುರ ಗಳನ್ನೂ—ಸುಟ್ಟುರುಹುವ ವಿರೂಪಾಕ್ಷ! ಆಸುರಿಕವಾದ ಅಂದಗೇಡಿತನ ವನ್ನು ಅಳಿದು ಸರ್ವ ಸುರಸೇವ್ಯವಾದ ತನ್ನ ಪ್ರಭುಶಕ್ತಿಯನ್ನು ಪ್ರತಿಷ್ಠಾ ಪಿಸುವ ಪರಮೇಶ್ವರನಾದ ರಾಜರಾಜೇಶ್ವರನ ರಾಜರಾಜೇಶ್ವರಿಯಾಕೆ! ಮೃಣ್ಮಯವಾದ ಜಗದ್ಯಂತ್ರವನ್ನು ನಡೆಯಿಸುವ ಚಿನ್ಮಯ ಮಂತ್ರಮೂರ್ತಿ ಯಾಕೆ! ಅಶುದ್ಧವಾದದ್ದೂ ಅಬದ್ಧವಾದದ್ದೂ ಅಪ್ರಬುದ್ಧವಾದದ್ದೂ ಆಕೆಯ ಶ್ರೀಮತಿಗೆ ಒಪ್ಪಿತವಲ್ಲದ್ದು. ಅಂದವಿಲ್ಲದ್ದನ್ನೂ, ಆನಂದವಿಲ್ಲದ್ದನ್ನೂ ಆಕೆ ಸಹಿಸಲಾರಳು; ತನ್ನದು ಎಂದು ವಹಿಸಲಾರಳು. ಆಕೆ ಆಗಮಿಸಿ ಆಸೀನಳಾಗುವುದು ಶ್ರೀಮತ್ ಸಿಂಹಾಸನದಲ್ಲಿ ಮಾತ್ರ! ಕಾಮೇಶ್ವರಿಯಾದ ಆಕೆಯ ಶ್ರೀಮತ್ ಸಿಂಹಾಸನವು ಶಿವಕಾಮೇಶ್ವರಾಂಕವೇ!—ಏಕೆಂದರೆ ಆಕೆ

'ಮಹಾಕಾಮೇಶ ಮಹಿಷಿ' 'ಕಾಮೇಶಬದ್ಧ ಮಾಂಗಲ್ಯಸೂತ್ರ ಶೋಭಿತ ಕಂಧರೆ.'

ತಂತ್ರಾಂಗಿಯೂ, ಮಂತ್ರಮೂರ್ತಿಯೂ, ಸರ್ವ ಯಂತ್ರಾರೂಢಳೂ ಆದ ಆಕೆಯ ಪಾದಪೀಠದ ಬಳಿಯಲ್ಲಿ ವ್ರತಬದ್ಧನಾದ ಕನ್ನಡ ಸಾಧಕನು ಕುಳಿತು ಆಕೆಯನ್ನು ಬೇಡುತ್ತಾನೆ. ಯಾವ ಬಹಿರಂತರ ವ್ಯಾಮೋಹಗಳಿಗೂ ಬಲಿಯಾಗದೆ, ಯಾವ ಆಶೆ ಆಮಿಷಗಳಿಗೂ ಮನಸೋಲದೆ ನಿಶ್ಚಲನಾಗಿ, ನಿರ್ವಿಕಾರಚಿತ್ತನಾಗಿ ನೆನೆಯುವ ಕನ್ನಡಸಾಧಕನನ್ನು ರಾಜಕಾರಣದ ವಿಜಯಕ್ಕಾಗಿ ರಾಜರಾಜೇಶ್ವರಿಯು ಹರಸಬೇಕು ; ಹರಸುತ್ತಾಳೆ ! ಏಕೆಂದರೆ

'ನಿನ್ನ ಏಕತೆಯು ನೆಲೆಸುವೊಡೆ ನಮ್ಮನುಳಿಸು
ಇಲ್ಲದಿರೆ ಸಾವಿನುಡಿ ತುಂಬಿ ಕಳಿಸಿಬಿಡು ತಾಯಿ !'

—ಎಂಬ ವೀರವ್ರತಸ್ಥನಾದ ಕನ್ನಡಿಗನಿಗೆ ಆಕೆ ಒಲಿಯಲೇಬೇಕು. 'ಏಕೇನ ಜನ್ಮನಾಮುಕ್ತಿರ್ನಿರ್ವಾಣಾಂತು ಮಹೇಶ್ವರೀ' ಎಂಬ ಆಗಮೋಕ್ತಿ ಪ್ರಸಿದ್ಧವಿದೆ. ಏಕೀಕೃತ ಕರ್ನಾಟಕದ ಸಾಧನೆಗಾಗಿಯೇ ಬದುಕಿರುವ, ಕರ್ನಾಟಕದ ಕಲ್ಯಾಣವೇ ತನ್ನ ಬದುಕಿನ ಧ್ಯೇಯವೆಂದು ಬಗೆಯುವ ಕನ್ನಡವೀರನಿಗೆ ವೀರಾರಾಧ್ಯಳೂ ವೀರಮಾತೆಯೂ ಆದ ಆ ಮಹಾವೀರೆ ಒಲಿಯದಿರುವುದೆಂತು ?

ಕನ್ನಡದ ನೆಲವನ್ನು ಶ್ರೀಚಕ್ರವೆಂಬೆ
ಕನ್ನಡದ ಶಬ್ದವನು ವರಮಂತ್ರವೆಂಬೆ
ಕನ್ನಡಕೆ ಸಲುವ ಕಾಯಕವ ತವಪೂಜೆಯೆಂಬೆ
ಇಂತೀ ಸಾಧನತ್ರಯಕೆ ಸಿದ್ಧಿಯನೀಯುವಳು
ನೋಡಾ ಭುವನೇಶ್ವರಿ

—ಮಾತೃಕೃಪೆ



ಸಾವಿತ್ರಿ

*

೧೬

ಓ ತಾಯಿ ಸಾವಿತ್ರಿ !
        ಕನ್ನಡ ಮಹಾಮಾತೆ !
ಮುಕ್ತಾಯವಾಯ್ತಮ್ಮ ವಿಚ್ಛೇದನಾಟಕವು
ನಿನ್ನ ಏಕತೆಯ ಭರತವಾಕ್ಯವ ಹೇಳು
        ಹೇಳು ತಾಯಿ !
ಇನ್ನೇಳು ಭಾರತದ ದಿವ್ಯಲೀಲೆಯನು
        ಪೂರ್ಣಗೊಳಿಸು !
ಅದಕಾಗೆ ಕನ್ನಡ ಚೇತನವ ಜಾಗ್ರತೆಗೊಳಿಸು !
ಸತ್ಯಾಶ್ರಯರು ನಿನ್ನ ಮಕ್ಕಳೆಲ್ಲರು ತಾವು
ಸತ್ಯಪ್ರತಿಜ್ಞೆಯನು ಕೈಕೊಂಡುನಿಂತು
ಬೇಡುತಿಹರು ಏಳು ಏಳು ತಾಯಿ !
ಮುಂದೆಂದು ಒಂದಾಗಿ ಆಳುತಾಯಿ
ನಿನ್ನ ಋತಚಿತ್ ಪ್ರಕಾಶದಲಿ ಬೆಳಗು ತಾಯಿ !
ಶರಣೆಂಬೆ ಶರಣೆಂಬೆ ನಿನ್ನಡಿಗೆ
        ಶರಣುಶರಣಾರ್ಥಿ !

ಸಾವು ನೋವುಗಳು ಪ್ರಾಕೃತ ಜೀವನದಲ್ಲಿ ಯಾವ ಜೀವಿಯೂ ದಾಟಲಾರದೆ ಎಲ್ಲ ಜೀವಿಗಳೂ ಎಡಹುತ್ತಿರುವ ನೋಟುಗಲ್ಲುಗಳು. ಪೂರ್ಣತ್ವದಿಂದ ಪ್ರಾರಂಭಗೊಂಡು ಪೂರ್ಣತ್ವದ ಕಡೆಗೇ ಪರಿಪರಿಯಾಗಿ ಪರಿಣಾಮಗೊಳ್ಳುತ್ತ ಸಾಗಿರುವ ಪ್ರಕೃತಿ ಪರಮ ಪುರುಷೋತ್ತಮನ ದಿವ್ಯ ಲೀಲೆ. ಅಣೋರಣೀಯಾನ್ ಆಗಿ ಮಹತೋ ಮಹೀಯಾನ್ ಆಗಿ ಬ್ರಹ್ಮಾದಿ ಕೀಟಪರ್ಯಂತ ಆ ಸಚ್ಚಿದಾನಂದ ಶಿವಸ್ವರೂಪ ಸರ್ವಾಂತರ್ಯಾಮಿಯಾಗಿದೆ. ವ್ಯಷ್ಟಿಯಾಗಿ ಮೃತ್ಯುವಶವಾದರೂ ಸಮಷ್ಟ್ಯಾತ್ಮಕವಾಗಿ ಆ ಪರಾತ್ಪರಶಕ್ತಿ ಮೃತ್ಯುಂಜಯವಾದದ್ದು. ಸಚ್ಚಿದಾನಂದಾತ್ಮಕವಾದ ಅದರ ಆನಂದವನ್ನು ಅಳಿಸುವ, ಅದರ ಸದ್ರೂಪವನ್ನು ಸಾಯಿಸುವ, ಅದರ ಚಿದ್ರೂಪವನ್ನು ಛೇದಿಸುವ ಶಕ್ತಿ ಇನ್ನೊಂದಿಲ್ಲ. ಏಕೆಂದರೆ ಸಾವೂ ಸಾವೇ ಇಲ್ಲದ ದೇವ ದೇವನಾದ ಮಹಾದೇವನ ಸೃಷ್ಟಿಯ ಒಂದು ವಿಶಿಷ್ಟಾಂಶವೇ. ಸೃಷ್ಟಿ ಕಾಲಾಧೀನವಾದರೂ ಸೃಷ್ಟಿಕರ್ತನಾದ ಅವನು ಕಾಲಾತೀತನಾದ ಮಹಾಕಾಲ. ಆಗಮವಾದಿಗಳ ಸಾಂಖ್ಯಸಿದ್ಧಾಂತದ ಪ್ರಕಾರ ವಿಭಜಿತವಾದ ಮೂವತ್ತಾರು ತತ್ತ್ವಗಳಲ್ಲಿ ಕಲಾ ಮತ್ತು ಕಾಲ ಸೇರಿವೆ. ಮುಪ್ಪುಗೊಂಡದ್ದನ್ನುಅಳಿಸುವ ಕಾಲಕ್ಕೂ ಅಳಿದದ್ದನ್ನೇ ಬಳಸಿಕೊಂಡು ಅಳಿಯಲಾರದ್ದನ್ನು ಬೆಳೆಸುವ ಪ್ರಯತ್ನಶೀಲವಾದ ಕಲಾಕ್ಕೂ ಸೃಷ್ಟಿಯಲ್ಲಿ ವಿಶಿಷ್ಟಸಾಧಿನವಿದೆ.

ಸಾಯುವ ಜೀವಿಗೆ ನೋವೂ ನೋಯುವ ಜೀವಿಗೆ ಸಾವೂ ಗತ್ಯಂತರ. ನೋವೂ ಸಾವೂ ಐಹಿಕ ಜೀವನದಲ್ಲಿ, ಜೀವಿಯ ದೈಹಿಕ ಜೀವನದಲ್ಲಿ ಅನಿವಾರ್ಯ.

ಸಾವು ನೋವುಗಳ ಹಿಡಿತದಲ್ಲಿ ಸಿಕ್ಕಿರುವ ಈ ಮೈಯ್ಯನ್ನೇ ಮನೆ ಮಾಡಿಕೊಂಡಿರುವ ಆತ್ಮ ಅವಿನಾಶಿಯೆಂಬುದೇ ಆರ್ಷೇಯವಾದ. ಆತ್ಮದ ಅಮರತ್ವವನ್ನು ಒಪ್ಪಿಕೊಳ್ಳುವವರೆಗೂ ಸ್ವರ್ಗ ನರಕಗಳೂ, ಪಾಪ ಪುಣ್ಯಗಳೂ, ಬಂಧಮೋಕ್ಷಗಳೂ. ಆತ್ಮವೂ ದೇಹದಂತೆ ವಿನಾಶ್ಯವಾದದ್ದು ಎಂದು ಒಪ್ಪಿಕೊಂಡರೆ ಆಸ್ತಿಕವಾದಕ್ಕೆ ಅಸ್ತಿತ್ವವೇ ಇಲ್ಲ.

ಪ್ರಾಕೃತ ದೃಷ್ಟಿಯಿಂದ ಭವಿಯಾಗಿರುವ ಮಾನವ ಅಪ್ರಾಕೃತ ದೃಷ್ಟಿಯಿಂದ ಈಶ್ವರ ಭಕ್ತನಾದರೆ ಈಶ್ವರ ಶಕ್ತನಾಗುತ್ತಾನೆ. ಈಶ್ವರ ಭಕ್ತನಾಗಿ ಈಶ್ವರ ಶಕ್ತನಾದವನು ಈಶ್ವರನಂತೆ ಅಮರ. ಈಶ್ವರನ ಅಮರ ಶಕ್ತಿಯೇ ಸಾವಿತ್ರಿ.

ಸತ್ಯಸ್ವರೂಪಿಯಾದ ಈಶ್ವರನಿಗೆ ಸಾವಿಲ್ಲದಿರುವಂತೆ ಆ ಈಶ್ವರನ ಶರಣನಾದ ಸತ್ಯಾಶ್ರಯನೂ ಸಾವಿಲ್ಲದವನಾಗುತ್ತಾನೆ. ಕಲಾರೂಪಿಣಿಯಾದ, ಸಕಲ ಕಲಾಶೋಭಿತಳಾದ ಕನ್ನಡ ಮಹಾಮಾತೆಯೇ ಸಾವಿಲ್ಲದ ಸಾವಿತ್ರಿ! 'ಹಾಡಿದವನ ಕಾಪಾಡಲೆಂದು ಕೈಹೆತ್ತು ಎತ್ತಿದ' ಗಾಯತ್ರಿ!

ತನ್ನ ಲೀಲೆಗಾಗಿ ತಾನು ತನ್ನ ಏಕತ್ವದಿಂದ ಅನೇಕತ್ವಕ್ಕೆ ಬೆಳೆದ ಭಾರತ ಶಕ್ತಿ ಕಾಲಕ್ರಮೇಣದಲ್ಲಿ ತನ್ನ ಏಕತ್ವಕ್ಕೆ ಭಂಗ ತರುವಂತಾದ ಅನೇಕತ್ವವನ್ನು ಕಳೆದುಕೊಂಡು ತನ್ನ ಏಕತ್ವವನ್ನು ಮರಳಿ ಸಾಧಿಸಿಕೊಂಡು ಲೀಲೆಯನ್ನು ಪೂರ್ಣಗೊಳಿಸಬೇಕಾಗಿದೆ. ಆಕೆಯ ಲೀಲೆಯನ್ನು ಅರಿಯದ ಅಜ್ಞರು ಆಕೆಯ ಅನೇಕತ್ವದ ಏಕತ್ವವನ್ನೂ ಏಕತ್ವದ ಅನೇಕತ್ವವನ್ನೂ ಅಪಾರ್ಥಮಾಡಿಕೊಂಡು ಸ್ವಾರ್ಥಪ್ರಿಯರಾಗಿ ಅಪಮಾರ್ಗಕ್ಕಿಳಿದರು. ಅಂಥವರ ಕಾಲ ಹಿಂದಾಯಿತು. ಸತ್ಯ ಪ್ರತಿಜ್ಞೆಯನ್ನು ಕೈಕೊಂಡು ಸತ್ಯಾಶ್ರಯರಾಗಿ ನಿಂತ ಕನ್ನಡ ಸಾಧಕರು ಮುಂದೆ ಬಂದು ಕನ್ನಡ ರಾಜಕಾರಣಕ್ಕೆ ರಾಜರಾಜೇಶ್ವರಿಯ ಅನುಗ್ರಹವನ್ನು ಪಡೆದು ನಿಂತಿದ್ದಾರೆ. ಮುಕ್ತಾಯಗೊಂಡ ವಿಚ್ಛೇದ ನಾಟಕಕ್ಕೆ ಆ ನಾಟಕವನ್ನು ಆರಂಭಿಸಿದ ಸೂತ್ರಧಾರಳೇ ಭರತ ವಾಕ್ಯವನ್ನು ಹೇಳಿ ಮುಗಿಸಬೇಕಾಗಿದೆ. ಮುಗಿಯಿತು ಎಂದು ಆಕೆ ಹೇಳುವವರೆಗೂ ಮುಗಿದಿದ್ದರೂ ಅದು ಮುಗಿದಂತಲ್ಲ. ಆಕೆಯ ಲೀಲಾ ನಾಟಕಕ್ಕೆ ಆಕೆಯೇ ಸೂತ್ರಧಾರಿ; ಆಕೆಯೇ ಪಾತ್ರಚಾರಿ; ಆಕೆಯೇ ಭರತವಾಕ್ಯ ನಿರ್ವಚನಕಾರಿ! ಅನೇಕಾಂತವಾದ ಆಕೆಯ ಲೋಕಾಂತ ನಾಟಕಲೀಲೆ ಲೀಲಾವತಿಯಾದ ಆಕೆಯ ಏಕಾಂತವಾದ ಏಕಮೇವ ಅದ್ವಿತೀಯತೆಯನ್ನು ಸಾರುವ ಭಾರತದ ಭರತವಾಕ್ಯದಿಂದ ಮುಕ್ತಾಯಗೊಳ್ಳುತ್ತದೆ. ಈ ಭರತವಾಕ್ಯವನ್ನು ಹೇಳಬೇಕಾದಾಕೆ ಒಂದಾಗಿನಿಂತ ಕನ್ನಡ ಮಹಾಮಾತೆ. ಒಂದಾಗಿನಿಂತ ಕನ್ನಡ ನೆಲವನ್ನೂ ಕನ್ನಡ ಕುಲವನ್ನೂ ಆಳಬೇಕಾದಾಕೆಯೂ ಆಕೆಯೇ.

ಅರೆಮರೆ ಅರೆತೆರೆಯ ಮನೋಭೂಮಿಕೆಯಿಂದ ಪೂರ್ಣ ಪ್ರಜ್ಞಾತ್ವ, ಪೂರ್ಣ ಕರ್ತೃತ್ವ, ಪೂರ್ಣತ್ವಗಳ ಪರಿಪೂರ್ಣಸ್ಥಿತಿಯ ಭೂವಃತ್ವಕ್ಕೆ ಈ ಭೂಮಿ ಏರಬೇಕಾಗಿದೆ. ಋತಚಿತ್ ಪ್ರಜ್ಞಾ ಪ್ರಕಾಶವನ್ನು ತಮ್ಮ ಪೂರ್ಣಯೋಗ ಸಾಧನೆಯಿಂದ ನೆಲಕ್ಕೆ ತಂದು ನಿಲಿಸಿದ ಶ್ರೀಮಾತಾರವಿಂದರ ಕೃಪೆಯಿಂದ ಆ ದಿವ್ಯಕಾಂತಿಯಲ್ಲಿ ಆ ದಿವ್ಯ ಶಾಂತಿಯಲ್ಲಿ ಕನ್ನಡ ಮಹಾಮಾತೆ ಆಳಬೇಕು ಕನ್ನಡ ಮಕ್ಕಳು ಬಾಳಬೇಕು.

ಋತಚಿತ್ಪ್ರಕಾಶ ಪೂರ್ಣಳಾದ ಮಹಾಮಾತೆಯ ಶ್ರೀ ಚರಣಕೆ ಶರಣು ಶರಣಾರ್ಥಿ! ಆಕೆಯ ಶರಣರೇ ಮರಣವನ್ನು ಗೆದ್ದ ಮಹಂತರು!

"Only the supramental consciousness can reveal to the differing and conflicting forces of our nature their spiritual truth and harmonise their divergencies."

—*Sri Aurobindo*

"The Mother of all works through evil as well as good, and through temporary evil she brings about a better and lasting good".

—*Sri Aurobindo*

"This synthetic turn is not peculiar to the mystics or to a small literate class or to philosophic thinkers nourished on the thoughts, images, traditions and cultural symbols of the Purana and Tantra; for the things are only concrete representations of living figures of synthetic monism, the many sided unitarianism, the large cosmic universalism of the Vedic scriptures."

—*Sri Aurobindo*

ನಖದೀಧಿತಿ ಸಂಛನ್ನ ನಮಜ್ಜನ ತಮೋಗುಣಾ ।
ಪದದ್ವಯ ಪ್ರಭಾಜಾಲ ಪರಾಕೃತ ಸರೋರುಹಾ ॥ "

—**ಶ್ರೀ ಲಲಿತಾ ಸಹಸ್ರನಾಮ**

ರೇಖಾಚಿತ್ರಗಳ ಸೂಕ್ಷ್ಮಪರಿಚಯ

ಅರ್ಧನಾರೀಶ್ವರ :

ವಿಶ್ವವೆಲ್ಲವೂ ಶಿವಶಕ್ತಿಯರ ಸಚ್ಚಿದಾನಂದಲೀಲಾವಿಲಾಸ. ಸದ್ರೂಪಿಯೇ ಶಿವನು. ಚಿದ್ರೂಪಿಯೇ ಶಕ್ತಿ. ಶಿವಶಕ್ತಿಗಳ ಸಾಮರಸ್ಯದ ಫಲವಾದ ವಿಶ್ವವೇ ಆನಂದ.

ಪರಾಶಕ್ತಿ :

ಭಾರತಾಂತರ್ಗತಳಾದ ಪರಾಶಕ್ತಿಯು ಒಂದು ಕೈಯಲ್ಲಿ ಸಮಸ್ತ ಭೂಗೋಳವನ್ನು ಆಟದ ಚೆಂಡಿನಂತೆ ಹಿಡಿದು ನಿಂತಿದ್ದಾಳೆ. ಭೂಗೋಳದ ಗೋಳನ್ನು ಕಳೆಯುವ ಅಭಯವನ್ನು ನೀಡುತ್ತಿರುವಂತೆ ಆಕೆಯ ಅಭಯ ಹಸ್ತ ಸೂಚಿಸುತ್ತದೆ. ಮೇಲಿನ ಕೈಗಳೆರಡರಲ್ಲಿ ಪಾಶವನ್ನೂ ಪರಶುವನ್ನೂ ಧರಿಸಿದ್ದಾಳೆ. ಪಾಶವು ಬಂಧಕಾರಣ. ಪರಶುವು ಮೋಕ್ಷ ಹೇತು. ಜಗತ್ತಿನ ಬಂಧಮೋಕ್ಷಗಳೆರಡೂ ಆಕೆಯ ಲೀಲೆಯೇ. ಹಿನ್ನೆಲೆಯಲ್ಲಿ ಪುರುಷನು ಪುರುಷೋತ್ತಮನಾಗಿ ಪರಾಶಕ್ತಿಯ ಲೀಲೆಗೆ ಸಾಕ್ಷೀಭೂತನಾಗಿದ್ದಾನೆ. ಶಕ್ತಿಯು ಆಡುವಾಕೆ. ಶಿವನು ನೋಡುವಾತ.

ಭುವನೇಶ್ವರಿ :

ಪದ್ಮಾಸನಾಸೀನಳಾಗಿ ಭಗವತಿಯು ಕುಳಿತಿದ್ದಾಳೆ. ಅಭಯಹಸ್ತವನ್ನು ಚಿನ್ಮುದ್ರೆಯಲ್ಲಿ ಹಿಡಿದಿದ್ದಾಳೆ. ಸಚ್ಚಿದಾನಂದಾತ್ಮಕವಾದ ಲಿಂಗವನ್ನೂ ಧರಿಸಿದ್ದಾಳೆ. ಮೇಲಿನ ಕೈಗಳಲ್ಲಿ ಪರಶುವೂ ಪಾಶವೂ ಕಂಗೊಳಿಸುತ್ತಿವೆ. ಹಿನ್ನೆಲೆಯಲ್ಲಿ ವಿಜಯನಗರದ ವಿರೂಪಾಕ್ಷದೇವಾಲಯದ ಗೋಪುರವೂ, ಕನ್ನಡನಾಡಿನ ಭೂಪರಿಮಿತಿಯೂ ಎದ್ದು ಕಾಣುತ್ತಿವೆ. ಇಬ್ಬದಿಗಳಲ್ಲಿ ಗಣಪತಿಯ ವಿಗ್ರಹವೂ ವಿಠ್ಠಲರಾಯದೇವಸ್ಥಾನದ ಶಿಲಾರಥವೂ ಇವೆ. ಹಂಪೆಯಲ್ಲಿ ಗಣಪತಿಯ ವಿಗ್ರಹವು (ಸಾಸಿವೆಕಾಳ ಗಣಪತಿ ಮತ್ತು ಕಡಲೆ ಕಾಳು ಗಣಪತಿ) ಪೂರ್ಣವಾಗಿದೆ; ಶಿಲಾರಥವಾಗಲೀ ಆ ರಥವಿರುವ ವಿಠ್ಠಲ ರಾಯ ದೇವಸ್ಥಾನವಾಗಲಿ ಸಂಪೂರ್ಣವಾಗಿಲ್ಲ; ಅಪೂರ್ಣವಾಗಿ ಹಾಗೆಯೇ ಉಳಿದಿದೆ. ಅದನ್ನು ಮುಗಿಸುವುದರೊಳಗಾಗಿಯೇ ವಿಜಯನಗರದಲ್ಲಿ

ಅಂತಃಕಲಹಗಳೂ, ಹೊರಗಿನ ಕದನಗಳೂ ತಲೆಯೆತ್ತಿ, ಕನ್ನಡಿಗರೆಲ್ಲರೂ ತಲೆತಗ್ಗಿಸುವಂಥ ರಕ್ಕಸತಂಗಡಿಯ ಯುದ್ಧವಾಯಿತು. ತಲೆಗಳುರುಳಿದವು; ತಲೆಮಾರುಗಳೂ ಕಳೆದವು; ಅವರು ಆರಂಭಿಸಿದ್ದು ಹಾಗೆಯೇ ಆರಂಭದೆಸೆಯಲ್ಲಿಯೇ ಇದೆ.

ಈ ಪೂರ್ಣಾಪೂರ್ಣಗಳ ನಡುವೆ ಪರಿಪೂರ್ಣಳಾದ ಭುವನೇಶ್ವರಿಯು ಚಿತ್ರಿತಳಾಗಿದ್ದಾಳೆ. ಮಾನವನ ಸಂಕಲ್ಪ ವಿಕಲ್ಪಗಳಿಂದ ಅಪೂರ್ಣವಾದದ್ದು ಪೂರ್ಣವಾಗಬೇಕಾದದ್ದು ಆಕೆಯ ದಿವ್ಯ ಸಂಕಲ್ಪವನ್ನೇ ಕೂಡಿದ್ದು.

ಮಾಹೇಶ್ವರಿ :

ಮಹೇಶ್ವರ ರೂಪವಾದ ಶಿವಲಿಂಗದಲ್ಲಿ ಸುಖಾಸನಾಸೀನಳಾಗಿ ನೆಲೆಸಿರುವಂತೆ ಇಲ್ಲಿ ಮಾಹೇಶ್ವರಿಯು ಚಿತ್ರಿತಳಾಗಿದ್ದಾಳೆ. ಲಿಂಗಗರ್ಭಾವಿರ್ಭೂತೆಯಾದ ಆ ಮಹಾಶಕ್ತಿ ಲಿಂಗಧಾರಿಯೂ ಆಗಿದ್ದಾಳೆ. ವಿಶ್ವದ ಸೃಷ್ಟಿ, ಸ್ಥಿತಿ, ಲಯ, ತಿರೋಧಾನ, ಅನುಗ್ರಹಗಳೆಂಬ ಪಂಚಕೃತ್ಯಪರಾಯಣಳಾದ ಮಾಹೇಶ್ವರಶಕ್ತಿ ನೆಲೆಸಿರುವುದೂ ಮಹೇಶ್ವರನಲ್ಲಿಯೇ. ಅಂಥಾ ಮಹೇಶ್ವರನು ನೆಲೆಸಿರುವುದೂ ಮಾಹೇಶ್ವರಿಯಲ್ಲಿಯೇ.

ಮಹಾಕಾಳಿ :

ಇಲ್ಲಿ ಚಿತ್ರಿತವಾಗಿರುವ ಕಾಳಿಯು ರುದ್ರಕಾಳಿಯಲ್ಲ; ಭದ್ರಕಾಳಿ! ಮಹಿಷಾಸುರಾದಿ ರಾಕ್ಷಸರನ್ನು ಸಂಹರಿಸುವ ಕಾಲಕ್ಕೆ ಆಕೆಯು ತಳೆದಿದ್ದ ರೌದ್ರಭಾವವನ್ನು ಆಕೆಯೇ ಉಪಸಂಹರಿಸಿಕೊಂಡು ಶಾಂತಿಯಿಂದ ಕಾಂತಿಯಿಂದ ಪ್ರಸನ್ನಚಿತ್ತದಿಂದ ಅಭಯಹಸ್ತವನ್ನು ಹಿಡಿದು ಸಿಂಹಾರೂಢಳಾಗಿದ್ದಾಳೆ. ಬ್ರಹ್ಮಕಪಾಲವಿದೆ ಒಂದು ಕೈಯಲ್ಲಿ; ಒಂದು ಕೈಯಲ್ಲಿ ತ್ರಿಶೂಲವಿದೆ; ಒಂದು ಕೈಯಲ್ಲಿ ಪಾಶವಿದೆ. ತ್ರಿಪುಂಡ್ರಧಾರಿಯಾದ ಆಕೆಯ ಹಣೆಯ ಮೇಲೆ ಕಣ್ಣಿದೆ. ಜಟಾಮುಕುಟದಲ್ಲಿ ಸೋಮನೂ, ಸೋಮಶೇಖರನೂ ಇದ್ದಾರೆ. ಕಿರೀಟದ ಹಿನ್ನೆಲೆಯಲ್ಲಿ ಜ್ವಾಲಾ ಪ್ರಭಾವಳಿಯಿದೆ. ಆದರ ಹಿನ್ನೆಲೆಯಲ್ಲಿ ಭೇರುಂಡದ ಸಂಕೇತವು ಎದ್ದು ಕಾಣುತ್ತಿದೆ. ಅದು ಮೈಸೂರಿನ ಮತ್ತು ಮೈಸೂರನ್ನೇ ಮನೆಮಾಡಿಕೊಂಡು ನೆಲೆಸಿರುವ ಶ್ರೀ ಚಾಮುಂಡಿಯ ದಿವ್ಯಸಂಕೇತ. ಶಕ್ತಿಗೆ ಭೇರುಂಡೇ ಎನ್ನುವ ನಾಮವೂ ಇದೆ.

ಮಹಾಕಾಳಿಯ ವಾಹನವಾದ ಸಿಂಹವೂ, ಕಟಿಸೂತ್ರದಲ್ಲಿರುವ ರುಂಡ ಮಾಲೆಗಳೂ, ಕೈಯಲ್ಲಿ ಹಿಡಿದಿರುವ ಕಪಾಲವೂ ರುದ್ರಭಯಂಕರವಾಗಿದ್ದರೂ ಆಕೆಯ ಮಂದಸ್ಮಿತಹಾಸದಿಂದೊಪ್ಪುವ ವದನಮಂಡಲವೂ, ಆಕೆಯ ಕರುಣಾಕಟಾಕ್ಷವೂ ಆಕೆಯ ವರದಹಸ್ತವೂ ಶಂಕರ ಶಿವಂಕರವಾಗಿವೆ.

ಮಹಾಲಕ್ಷ್ಮಿ :

ಶ್ರೀಮನ್ಮಹಾವಿಷ್ಣುವಿನ ನಾಭೀಕಮಲದಲ್ಲಿ ಬ್ರಹ್ಮನಿದ್ದಾನೆ; ಅವನ ಹೃತ್ಕಮಲದಲ್ಲಿ ಮಹಾಲಕ್ಷ್ಮಿಯಿದ್ದಾಳೆ—ಈ ಕಲ್ಪನೆ ಎಷ್ಟು ಸಾಂಕೇತಿಕ ವಾದದ್ದು !

ಶ್ವೇತಪದ್ಮದಲ್ಲಿ ಪದ್ಮಾಸನಾಸೀನೆಯಾಗಿದ್ದಂತೆ ಮಹಾಲಕ್ಷ್ಮಿ ರೂಪಿತ ಳಾಗಿದ್ದಾಳೆ ಇಲ್ಲಿ. ಮುಂದಿನ ಎರಡು ಕೈಗಳಲ್ಲಿ ಶ್ರೀಫಲವನ್ನೂ ಕಮಲ ವನ್ನೂ ಹಿಡಿದಿದ್ದಾಳೆ. ಹಿಂದಿನ ಎರಡು ಕೈಗಗಲ್ಲಿ ಶಂಖಚಕ್ರಧಾರಿಣಿ ಯಾಗಿದ್ದಾಳೆ. ಮಣಿಮುಕುಟದಿಂದಲೂ ಸರ್ವಾಭರಣಗಳಿಂದಲೂ ಸಂಶೋ ಭಿತಳಾಗಿದ್ದಾಳೆ. ಸದ್ರೂಪಿಯಾದ ಈಶ್ವರನ ಸಂಪದ್ರೂಪಿಯಾದ ಶಕ್ತಿ ಯಾಕೆ. ಅಮರ್ತ್ಯ ಸೌಂದರ್ಯದ, ಅಮರ್ತ್ಯ ಸಂಪತ್ತಿನ ಅಮೃತ ರೂಪಿಣಿಯಾದ ಮಹಾಲಕ್ಷ್ಮಿಯ ಮುಂಗಡೆಯಲ್ಲಿ ಅಮೃತಕಲಶವಿದೆ.

ಮಹಾಸರಸ್ವತಿ :

ಮಹಾಲಕ್ಷ್ಮಿಯು ಭೌತಿಕ ಸಂಪದ್ರೂಪಿಯಾದರೆ ಮಹಾಸರಸ್ವತಿ ಬೌದ್ಧಿಕ ಸಂಪದ್ರೂಪಿ.

ವಿಕಸಿತ ಸಹಸ್ರದಳ ಪದ್ಮಪೀಠಸ್ಥಳಾದ ಭಗವತಿಯು ಅರ್ಧೋನ್ಮೀಲಿತ ಅರ್ಧನಿಮೀಲಿತ ದೃಷ್ಟಿಯುಳ್ಳವಳಾಗಿದ್ದಾಳೆ. ಜ್ಞಾನಜ್ಯೋತಿಯಾದ ಆಕೆಯೇ ಜ್ಞಾನಪ್ರದಾತೆ. ಆಕೆಯ ಕೈಯಲ್ಲಿರುವ ಪುಸ್ತಕವೂ ಜಪ ಮಾಲಿಕೆಯೂ ಮಾತು ಮತ್ತು ಮಂತ್ರಗಳ ಸಂಕೇತ. ಮಾತು ವಾಙ್ಮಯ ವಾದರೆ ಮಂತ್ರವು ಮನನೀಯ. ಮಂತ್ರವು ಪರಾವಾಗ್ರೂಪವಾದರೆ ಮಾತು ಪರಾವಾಕ್ಕಿನ ವೈಖರೀರೂಪ. ಹಿಂದಿನ ಕೈಗಳಲ್ಲಿ ಎರಡು ಕಲಶಗಳನು ಎತ್ತಿ ಹಿಡಿದಿದ್ದಾಳೆ ಶಾರದೆ. ಆ ಎರಡು ಕಲಶಗಳು ವಿದ್ಯಾವಿದ್ಯಗಳ ಸಂಕೇತ. ಮೃತ್ಯುವನ್ನು ದಾಟಲು ಅವಿದ್ಯೆಯೂ ಅಮೃತತ್ವವನ್ನು ಪಡೆಯಲು ವಿದ್ಯೆಯೂ ಆವಶ್ಯಕವೆಂಬ ಮಾತನ್ನು ಈಶಾವಾಸ್ಯಾದಿ ವೇದಾಂತಗ್ರಂಥಗಳು

ಸಾರುತ್ತಿವೆ. ಜಟಾಮುಕುಟಮಂಡಿತಳಾದ ಶಾರದೆಯ ಶ್ರೀಲಲಾಟವು ಮುಂಗುರುಳಿನಿಂದ ಮುದ್ದಾಗಿದೆ. ನೀಲಾಲಕ ಲಲಾಟಶೋಭಿಯಾದ ಆಕೆಯ ಭ್ರೂಮಧ್ಯವು ಅರ್ಧಚಂದ್ರಾಂಕಿತದಿಂದೊಪ್ಪುತ್ತಿದೆ. ಮಹಾಸರಸ್ವತಿಯ ಪದ್ಮಪೀಠದ ಅಡಿಯಲ್ಲಿ ಮೃಣಾಳನಾಳವನ್ನು ಚಂಚುವಿನಲ್ಲಿ ಹಿಡಿದಿರುವ ಹಂಸವಿದೆ. ಸರಸ್ವತಿಯ ವಾಹನ ಹಂಸವೇ ಹೊರತು ನವಿಲಲ್ಲ. ಭಾರತೀಯ ಚಿತ್ರಕಲೆಯ ಸನಾತನ ಸಂಕೇತಗಳ ಮತ್ತು ಆಧ್ಯಾತ್ಮಿಕ ನಿರ್ದೇಶಗಳ ಪೂರ್ಣಪರಿಚಯವಿಲ್ಲದಿರುವ ರವಿವರ್ಮನಿಂದ ಚಿತ್ರಿತವಾದ ಸರಸ್ವತಿಯ ಚಿತ್ರಗಳಲ್ಲಿ ಮಾತ್ರ ಗರಿಗೆದರಿಕೊಂಡು ನಿಂತಿರುವ ನವಿಲು ಸಿಕ್ಕುತ್ತದೆ. ಪುರಾತನ ಶಿಲ್ಪಗಳಲ್ಲಿಯೂ ಚಿತ್ರಗಳಲ್ಲಿಯೂ ಅದಿಲ್ಲ. ಹಂಸವೆನ್ನುವ ಜೀವಭಾವದಮೇಲೆ ಸೋಹಂ ಎನ್ನುವ ದೇವಭಾವ ಆರೂಢವಾಗಿದೆ. ಜೀವಭಾವವು ಅವಿದ್ಯಾರತವಾದರೆ ದೇವಭಾವವು ವಿದ್ಯಾರತವಾದದ್ದು. ಜೀವಿಯಾಗಿ ಅವತಾರವಾಗುವ ದೇವನಲ್ಲಿಯೂ, ದೇವನಾಗಿ ಉದ್ಧಾರ ವಾಗುವ ಜೀವಿಯಲ್ಲಿಯೂ ಅಂತರ್ಯಾಮಿಯಾಗಿರುವ ಶಕ್ತಿಯು ಆಕೆಯೇ. ಬ್ರಹ್ಮಾದಿಕೀಟಪರ್ಯಂತವಾಗಿ ನೆಲೆಗೊಂಡಿರುವ ಸರ್ವಜ್ಞಶಕ್ತಿಯು ಆ ಬ್ರಹ್ಮಾಣಿಯೇ. 'ಸರ್ವಜ್ಞ' ಶಬ್ದಕ್ಕೆ ಅರ್ಥ ಸರ್ವ ಜೀವಿಗಳಲ್ಲಿಯೂ ಜ್ಞಾನರೂಪದಿಂದಿರುವ ಶಕ್ತಿಯು !

ಮೂಕಾಂಬೆ :

ಪದ್ಮಾಸನಸ್ಥಿತಳಾಗಿ ಪ್ರಸನ್ನಭಾವದಿಂದ ಕುಳಿತಿದ್ದಾಳೆ ಶ್ರೀಮಾತೆ ಸರ್ವಾಲಂಕರಣ ಸಂಶೋಭಿತೆಯಾಗಿ. ಸುಖಪ್ರದವಾದ ವರದಹಸ್ತವನ್ನೂ, ಅಭಯಪ್ರದವಾದ ಅಭಯಹಸ್ತವನ್ನೂ ಸೂಚಿಸುತ್ತಾ ಶಂಖಚಕ್ರಧಾರಿಣಿ ಯಾಗಿರುವಂತೆ ಇಲ್ಲಿ ಮೂಕಾಂಬೆ ಚಿತ್ರಿತಳಾಗಿದ್ದಾಳೆ.

ಮುಂದಿರುವ ಷಟ್ಕೋಣಮಧ್ಯದ ಮಾತೃಕೇಂದ್ರದಲ್ಲಿ ಬಿಂದುರೂಪಿ ಯಾದ ಲಿಂಗವಿದೆ.

ರತ್ನಗರ್ಭೆ :

ರತ್ನಗರ್ಭಳಾದ ವಸುಂಧರೆಯು ಭೂಗೋಲದ ಮೇಲೆ ನಿಂತಿದ್ದಾಳೆ. ಈಕೆ ಕನ್ನಡದ ಭೂಶಕ್ತಿ. ಬಲಗೈಯಿಂದ ಅಭಯವನ್ನು ನೀಡುತ್ತಾ

ಎಡಗೈಯಲ್ಲಿ ಕಮಲಕುಟ್ಮಲವೊಂದನ್ನು ಹಿಡಿದು ನಿಂತಿದ್ದಾಳೆ. ಆಕೆಯ ಸುಭಗವೂ ಸುಂದರವೂ ಆದ ನಿಲುವಿನಲ್ಲಿ ಮತ್ತು ಚೆಲುವಿನಲ್ಲಿ ತಾಳ್ಮೆ ಮೂರ್ತಿವೆತ್ತಂತಿವೆ. ಎಲ್ಲರ ಭಾರವನ್ನೂ ಎಲ್ಲದರ ಭಾರವನ್ನೂ ವಹಿಸಿ ನಿಂತಿರುವ ಸಹಿಸಿ ನಿಂತಿರುವ ಮಾತೃಮೂರ್ತಿಯ ಶ್ರೀರೂಪವಿದು.

ಶ್ರೀ ದುರ್ಗೆ :

ದುರ್ಗಮವಾದ ದಾರಿಯ ಉದ್ದಕ್ಕೂ ಮಾರ್ಗಸ್ಥನಾದವನನ್ನು ಹೆದರಿಸುವಂತೆ ದುರ್ದಮನೀಯವಾದ ದುಷ್ಟಶಕ್ತಿಗಳು ಬಾಯ್ದೆರೆದು ನುಂಗುವಂತೆ ನಿಂತಿವೆ. ಈ ಉತ್ಕ್ರಾಂತಿಪಥದ ಕಷ್ಟಗಳನ್ನೆಲ್ಲಾ ಕಡೆ ಹಾಯ್ದುಕೊಂಡು ಸಾಧಕನಾದ ಯಾತ್ರಾರ್ಥಿಯು ಮುಂದೆ ನುಗ್ಗಿ ನಡೆದಿದ್ದಾನೆ. ಭಯಂಕರ ಬೆಂಕಿಯ ಜ್ವಾಲೆಯು ಇಬ್ಬದಿಗಳಲ್ಲಿ ಉರಿಯುತ್ತಿದೆ. ಈ ಅಗ್ನಿಪಥವನ್ನು ನಡೆದು ಬಂದಿರುವ ಸಾಧಕನು ಮಾರ್ಗಮಧ್ಯದಲ್ಲಿದ್ದಾನೆ. ಹಿಂದೆ ಎಷ್ಟೋ ದಾರಿ ನಡೆದಿದ್ದಾನೆ. ಆದರೂ ಮುಂದೆ ಇನ್ನೂ ಎಷ್ಟೋ ದಾರಿ ನಡೆಯುವದಿದೆ. ದೃಢಸಂಕಲ್ಪದಿಂದ ನಡೆಯುತ್ತಿರುವ ಅವನಿಗೆ ಕಾಣುತ್ತಿರುವುದು ಮಾರ್ಗದ ಕಷ್ಟಗಳಲ್ಲ ; ತನ್ನನ್ನು 'ಬಾ ! ಬಾ! ಇನ್ನೂ ಮುಂದೆ ಬಾ ! ನಾನಿದ್ದೇನೆ ಏನೂ ಭಯವಿಲ್ಲ ಬಾ !' ಎಂದು ಕರೆಯುತ್ತಿರುವ ಶ್ರೀ ದುರ್ಗೆಯ ದಿವ್ಯದರ್ಶನ ! ಒಳಗಣ್ಣಿಗೆ ಕಾಣುವ ಆ ಮಾತೃಮೂರ್ತಿಯ ಕೃಪಾಕಟಾಕ್ಷವನ್ನೇ ನಂಬಿಕೊಂಡು ಹೊರಗಿನ ದುರ್ಗಮ ಪಥವನ್ನು ತುಳಿದು ತನ್ನ ವಿಜಯಕ್ಕೆ ಅಡ್ಡಗಟ್ಟಿ ನಿಂತಿರುವ ದುರ್ಗಗಳನ್ನು ಗೆದ್ದು ನಡೆದಿದ್ದಾನೆ ಕನ್ನಡದ ವೀರಸಾಧಕ. ಕೆಳಗೆ ಕಷ್ಟಗಳಿವೆಯಾದರೂ ಮೇಲೆ ನೋಡಿದಾಗ ಅವುಗಳನ್ನು ಗೆಲ್ಲುವ ಆತ್ಮಬಲವನ್ನು ನೀಡುವ ತಾಯಿ ತಾನೇತಾನಾಗಿ ನಿಂತಿದ್ದಾಳೆ. ಅಧೋಗತಿಯನ್ನು ದಾಟಬೇಕೆಂದರೆ ಊರ್ಧ್ವದೃಷ್ಟಿ ಅಗತ್ಯ.

ಇಂದ್ರಾಣಿ :

ಉನ್ನತಪೀಠದಲ್ಲಿ ಸುಖಾಸನಾಸೀನಳಾಗಿದ್ದಾಳೆ. ಸರ್ವಾಲಂಕರಣಭೂಷಿತೆಯಾಗಿದ್ದಾಳೆ. ತನ್ನ ಶ್ರೀ ಹಸ್ತದಿಂದ ಅಭಯವನ್ನು ನೀಡುತ್ತಾ ಎಡಗೈಯಲ್ಲಿ ಕಲಶವನ್ನು ಹಿಡಿದಿದ್ದಾಳೆ. ಹಿಂದಿನ ಬಲಗೈಯಲ್ಲಿ ಶಿವಲಿಂಗವೂ

ಜಪಮಾಲೆಯೂ ಇವೆ. ಎಡಗೈಯಲ್ಲಿ ತ್ರಿಶೂಲವಿದೆ. ನಮ್ಮ ಬಹಿರಂತರ ಇಂದ್ರಿಯಗಳೆಲ್ಲವೂ ಈ ಇಂದ್ರಾಣಿಯ ಕರುಣಾಪೂರ್ಣವಾಗಬೇಕು. ಕನ್ನಡನಾಡಿನ ಐಶ್ವರ್ಯರೂಪಿಯಾದ ಈಕೆಯ ಹಿನ್ನೆಲೆಯಾಗಿ ಕನ್ನಡ ನಾಡಿನ ರೇಖಾಚಿತ್ರವಿದೆ.

ವಾರಾಹಿ :

ಉಲ್ಲೋಲಕಲ್ಲೋಲವಾದ ನೀರಧಿಯ ಗರ್ಭದಿಂದ ವಾರಾಹಿ ನೆಲವನ್ನು ತನ್ನ ಕೋರೆಯಮೇಲೆ ಎತ್ತಿ ನಿಲ್ಲಿಸಿದ್ದಾಳೆ. ವಿಶ್ವದ ಅನಂತ ಗ್ರಹಗಳಲ್ಲಿ, ಗೋಳಗಳಲ್ಲಿ ಭೂಮಿಯು ನಿಂತಿರುವುದು ಆಕೆಯ ದಿವ್ಯಬಲದ ಮೇಲೆಯೇ. ಭೂಗೋಳದಲ್ಲಿ ಭಾರತವೂ, ಭಾರತದಲ್ಲಿ ಕರ್ನಾಟಕವೂ ಎದ್ದು ಕಾಣುತ್ತಿವೆ. ವಾರಾಹಿಯ ಕಣ್ಣಿನಲ್ಲಿ ಮಿಂಚುವ ಕರುಣೆಯು ಮನೋಜ್ಞವಾಗಿದೆ.

ಅದಿತಿ :

ದೇವಮಾತೆಯಾದ ಅದಿತಿಯು ಹಸನ್ಮುಖಿಯಾಗಿ ಪ್ರಸನ್ನಭಾವದಿಂದ ತನ್ನ ಕಲ್ಯಾಣಕಾರ್ಯಕ್ಕೆ ಕಂಕಣಕಟ್ಟಿ ನಿಂತಿರುವ ಕನ್ನಡಿಗನನ್ನು ಕೈಯೆತ್ತಿ ಹರಸುತ್ತಿದ್ದಾಳೆ. ಕನ್ನಡಿಗನ ಆತ್ಮಜ್ಯೋತಿಯ ನಿದರ್ಶನವಾಗಿ ಚಿತ್ರದ ಮುಂಬದಿಯಲ್ಲಿ ಅವಿರಳ ಜ್ಯೋತಿ ಅಖಂಡವಾಗಿ ಉರಿಯುತ್ತಿದೆ. ಶ್ರೀಅರವಿಂದರು ತಮ್ಮವೇದ ಭಾಷ್ಯದಲ್ಲಿ ಹೇಳುವಂತೆ ಅದಿತಿಯೆಂದರೆ ಅದ್ವಯ ಅಥವಾ ನಿರ್ದ್ವಂದ್ವ ಮನೋಭಾವ; ದಿತಿಯೆಂದರೆ ದ್ವೈತ ಮನೋಭಾವ. ದ್ವಂದ್ವಾತೀತ ಮನೋಭಾವ ಉಳ್ಳವರೇ ಅದಿತಿಯ ಸಂತಾನವಾದ ಆದಿತ್ಯರು. ದ್ವಂದ್ವ ಮನೋಭಾವವನ್ನು ಉಳ್ಳವರೇ ದಿತಿಯ ಸಂತಾನವಾದ ದೈತ್ಯರು. ಕನ್ನಡ ಸಾಧಕನು ಆದಿತ್ಯ ಸಂತತಿಗೆ ಸೇರಿದ ದೇವಮಾನವ!

ಕೌಮಾರಿ :

ಕುತ್ಸಿತವನ್ನು ಅಳಿಯುವ ಶಕ್ತಿಯೇ ಕೌಮಾರಿ. ನಿತ್ಯಯವ್ವನೆಯಾದ ಆಕೆ ಸತ್ವಶೀಲಳೂ ಆಗಿದ್ದಾಳೆ. ಕೆಟ್ಟದ್ದನ್ನು ದಮನಗೈಯುವ ತ್ರಿಶೂಲವೂ ಒಳ್ಳೆಯದನ್ನು ಉಳಿಸುವೆನೆಂಬ ಬೆಳೆಸುವೆನೆಂಬ ಅಭಯಹಸ್ತವೂ ಸಾಂಕೇತಿಕವಾಗಿವೆ. ಪ್ರಭಾವಲಯಕ್ಕೆ ಪ್ರತಿಯಾಗಿ ಮತ್ತು ಪ್ರತ್ಯೇಕವಾಗಿ

ಶ್ರೀ ಅರವಿಂದಾಶ್ರಮದ ಶ್ರೀ ಮಾತೆಯ ಆಧ್ಯಾತ್ಮಿಕ ಸಂಕೇತವನ್ನೇ ಬಳಸಲಾಗಿದೆ.

ಕುಂಡಲಿನೀ (ಯೋಗಶಕ್ತಿ) :

ಮೂಲಾಧಾರಾದಿ ಸಹಸ್ರಾರ ಪರ್ಯಂತವಾಗಿರುವ ಷಟ್ಚಕ್ರಗಳನ್ನು ಭೇದಿಸಿಕೊಂಡು ಮುನ್ನಡೆದು ಶಿವಜೀವೈಕ್ಯವನ್ನು ಸಾಧಿಸುವುದು ಈ ಕುಂಡಲಿನೀ ನಾಮಕ ಯೋಗಶಕ್ತಿಯೇ. ಕುಂಡಲಿನೀ ಶಕ್ತಿಯ ಊರ್ಧ್ವಗಮನವನ್ನು ಮಾತ್ರವೇ ಪುರಾತನ ಯೋಗಪದ್ಧತಿಗಳು ಹೇಳುತ್ತಿವೆ. ಅದರ ನಿರ್ಗಮನವನ್ನೂ ಸಾಧಿಸಿ ಸಹಸ್ರಾರದಲ್ಲಿರುವ ಸಚ್ಚಿದಾನಂದಾನುಭೂತಿಯನ್ನು ಪೃಥ್ವೀಚಕ್ರ ಪರ್ಯಂತ ತಂದಿಳಿಸಬೇಕಾದದ್ದು ಪೂರ್ಣ ಯೋಗಸಾಧಕನಿಗೆ ಆವಶ್ಯಕವೆಂಬ ಮಾತನ್ನು ಶ್ರೀ ಮಾತಾರವಿಂದರು ಹೇಳುತ್ತಾರೆ. ಅದನ್ನು ಅನುಸರಿಸಿಯೇ ಕುಂಡಲಿನೀ ಶಕ್ತಿಯ ಊರ್ಧ್ವ ಮತ್ತು ಅಧೋಗಮನಗಳೆರಡನ್ನೂ ಇಲ್ಲಿ ಚಿತ್ರಿಸಲಾಗಿದೆ. ಕುಂಡಲಿನೀ ಶಕ್ತಿ ದೇಹದಲ್ಲಿರುವಂತೆ ದೇಶದಲ್ಲಿಯೂ ಇದೆ. ಕನ್ನಡ ದೇಶಾಂತರ್ಗತವಾದ ಮತ್ತು ಕನ್ನಡಿಗನ ದೇಹಾಂತರ್ಗತವಾದ ಕುಂಡಲಿನಿಯ ಕ್ರತುಶಕ್ತಿಯನ್ನು ಇಲ್ಲಿ ಚಿತ್ರಿಸಲಾಗಿದೆ.

ತ್ರಿಪುರಸುಂದರಿ :

ಕನ್ನಡ ನಾಡಿನಲ್ಲಿ ಶ್ರೀಚಕ್ರವನ್ನು ಚಿತ್ರಿಸಲಾಗಿದೆ. ಶ್ರೀ ಚಕ್ರವು ಪಂಚಬ್ರಹ್ಮಾಸನಾಸೀನಳಾದ ಶ್ರೀಮತ್ತ್ರಿಪುರಸುಂದರಿಯ ಯಂತ್ರರೂಪ. ಅನೇಕಾನೇಕ ಶಕ್ತಿ ಪೀಠಗಳಿಂದ ಶೋಭಿತವಾದ ಈ ನಾಡು ಶ್ರೀ ಚಕ್ರಾಧಿನಾಯಕಿಯಾದ ಪರಮೇಶ್ವರಿಯ ಆವಾಸಸ್ಥಾನ.

ಸಾವಿತ್ರಿ :

ಪರಾಶಕ್ತಿಯ ಚಿತ್ರಕ್ಕೂ ಈ ಸಾವಿತ್ರಿಯ ಚಿತ್ರಕ್ಕೂ ಪರಸ್ಪರ ಸಂಬಂಧವಿದೆ. ಪರಮಪುರುಷನ ದಿವ್ಯಕಾರ್ಯಕ್ಕಾಗಿಯೇ ಕೆಳಗಿಳಿದು ಬಂದು ಭಾರತದಲ್ಲಿ ಅವತಾರಮಾಡಿದ ಪರಾಶಕ್ತಿಯು ತನ್ನ ಈಶ್ವರ ಕಾರ್ಯವನ್ನು ನೆರವೇರಿಸಿ ಪರಮಪುರುಷನೊಡನೆ ಒಂದಾಗುತ್ತಾಳೆ. ಈ ಚಿತ್ರದಲ್ಲಿ ಪ್ರಕೃತಿ ಪುರುಷರ ದ್ವಿವಿಧ ರೂಪಗಳನ್ನು ಒಮ್ಮುಖವಾಗಿ ಚಿತ್ರಿಸುವ ಜಾಣ್ಮೆ

ಅಮೋಘವಾಗಿದೆ! ಅಭಿನಂದನೀಯವಾಗಿದೆ! ಯಾವ ಆಧ್ಯಾತ್ಮಿಕವಾದ ಅತಿಮಾನಸ ದಿವ್ಯಚೇತನವನ್ನು ಭಾರತದಲ್ಲಿ ತನ್ಮೂಲಕ ಯಾವಜ್ಜಗತ್ತಿನಲ್ಲಿ ನೆಲೆಗೊಳಿಸಲು ಪರಾಶಕ್ತಿಯು ಶ್ರಮಿಸಿದಳೋ ಆ ಸಿದ್ಧಿಯು ಭಾರತೋರ್ವಿಯಲ್ಲಿ ಸಾಕ್ಷಾತ್ಕರಿಸಿದೆ. ಆ ಅತಿಮಾನಸ ದಿವ್ಯಚೇತನವು ಭಾರತದ ಮೂಲಕ ಯಾವದ್ವಿಶ್ವವನ್ನೂ ಹಬ್ಬಿಕೊಳ್ಳಬೇಕು. ಷೋಡಶದಳಗಳ ಸಂಕೇತವಿರುವ ಈ ಷೋಡಶಿಯ ಹಿನ್ನೆಲೆಯಲ್ಲಿ ತ್ರಿಶೂಲವಿದೆ. ಅದು ಪರಾಶಕ್ತಿಯ ಪ್ರಭುಶಕ್ತಿಗೆ ಸಂಕೇತ. ಅದಕ್ಕಿರುವ ಡಮರು ಭಾರತದ ಜಯಡಿಂಡಮದ ಸಂಕೇತ.

THE EASTERN PRESS, BANGALORE-2